ಶ್ರೀ ಹೆಚ್. ಎಸ್. ಸಿದ್ದಪ್ಪ.—ನಮ್ಮ ಜೀವಕ್ಕೆ ತೊಂದರೆ ಬಂದಿರುವ ಪ್ರಶ್ನೆಯೊಂದನ್ನು ಗಮನಕ್ಕೆ ತರಬೇಕಾಗಿದೆ. ತಾವು ಬಾರಿಸುವ ಗಂಟೆ ಬಗ್ಗೆ ನಿನ್ನೆ ಲಾಂಜಿನಲ್ಲಿ ಸದಸ್ಯರು ವಿಚಾರ ಮಾಡುತ್ತಿದ್ದರು. ತಾವು ಗಂಟೆಯನ್ನು ಬಾರಿಸಿದರೆ ಸದಸ್ಯರಿಗೆ ಬಹಳ ಭಯವಾಗುವುದು ಎದೆ ಒಡೆದು ಹೋಗುವುದು. ಅದಕ್ಕಾಗಿ ಗಂಟೆ ಬಾರಿಸದೆ ಬೇರೆ ಕ್ರಮ ಅನುಸರಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಇದಕ್ಕೆ ಉದಾಹರಣೆ ಹಿಂದಿನ ಸಭೆಯಲ್ಲಿ ಶ್ರೀ ಗೋಪಾಲಗೌಡರಿದ್ದರು, ಅವರು ಮಾತನಾಡುವಾಗ ಹಿಂದಿನ ಅಧ್ಯಕ್ಷರಾದ ಶ್ರೀ ಬಾಳಿಗಾರವರು ಎರಡು ಮೂರು ಸಲ ಗಂಟೆ ಬಾರಿಸುತ್ತಿದ್ದುದರಿಂದ ಗೋಪಾಲಗೌಡರು ನರ್ವಸ್ ಆಗುತ್ತಿದ್ದರು. ಹೀಗಾಗಿ ಅವರು ಕಾಯಿಲೆ ಬಿದ್ದು ಸತ್ತು ಹೋದರು. ಈ ಭಯ ನಮಗಿದೆ. ಆದುದರಿಂದ ತಮ್ಮ ಬಳಿ ಇರುವ ದೊಡ್ಡ ಗಂಟೆ ಬಾರಿಸಿದಾಗ ಎಲೆಕ್ಟ್ರಿಕ್ ಷಾಕ್ ಆದ ಹಾಗಾಗಿ ಎದೆಯೊಡೆಯುವುದು. ಇದನ್ನು ಪುಟ್ಟಸ್ವಾಮಯ್ಯನವರು ಮುಂತಾದವರು ಪ್ರಸ್ತಾಪ ಮಾಡಿ ಹೇಳುತ್ತಿದ್ದರು, ಅದಕ್ಕಾಗಿ ಪ್ರಾರ್ಥನೆ ಮಾಡುತ್ತೇನೆ, ಗಂಟೆ ಹೊಡೆಯುವುದನ್ನು ಬಿಟ್ಟು ಸುಮ್ಮನೆ ಕುಳಿತುಕೊಳ್ಳಿ ಎಂದರೆ ಸಾಕು, ಎರಡು ಸಲ ಹಾಗೆ ಹೇಳಿ ಅಲ್ಲಿಗೂ ಕುಳಿತುಕೊಳ್ಳದಿದ್ದರೆ ಗಂಟೆ ಬಾರಿಸಿ ಎಂದು ಪ್ರಾರ್ಥನೆ ಮಾಡುತ್ತೇನೆ.

ಅಧ್ಯಕ್ಷರು.—ತಮಗೆ ಹೇಳಿ ಹೇಳಿ ನನಗೇ ಹಾರ್ಟ್ ಅಟ್ಯಾಕ್ ಆಗುತ್ತದೆ. ಒಂದು ಸಲ ಹೇಳಿದರೆ ಕುಳಿತುಕೊಂಡರೆ ಸರಿ. ಹಾಗೆ ಮಾಡಿದರೆ ಗಂಟೆ ಹೊಡೆಯುವುದಿಲ್ಲ.

Sri B. B. SAYANAK.—Madam Speaker, I am very sorry to bring to your notice that my Call Attention Notice, which was given 3 days back, has not come up. Every day 3 or 4 villages are being submerged on the banks of the Malaprabha river. Why not the Chair pull up the Minister concerned to make a statement? The Deputy Commissioner of the District is visiting the spot every day.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ವಿಷಯ ತಿಳಿದು ಹೇಳಬಹುದು. ಮಾನ್ಯ ಸದಸ್ಯರು ಈಗ ತಾನೇ ತಿಳಿಸಿರುವುದರಿಂದ ಈಗ ಏನನ್ನು ಹೇಳುವುದಕ್ಕೆ ಸಾಧ್ಯವಿಲ್ಲ.

Revised Budget Estimates for 1972-73—Demands for Grants [Demand Nos. 2, 7, 8, 33, 42]

Sri N. HUTCHAMASTHY GOWDA (Minister for Revenue).—

Sir, on the recommendation of the Governor, I beg to move :

> "That a sum not exceeding Rs. 4,84,95,000 inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of Demand No. 2, 'Land Revenue'".

MADAM SPEAKER.—Motion moved :

> "That a sum not exceeding Rs. 4,84,95,000 inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of Demand No. 2, 'Land 'Revenue'".

Demand Nos. 7, 8, 33 and 42 are also deemed to have been moved and all the demands are before the House for discussion.

Before the hon. Leader of the Opposition offers his remarks on the demands, I would like to know from the Hon. Minister for revenue how much time does he require to reply to the debate.

10-30 A.M.

Sri N. HUTCHAMASTHY GOWDA.—I would require about 1½ hours for replying to the debate.

ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ).—ಮಾನ್ಯ ಸಭಾಧ್ಯಕ್ಷಿಣಿಯವರೇ, ನಮ್ಮ ಮುಂದೆ ಇಟ್ಟಿರತಕ್ಕ ಸ್ಟ್ಯಾಂಪ್, ರೆವಿನ್ಯೂ ಮತ್ತು ಇನ್ನಿತರ ಹಲವಾರು ಬೇಡಿಕೆಗಳ ಬಗ್ಗೆ ಚರ್ಚೆ ಮಾಡತಕ್ಕ ಕಾಲದಲ್ಲಿ......

ಅಧ್ಯಕ್ಷರು.—ಮಂತ್ರಿಗಳ ರಿಪ್ಲೈಗೆ ಎಷ್ಟು ಹೊತ್ತು ಬೇಕು, ಒಂದು ಗಂಟೆಗೆ ಇದು ಓಟ್ ಆಗಬೇಕು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರು ಯಾವ ಯಾವ ವಿಷಯ ಚರ್ಚೆ ಮಾಡುತ್ತಾರೆ ಅದರ ಮೇಲೆ ಹೋಗುತ್ತದೆ. ಕಡೇ ಪಕ್ಷ ನನಗೆ ಒಂದೂವರೆ ಗಂಟೆ ಬೇಕಾಗುತ್ತದೆ.

Sri M. MALLAPPA (Birur).—The Hon'ble Minister may reply on Monday.

ಶ್ರೀ ಎಚ್. ಡಿ. ದೇವೇಗೌಡ.—ಯಾವುದೇ ಡಿಮಾಂಡನ್ನು ಅಗಲಿ ಈ ಸಭೆಯಲ್ಲಿ ಚರ್ಚೆ ಮಾಡುವುದಕ್ಕೆ ನಮಗೆ ಅವಕಾಶ ಮಾಡಿಕೊಡುತ್ತೇವೆ ಎಂದು ಕಾಂಗ್ರೆಸ್ ಪಕ್ಷದಿಂದ ನಾಯಕರು ಮತ್ತು ವಿಪ್ ಆಶ್ವಾಸನೆಯನ್ನು ಕೊಟ್ಟರೆ ತಾವು ಹೇಗೆ ಬೇಕಾದರೂ ಅಡ್ಜಸ್ಟ್ ಮಾಡಿಕೊಳ್ಳಿ. ನಾನು ತಮ್ಮ ಜೊತೆಯಲ್ಲಿ ಸಹಕರಿಸುವುದಕ್ಕೆ ತಯಾರು ಇದ್ದೇನೆ.

ಪ್ರಥಮತಃ ರೆವಿನ್ಯೂ ಬಗ್ಗೆ ಪ್ರಸ್ತಾಪ ಮಾಡಬೇಕು ಎನ್ನುವುದು ನನ್ನ ಇಚ್ಛೆ. ಈ ಭೂಕಂದಾಯದ ಬಗ್ಗೆ ಹಲವಾರು ಸಲ ಹಿಂದಿನ ಸರಕಾರ ತನ್ನ ಧೋರಣೆಯನ್ನು ಘೋಷಣೆ ಮಾಡಿದೆ. 1967ರ ಚುನಾವಣೆ ಕಾಲದಲ್ಲಿ ಒಂದು ಧೋರಣೆಯನ್ನು ಘೋಷಣೆ ಮಾಡಿದರು. ಆ ಮೇಲೆ ಮಂತ್ರಿಮಂಡಲ ಬಿದ್ದು ಹೋಗುವುದಕ್ಕೆ ಮುಂಚೆ ಒಂದು ನಿರ್ಣಯ ತೆಗೆದುಕೊಂಡು 10 ಎಕರೆಗೆ ಒಳಪಟ್ಟ ಜಮೀನುಗಳಿಗೆ ಕಂದಾಯ ರದ್ದು ಮಾಡಿದ್ದೇವೆಂದು ಹೇಳಿದರು. ತಾವು ಹಿಂದಿನ ಸರ್ಕಾರದ ನಿರ್ಣಯ ಏನು ಇತ್ತು ಅದನ್ನು ರಾಜಕೀಯಸ್ಟಂಟ್ ಎಂದು ಹಲವಾರು ಜನರು ಹೇಳಿದರು. ಈ ಪ್ರಶ್ನೆ ಮುಖೇನ ಈ ವಿಷಯವನ್ನು ಚರ್ಚೆ ಮಾಡುವುದಕ್ಕೆ ಇಷ್ಟ ಪಟ್ಟಿದ್ದೆ. ಆರ್ಥಿಕ ಮಂತ್ರಿಗಳು ಈ ಸಭೆಯಲ್ಲಿ ಚರ್ಚೆಗೆ ಉತ್ತರ ಕೊಡತಕ್ಕ ಕಾಲದಲ್ಲಿ ಹಿಂದಿನ ಸರಕಾರ ತೆಗೆದುಕೊಂಡಿರುವ ನಿರ್ಣಯ ಚುನಾವಣೆ ಕಾಲದಲ್ಲಿ ಮಾಡಿದ ಪ್ರಚಾರ ಎಂದು ಹೇಳಿದರು. ಆದಾದ ಮೇಲೆ ಇದಕ್ಕೆ ಕಾಂಪ್ರಹೆನ್ಸಿವ್ ಡ್ರಾಫ್ಟ್ ಮೆಜರ್ಸ್ ಮಾಡತಕ್ಕವರು ಇದ್ದಾರೆ. ಲ್ಯಾಂಡ್ ರೆವಿನ್ಯೂ ಬಗ್ಗೆ ಭೂತಲಿಂಗಂ ಕಮಿಟಿಯವರು ಇದರ ಬಗ್ಗೆ ವರದಿ ಕೊಟ್ಟ ಮೇಲೆ ಪರಿಶೀಲನೆ ಮಾಡುತ್ತೇವೆ ಎಂದು ಇಂಟರಿಂ ಬಜೆಟ್‌ನ್ನು ಈ ಸಭೆಗೆ ಮಂಡಿಸಿದ ಕಾಲದಲ್ಲಿ ಆರ್ಥಿಕ ಸಚಿವರು ಹೇಳಿದ್ದಾರೆ. ಇದರ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಮಾನ್ಯ ಕಂದಾಯ ಮಂತ್ರಿಗಳು ಈ ಸಭೆಯಲ್ಲಿ 67 ರಿಂದ 69 ರವರೆಗೆ ಹಲವಾರು ಸಾರಿ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಅವರು ಮಾಡಿರುವ ಭಾಷಣವನ್ನು ವ್ಯಾಖ್ಯಾನ ಮಾಡುವುದಾದರೆ ಭೂಕಂದಾಯ ರದ್ದು ಮಾಡುವ ಬಗ್ಗೆ ಅವರ ಅಭಿಪ್ರಾಯ ಇತ್ತು ಎನ್ನುವುದು ಇದರಲ್ಲಿ ವ್ಯಕ್ತವಾಗುತ್ತದೆ. ಇದರ ಜೊತೆಗೆ ರಾಜ್ಯದ ಆಡಳಿತ ಸೂತ್ರವನ್ನು ಹಿಡಿದಿರತಕ್ಕ ದೇವರಾಜ ಅರಸ್‌ರವರು 1970 ಮಾರ್ಚಿ 18ನೇ ತಾರೀಖು ಈ ಸಭೆಗೆ ಹೇಳಿರುವ ವಿಷಯ ಇಲ್ಲಿಯೇ ವರದಿಯಾಗಿದೆ. ಅವರು ಹೇಳಿರತಕ್ಕದ್ದನ್ನು ಸಭೆಯ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಉತ್ತರ ಪ್ರದೇಶದಲ್ಲಿ 6 ಎಕರೆಗೆ ಒಳಪಟ್ಟಿರುವ ಹಿಡುವಳಿದಾರರಿಗೆ ಕಂದಾಯ ರದ್ದು ಮಾಡೋಣ ಎಂದು ತೀರ್ಮಾನ ತೆಗೆದುಕೊಂಡಿದ್ದಾರೆ. ಹಾಗೆಯೇ ಬಿಹಾರದಲ್ಲಿಯೂ ತೀರ್ಮಾನ ತೆಗೆದುಕೊಂಡಿದ್ದಾರೆ. ನಮ್ಮ ರಾಜ್ಯದಲ್ಲಿಯಾದರೂ ಕೂಡ ಇನ್ನೂ ಸಂಪೂರ್ಣವಾಗಿ ಈಗ ಇರತಕ್ಕ ರೈತವಾರಿ ಪದ್ಧತಿ ಮೇಲೆ ಕಂದಾಯ ವಸೂಲು ಮಾಡುತ್ತಾ ಇದ್ದಾರೆ. ಈ ಪದ್ಧತಿಯನ್ನು ತಪ್ಪಿಸುವುದಕ್ಕೆ ಸಂಪೂರ್ಣವಾಗಿ ಸಾಧ್ಯವಿಲ್ಲದೇ ಹೋದರೂ 10 ಎಕರೆಗೆ ಒಳಪಟ್ಟು ಇರುವ ಹಿಡುವಳಿದಾರರಿಗೆ ಕಂದಾಯ ನಾವು ತೆಗೆದುಕೊಳ್ಳುವುದು ಬೇಡ, ಅದನ್ನು ರದ್ದು ಮಾಡೋಣ. ಹಿಂದಿನ ಸರಕಾರದ ತೀರ್ಮಾನ ಸ್ಟಂಟ್ ಎನ್ನುವ ವಾದ ಈ ಸಭೆಯಲ್ಲಿ ಮುಂದೆ ಒಡ್ಡುವುದಕ್ಕೆ

(ಶ್ರೀ ಹೆಚ್. ಡಿ. ದೇವೇಗೌಡ)

ತಮ್ಮ ಮನಸ್ಸಿಗೆ ಇಚ್ಛೆ ಆಗುವುದು ಇದ್ದರೆ, ರಾಜಕೀಯದಲ್ಲಿ ಲಾಭ ಪಡೆಯುವುದಕ್ಕೆ ಇಚ್ಛೆ ಇದ್ದರೆ, ತಾವು ಈ ಕಡೆ ಕುಳಿತುಕೊಂಡ ಕಾಲದಲ್ಲಿ ಏನು ವಾದ ಇಟ್ಟಿದ್ದೀರಿ, ತಾವು ಏನು ಅಭಿಪ್ರಾಯ ವ್ಯಕ್ತಪಡಿಸಿದಿರಿ, ತಾವು ಮುಖ್ಯ ಮಂತ್ರಿಗಳ ಸ್ಥಾನ ಅಲಂಕರಿಸುವ ಕಾಲದಲ್ಲಿ ತಾವು ಏನು ನಿರ್ಣಯ ಮಾಡಿದಿರಿ, ಅದನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಇರುವ ಅಡಚಣೆ ಏನು ಎಂದು ಕೇಳಬೇಕಾಗುತ್ತದೆ. ಬಹುಶಃ ರಾಜ್ಯದ ನಾಯಕತ್ವ ವಹಿಸುವ ಕಾಲದಲ್ಲಿ ತಮ್ಮ ಅಭಿಪ್ರಾಯ ಕಾರ್ಯರೂಪಕ್ಕೆ ತಾರದೆ ಅದರಿಂದ ದ್ವಿಮುಖ ನೀತಿ ಆದರೆ, ಅದು ಚುನಾವಣೆ ಗುರಿಯನ್ನು ಇಟ್ಟು ರಾಜಕೀಯ ಉದ್ದೇಶದಿಂದ ಭಾಷಣ ಮಾಡಿದ್ದು ಅಲ್ಲವೇ ಎನ್ನುವ ಪ್ರಶ್ನೆಯನ್ನು ನಾನು ಕೇಳಬೇಕಾಗುತ್ತದೆ. ಹಿಂದಿನ ಮಂತ್ರಿಮಂಡಲ ತೆಗೆದುಕೊಂಡಿರತಕ್ಕ ತೀರ್ಮಾನ ರಾಜಕೀಯ ಉದ್ದೇಶ ಪೂರ್ವದ್ದು ಎಂದು ಹೇಳಿದರು. ಈ ಕಡೆ ಕೂತು ಮಾತನಾಡುವ ಕಾಲದಲ್ಲಿ ತಾವು ಏನು ಅಭಿಪ್ರಾಯವನ್ನು ಈ ಸಭೆಯ ಮುಂದೆ ಇಟ್ಟಿದ್ದಿರಿ ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಶಕ್ತಿ ಇಲ್ಲದೆಹೋದರೆ, ನಿಜವಾಗಿ ನಿಮ್ಮಲ್ಲಿ ಆಸಕ್ತಿ ಇಲ್ಲದೇ ಹೋದರೆ ಅಂದು ಮಾಡಿದ ಭಾಷಣ ಸರಕಾರದ ಮೇಲೆ ರಾಜಕೀಯ ದುರುದ್ದೇಶ ಪೂರ್ವದ ಭಾಷಣದಿಂದ ವ್ಯಕ್ತಪಡಿಸಿರುವುದು ಅಲ್ಲವೇ ಎಂದು ರೆವಿನ್ಯೂ ಸಚಿವರು ನಮಗೆ ತಿಳಿಸಬೇಕು. ಹಿಂದಿನ ಸರಕಾರ ಯಾವ ಉದ್ದೇಶದಿಂದ ತೀರ್ಮಾನ ತೆಗೆದುಕೊಂಡರು ಅದು ಚಿಂತೆ ಇಲ್ಲ. ಆ ತೀರ್ಮಾನದ ಬಗ್ಗೆ ರಾಜಕೀಯ ವ್ಯಾಖ್ಯಾನದ ಲಾಭ ಪಡೆದು ಹಲವಾರು ದಿವಸಗಳು ನೀವು ಆಡಳಿತವಲ್ಲಿ ಇರುವುದಕ್ಕೆ ಸಾಧ್ಯವಿಲ್ಲ. ನಿಮ್ಮ ಹೇಳಿಕೆ ಈ ಸಭೆಯ ಮುಂದೆ ಹಿಂದೆ ಏನು ಇಟ್ಟಿದ್ದಿರಿ ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಮಾಡಬೇಕು ಎನ್ನುವ ದೃಷ್ಟಿಯಿಂದ ತಮ್ಮನ್ನು ಒತ್ತಾಯ ಮಾಡುತ್ತಿದ್ದೇನೆ. ಇದರ ಜೊತೆಗೆ ಕಲೆಕ್ಷನ್ ಆಫ್ ರೆವಿನ್ಯೂ ಅರಿಯರ್ಸ್ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಎರಡು ವರ್ಷಗಳ ಕಂದಾಯ ಕೊಟ್ಟರೆ ಸಾಕು ಬಾಕಿ ಕಂದಾಯ ವಸೂಲು ಮಾಡುವ ಬಗ್ಗೆ ನಾವು ಇನ್ನು ಹೆಚ್ಚಿಗೆ ಕಿರುಕುಳ ಕೊಡುವುದಿಲ್ಲ ಎಂದು ಹುಕುಂ ಕೊಟ್ಟಿದ್ದೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಆದರೆ ಅದು ಕಾರ್ಯರೂಪಕ್ಕೆ ಬಂದಿಲ್ಲ. ಇದರ ಬಗ್ಗೆ ನಿರ್ದಿಷ್ಟವಾದ ಅಭಿಪ್ರಾಯಕ್ಕೆ ಸರಕಾರ ಬರಬೇಕು. ತಾವು ಸಭೆಯಲ್ಲಿ ಕೊಟ್ಟಂಥ ಖಚಿತವಾದ ಹೇಳಿಕೆ ಒಂದು, ಅಧಿಕಾರಿಗಳು ನಡೆದುಕೊಳ್ಳತಕ್ಕ ರೀತಿ ಇನ್ನೊಂದು ಆಗಬಾರದು. ಸರಕಾರದ ನಿರ್ದೇಶನ ಏನು ಇದೆ ಅದರಂತೆ ಆ ಅಧಿಕಾರಿಗಳು ನಡೆದುಕೊಳ್ಳದೇ ಹೋದರೆ ಅಂತಹ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ಕೆಲವು ಕಡೆ ಇನ್ನೂ ಸರಿಯಾದ ರೀತಿಯಲ್ಲಿ ಬೆಳೆ ಆಗದೆ, ನಾಲ್ಕಾಣೆ ಬೆಳೆ ಕಡಿಮೆ ಇರುವ ಕಡೆ ಕಂದಾಯ ಕಡಮೆ ಮಾಡಬೇಕು ಎಂದು ಸರಕಾರದ ಶಿಫಾರಸು ಬಂದಿದ್ದರೂ ಕೂಡ ಅಂತಹ ಕಡೆ ಕಂದಾಯ ವಜಾ ಮಾಡಿಲ್ಲ. ಅಂತಹ ಹಲವಾರು ಪ್ರಸಂಗಗಳು ಇವೆ. ನಾಲ್ಕಾಣೆ ಕಡಮೆ ಬೆಳೆ ಬಂದಿದೆ ಎಂದು ಎಲ್ಲಿಂದ ಸರಕಾರಕ್ಕೆ ವರದಿ ಬಂದಿದೆ ಅಂತಹ ಕಡೆ ಕಂದಾಯದ ಹಣವನ್ನು ವಾಪಿ ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಈ ಕ್ರಮ ತೆಗೆದುಕೊಳ್ಳುವುದರಲ್ಲಿ ನಿಧಾನ ಮಾಡಿದ್ದಾರೆ. ಕೆಲವು ಕಡೆ ಅರಿಯರ್ಸ್ ವಸೂಲು ಮಾಡುವ ಬಗ್ಗೆ ಅಧಿಕಾರಿಗಳಿಂದ ಹೆಚ್ಚಿನ ಕಿರುಕುಳ ಆಗುತ್ತಿದೆಯೆಂದು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಛೆ ಪಡುತ್ತೇನೆ. ಇದರ ಜೊತೆಗೆ ಪೀನಲ್ ಇಂಟರೆಸ್ಟ್ ಹಾಕುತ್ತಾರೆ. ಇದು ತಪ್ಪು. ಲ್ಯಾಂಡ್ ರೆವಿನ್ಯೂ ಸಸ್‌ಪೆನ್‌ಷನ್ ಮಾಡಿದವರು ನಾವು. ಈ ಸಭೆಗೆ ಒತ್ತಾಯ ಮಾಡಿ ರಾಜ್ಯದಲ್ಲಿ ಕ್ಷಾಮ ಪರಿಸ್ಥಿತಿಯಿಂದ ಮಳೆ ಬೆಳೆ ಆಗದೆ ಕಷ್ಟ ಆದಂಥಹ ಕಾಲದಲ್ಲಿ ನಾವು ಈ ಕಂದಾಯವನ್ನು ಹಾಕಕೂಡದೆಂದು ಒತ್ತಾಯ ಮಾಡಿ ಇದನ್ನು ತಡೆಯಬೇಕು ಎಂದು ತಿಳಿಸಿದ್ದವರು ನಾವೇ. ರೈತ ಸಂಕಷ್ಟದಲ್ಲಿ ಇರುವಾಗ ರೈತನಿಗೆ ಪರಿಹಾರ ಕೊಡುವುದಕ್ಕೆ ಒಪ್ಪಿಗೆ ಕೊಟ್ಟಮೇಲೆ ಅದಕ್ಕೆ ಇಂಟರೆಸ್ಟ್ ಹಾಕುವುದು ಸರಿಯಾದದು ಅಲ್ಲ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಇದರ ಜೊತೆಗೆ ಒಂದು ಸನ್ನಿವೇಶದಲ್ಲಿ ಕ್ಷಾಮ ಪೀಡಿತ ಪ್ರದೇಶದಲ್ಲಿ ಬಾಕಿಗಳನ್ನು ವಸೂಲು ಮಾಡುವುದಕ್ಕೆ ಸರಕಾರ ಆದೇಶ ಕೊಟ್ಟು ತಡೆಹಿಡಿಯಬೇಕು. 9 ಪರ್ಸೆಂಟ್ ಇಂಟರೆಸ್ಟ್ ಹಾಕಿ ವಸೂಲು ಮಾಡಿದ ಹಲವಾರು ನಿದರ್ಶನಗಳು ಇವೆ. ಇದಕ್ಕೆ ಸಂಬಂಧಪಟ್ಟ ರಸೀದಿಗಳನ್ನು ಹಾಜರು ಪಡಿಸುವುದಕ್ಕೆ ನಾನು ತಯಾರು ಇದ್ದೇನೆ. ಇದು ಸರಿಯಾದುದು ಅಲ್ಲ. ಸಂಬಂಧಪಟ್ಟ ವ್ಯವಹಾರ ಏನು ಮಾಡಿದ್ದಾರೆ, ಕ್ರಮ ಏನು ಇದೆ ಅದನ್ನು ಸರಕಾರ ಕೂಡಲೇ ರದ್ದುಮಾಡಬೇಕು. ಪೀನಲ್ ಇಂಟರೆಸ್ಟ್ 16–17 ಪರ್ಸೆಂಟ್ ವಸೂಲು ಮಾಡಿ ಕೆಳಗಿನ ಅಧಿಕಾರಿಗಳು ಬಹಳ ಕಿರುಕುಳ ಕೊಡುತ್ತಿದ್ದಾರೆ. ಇದನ್ನು ತಪ್ಪಿಸಬೇಕೆಂದು ಹೇಳುತ್ತೇನೆ. ಇದರ ಬಗ್ಗೆ ಒಂದು ಶೀಘ್ರ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ವಾಟರ್ ರೇಟ್ ಹಾಕುತ್ತೇವೆ ಎಂದು ಮಾನ್ಯ ಅರ್ಥಸಚಿವರು ಹೇಳಿದರು. ಶ್ರೀಮಾನ್ ಡಿ. ದೇವರಾಜ್ ಅರಸ್‌ರವರು 18ನೇ ಮಾರ್ಚಿ 1970 ರಲ್ಲಿ ಭಾಷಣ ಮಾಡತಕ್ಕಂಥ ಕಾಲದಲ್ಲಿ ಸಣ್ಣ ಸಣ್ಣ ಕೆರೆಗಳ ಹಿಂಭಾದಲ್ಲಿರತಕ್ಕಂಥ ಜನಗಳಿಗೆ ವಾಟರ್‌ರೇಟ್ ಹಾಕಿದರೆ ತೊಂದರೆಯಾಗುತ್ತದೆ ಜೊತೆಗೆ ಅವರಿಗೆ ಏನೂ ಬೆಳೆ ಆಗದಿದ್ದರೆ ಅಂಥವರಿಂದ ವಾಟರ್‌ರೇಟ್ ವಸೂಲ್ಮಾಡುವುದು ಸರಿಯಾದುದಲ್ಲ ಎಂದು ಪ್ರತಿಪಾದನೆ ಮಾಡಿದ್ದಾರೆ. ಮತ್ತು ಅವರು ಪ್ರವಾಸ ಮಾಡುವ ಕಾಲದಲ್ಲೂ ತಿಳಿಸಿದ್ದಾರೆ. ಎಲ್ಲಿ ನೀರು ಕೊಟ್ಟಿಲ್ಲ ಅಂಥಾ ಕಡೆ ವಾಟರ್‌ರೇಟನ್ನು ವಸೂಲ್ಮಾಡುವುದಿಲ್ಲ ಎಂದು ಹಿಂದಿನ ಸರ್ಕಾರವೂ ಕೂಡ ಹೇಳಿದುದನ್ನು ನಾನು ಕೇಳಿದ್ದೇನೆ. ಈವೊತ್ತು ವಿಲೇಜ್ ಅಕೌಂಟೆಂಟ್ಸ್ ಪಹಣಿಯಲ್ಲಿ ಇಂಥಾ ಬೆಳೆ ಬೆಳೆದಿದ್ದಾನೆ ಎಂದು ಬರೆಯುತ್ತಾನೆ. ಆದರೆ ಆ ಬೆಳೆ ಅವನಿಗೆ ಕೈಗೆ ಸಿಕ್ಕಿದೆಯೋ ಇಲ್ಲವೋ ಎಂದು ನೋಡುವವರಾರು? ಅವನಿಗೆ ಬೆಳೆ ಸರಿಯಾಗಿ ಆಗದೇ ಹೋಗಿದ್ದರೆ ಏನು ಮಾಡಬೇಕು? ಇವೆಲ್ಲವನ್ನೂ ಪರಿಗಣಿಸದೆ ಪಹಣಿಯನ್ನೇ ಆಧಾರವಾಗಿಟ್ಟುಕೊಂಡು ವಾಟರ್‌ರೇಟ್ ವಸೂಲ್ಮಾಡುವುದು ಸರಿಯೇ ಎಂದು ಯೋಚನೆ ಮಾಡಬೇಕು. ರಾಜ್ಯದಲ್ಲಿ 100ಕ್ಕೆ 85 ಭಾಗ ಸಣ್ಣ ಕೆರೆಗಳೇ ಜಾಸ್ತಿ ಇವೆ. ಉದಾಹರಣೆಗೆ ಚಿಕ್ಕಮಗಳೂರು, ಹಾಸನ, ಮತ್ತು ಕೋಲಾರ ಡಿಸ್ಟ್ರಿಕ್‌ಗಳನ್ನೇ ತೆಗೆದುಕೊಳ್ಳಿ. ಅಲ್ಲಿ ಹಲವಾರು ಸಣ್ಣ ಕಟ್ಟೆಗಳಿವೆ. ಸಣ್ಣ ಸಣ್ಣ ಕಟ್ಟೆಗಳ ಹಿಂಭಾಗದಲ್ಲಿ ಗ್ರಾಮಾಧಿಕಾರಿಗಳು ವಸೂಲಿ ಬಾಜಿ ಮಾಡುವ ವಿಷಯದಲ್ಲಿ ಎಲ್ಲರಿಗೂ ಸಾಕಷ್ಟು ಅನುಭವ ಇದೆ. ಕೇವಲ ಪಹಣಿ ಆಧಾರದ ಮೇಲೆ ಈವೊತ್ತು ವಾಟರ್ ರೇಟ್ ನಿಗದಿಮಾಡುವುದಾದರೆ ಆ ರೈತನ ಪರಿಸ್ಥಿತಿ ಏನಾಗಬಹುದು ಎಂದು ಕೂಲಂಕಷವಾಗಿ ಯೋಚನೆ ಮಾಡುವುದಾದರೆ ಈ ವಾಟರ್‌ರೇಟ್ ಆತನ ಮೇಲೆ ಏತಕ್ಕೆ ಹಾಕಬೇಕು ಎಂದು ನಿಮಗೇ ಗೊತ್ತಾಗುತ್ತದೆ. ಆದುದರಿಂದ ವಾಟರ್ ರೇಟ್ ಹಾಕುವುದನ್ನು ಕೈಬಿಡಬೇಕು ಎಂದು ಹೇಳುತ್ತೇನೆ. ಸರ್ಕಾರದ ಬೊಕ್ಕಸಕ್ಕೆ ಹಣವನ್ನು ತುಂಬಿಕೊಳ್ಳುವಂಥ ಆಲೋಚನೆ ಮಾಡುವುದು ಸರಿಯಾದುದಲ್ಲ. ಇದರಿಂದ ಸಣ್ಣ ಸಣ್ಣ ರೈತರಿಗೆ ಕಿರುಕುಳವಾಗುತ್ತದೆ. ಆದುದರಿಂದ ಇದನ್ನು ಯೋಚನೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ತಮಗೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ರೈತನಿಗೆ ನೇರವಾಗಿ ಸಂಬಂಧಪಟ್ಟಂಥ ಪ್ರಶ್ನೆ ಹಲವಾರು ಇವೆ. ಈವೊತ್ತು ಮಾನ್ಯ ಸಚಿವರು ಮಂತ್ರಿಗಳಾಗಿ ಬಂದು 3 ತಿಂಗಳಾಗಿರಬಹುದು. ಬಹಳ ಹುರುಪಾಗಿ ಘೋಷಣೆಗಳನ್ನು ಮಾಡಿದ್ದಾರೆ. ಏನೆಂದರೆ ರೈತರಿಗೆ ಬಹಳ ಜಾಗ್ರತೆಯಾಗಿ ಭೂಮಿಯನ್ನು ಹಂಚುತ್ತೇವೆ ಮತ್ತು ಎಲ್ಲರಿಗೂ ಪಟ್ಟೆಗಳನ್ನು ಹಂಚುವುದಕ್ಕೆ ತಕ್ಕ ವ್ಯವಸ್ಥೆ ಮಾಡುತ್ತೇವೆ ಎಂದು. ಇದರ ಜೊತೆಗೆ ಇನ್ನೂ ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಭೂಮಿಯನ್ನು ಹಂಚುವುದಕ್ಕೆ ಒಂದೆರಡು ವಾರಗಳಲ್ಲಿ ಸಮಿತಿಗಳನ್ನು ರಚನೆ ಮಾಡುತ್ತೇವೆ ಎಂದೂ ಕೂಡ ಪ್ರಸ್ತಾಪ ಮಾಡಿದ್ದಾರೆ. ಆದರೆ ಈವೊತ್ತಿನವರೆಗೂ ಅವುಗಳು ಕೇವಲ ಘೋಷಣೆಗಳಾಗಿ ಉಳಿದಿವೆ. ಇದರ ಬಗ್ಗೆ ಎಷ್ಟರಮಟ್ಟಿಗೆ ಈ ಕಾರ್ಯ ಸಾಧನೆಯಾಗಿದೆ ಎನ್ನುವುದನ್ನು ತಿಳಿಯಪಡಿಸಬೇಕೆಂದು ಹೇಳುತ್ತೇನೆ.

ಇನ್ನೊಂದು ವಿಷಯ ಏನೆಂದರೆ ಭೂಮಿ ಹಂಚತಕ್ಕ ಪ್ರಶ್ನೆ. ಈ ವಿಷಯದಲ್ಲಿ ಹೇಳುವುದಾದರೆ ಲ್ಯಾಂಡ್ ರಿಫಾರಂಸ್‌ನಿಂದ ಬರತಕ್ಕ ಭೂಮಿ ಎಷ್ಟು ಇದೆ, ಸರ್ಕಾರದ ವಶಿಯಲ್ಲಿ ಇರತಕ್ಕ ಭೂಮಿ ಎಷ್ಟಿದೆ ಎನ್ನುವುದಕ್ಕೆ ಕರಾರುವಾಕ್ಕಾದ ಲೆಕ್ಕವಿಲ್ಲ. ಎಷ್ಟು ಜನ ಬಂಡವಾಳಶಾಹಿಗಳು ಸರ್ಕಾರಿ ಜಮೀನನ್ನು ಆಕ್ರಮಣಮಾಡಿಕೊಂಡಿದ್ದಾರೆ. ರಾಜಕೀಯ ಪಕ್ಷಗಳಲ್ಲಿ ಪ್ರಭಾವಿತರಾದ ಕೆಲವರು ಸರ್ಕಾರಿ ಭೂಮಿಯನ್ನು ಆಕ್ರಮಣ ಮಾಡಿಕೊಂಡಿದ್ದಾರೆ. ಇವನ್ನು ನೋಡಿದರೆ ಸರ್ಕಾರಿ ಭೂಮಿಗಳು ಎಲ್ಲೆಲ್ಲಿ ಎಷ್ಟೆಷ್ಟು ಸರ್‌ಪ್ಲಸ್ ಆಗಿದೆ ಎನ್ನುವುದು ಗೊತ್ತಿಲ್ಲ. ಬಡವರಿಗೆ ಜಮೀನು ಇಲ್ಲದವರಿಗೆ ಜಮೀನು ಹಂಚುತ್ತೇವೆ ಎಂದು ಹೇಳುತ್ತಿದ್ದಾರೆ. ಲ್ಯಾಂಡ್ ರಿಫಾರಂಸ್‌ನಿಂದ ಭೂಮಿ ಹಂಚತಕ್ಕ ವಿಷಯವೇ ಬೇರೆ, ಸರ್ಕಾರಿ ವಶಿಯಲ್ಲಿರುವ ಭೂಮಿಯನ್ನು ಹಂಚುವ ವಿಷಯವೇ ಬೇರೆ. ರಾಜಕೀಯ ಪ್ರಭಾವದಿಂದ ಕೆಲವರು ಅನ್‌ಆಥರೈಸ್ಡ್ ಕಲ್ಟಿವೇಷನ್ ಮಾಡತಕ್ಕಂಥ ಭೂಮಿಗಳು ಬೇಕಾದಷ್ಟು ಇವೆ, 1967 ರ ಹಿಂದೆ ಯಾರು ಯಾರು ಅನ್‌ಆಥರೈಸ್ಡ್ ಆಗಿ ಕಲ್ಟಿವೇಟ್ ಮಾಡಿಕೊಂಡು ಬಂದಿದ್ದಾರೋ ಅವರಿಗೆ ಕೊಡಬೇಕೆಂದು ಹುಕುಂ ಮಾಡಿದ್ದೀರಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹಾಗೆ ಕೊಡುವ ವಿಚಾರದಲ್ಲಿ ಕೆಲವು ಷರತ್ತುಗಳನ್ನು ಹಾಕಿಕೊಡಬೇಕು ಅಂತ ಇದೆ ಎಂದು ಪ್ರಶ್ನೋತ್ತರ ಕಾಲದಲ್ಲಿ ಕೇಳುವ ಸಂದರ್ಭದಲ್ಲಿ ಉತ್ತರ ಕೊಟ್ಟಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ.—ಯಾರು ಅನ್‌ಆಥರೈಸ್ಡ್ ಆಗಿ ಕಲ್ಟಿವೇಟ್ ಮಾಡಿದ್ದಾರೋ ಅವರಿಗೆ ಕೊಡುವುದಕ್ಕೆ ಕೆಲವು ಷರತ್ತುಗಳಿವೆ, ನಿಜ. ಈವೊತ್ತು ಒಂದು ಕುಟುಂಬದಲ್ಲಿ ತಂದೆಗೆ

(ಶ್ರೀ ಹೆಚ್. ಡಿ. ದೇವೇಗೌಡ)

ಭೂಮಿ ಇದ್ದರೆ ಮಗನ ಹೆಸರಿನಲ್ಲಿ ತೆಗೆದುಕೊಳ್ಳುತ್ತಾನೆ. ಈ ಭೂಮಿಯನ್ನು ಪಡೆಯುವುದಕ್ಕೆ ಒಂದು ಫಾರಂ ಇದೆ, ಆ ಫಾರಂ ಭರ್ತಿ ಮಾಡಿ ಮಗನ ಹೆಸರಿನಲ್ಲಿ ಟಿ. ಟಿ. ತೆಗೆದುಕೊಳ್ಳುತ್ತಾನೆ. ಆರೀತಿ ಮಗನ ಹೆಸರಿನಲ್ಲಿ ಟಿ. ಟಿ. ತೆಗೆದುಕೊಂಡರೆ ಆ ಜಮೀನಿನ ಖಾತೆ ಆತನ ಹೆಸರಿನಲ್ಲೇ ಇರುತ್ತೆ. ಇಂಥಾದ್ದು ಬೇಕಾದಷ್ಟು ಇವೆ. ಇದರ ಬಗ್ಗೆ ಸರ್ಕಾರ ತೀವ್ರವಾಗಿ ಆಲೋಚನೆ ಮಾಡಬೇಕು ಎಂದು ಹೇಳುತ್ತೇನೆ. ಇದರ ಜೊತೆಗೆ ಕೆಲವರು ಬಡವರು ಅನ್‌ಆಥರೈಸ್ಡ್ ಕಲ್ಟಿವೇಟ್ ಮಾಡಿಕೊಂಡಿದ್ದಾರೆ. ಅವರಿಗೆ ಕೊಡುವುದಕ್ಕೆ ನನ್ನ ಅಡ್ಡಿ ಇಲ್ಲ. ಭೂಮಿ ಇಲ್ಲದೇ ಇರತಕ್ಕಂಥಾವರು ಆರೀತಿಯಾಗಿ ಅನ್‌ಆಥರೈಸ್ಡ್ ಕಲ್ಟಿವೇಟ್ ಮಾಡಿಕೊಂಡಿದ್ದರೆ ಅಂಥವರಿಗೆ 1968 ರಿಂದ ಅಲ್ಲ 1972 ರ ವರೆಗೂ ಕೊಡಿ. ಒಂದು ಕುಟುಂಬದಲ್ಲಿ ಯಾರ ಹೆಸರಿನಲ್ಲೂ ಒಂದು ಗುಂಟೆ ಕೂಡ ಜಮೀನು ಇಲ್ಲದೇ ಹೋಗಿದ್ದರೆ ಅಂಥವರಿಗೆ ಕೊಡಿ. ಅವರ ಬಗ್ಗೆ ಕೊಡುವುದಕ್ಕೆ ಹಿಂತೆಗೆಯಬಾರದು ಎಂದು ಸಲಹೆ ಮಾಡುತ್ತೇನೆ. ಇದರ ಜೊತೆಗೆ ಇನ್ನೊಂದು ವಿಷಯ ಏನೆಂದರೆ ಸ್ಮಾಲ್ ಹೋಲ್ಡರ್ಸ್ ಅರ್ಧ ಗುಂಟೆ, 10 ಗುಂಟೆ, 20 ಗುಂಟೆ ಜಮೀನನ್ನು ಗೊತ್ತಿಲ್ಲದೇ ಅಕ್ರಮಣ ಮಾಡಿಕೊಂಡಿದ್ದರೆ ಅವರಿಗೆ ಒಂದು ಮಾರ್ಕೆಟ್ ರೇಟ್ ಫಿಕ್ಸ್ ಮಾಡಿ ಅದನ್ನು ಅವರವರಿಗೇ ಕೊಡಬೇಕೆಂದು ತಿಳಿಸಲಿಚ್ಛಿಸುತ್ತೇನೆ.

ಇನ್ನು ರೆಕಾರ್ಡ್ ಆಫ್ ರೈಟ್ಸ್ ವಿಷಯ. ಇದರ ಬಗ್ಗೆ ಸಾಕಷ್ಟು ವ್ಯವಸ್ಥೆ ಮಾಡಿಲ್ಲ. ಇದರ ಬಗ್ಗೆ ಹಲವಾರು ಸಾರಿ ಚರ್ಚೆ ಮಾಡಿದ್ದೇವೆ. ಹಿಂದಿನ ಮಂತ್ರಿಗಳಾದ ಶ್ರೀ ಕೌಜಲಗಿಯವರು ಕೂಡ ಹೇಳಿದರು. ಒಂದು ವಿಶೇಷ ಸಿಬ್ಬಂದಿಯನ್ನು ನೇಮಕ ಮಾಡಿ ರಿಕಾರ್ಡ್ ಆಫ್ ರೈಟ್ಸ್‌ನ್ನು ಅಪ್‌ಟು ಡೇಟ್ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ ಎಂದು ಹೇಳಿದರು. ಇದು ಮಂಡ್ಯ ಜಿಲ್ಲೆಯಲ್ಲಿ ಒಂದು ಕಡೆ ಆಗಿರಬಹುದು. ಯಾರಾದರೂ ಸತ್ತು 20 ವರ್ಷವಾದರೂ ಕೂಡ ಆ ಜಮೀನಿನ ಖಾತೆ ಅವರ ಹೆಸರಿನಲ್ಲೇ ಇರುತ್ತೆ. ಮಗ ಸಾಲಕ್ಕೆ ಅರ್ಜಿ ಹಾಕಿದರೆ ಖಾತೆ ತಾತನ ಹೆಸರಿನಲ್ಲೇ ಇರುವುದರಿಂದ ಅವನಿಗೆ ಸಾಲ ಸಿಕ್ಕುವುದಿಲ್ಲ. ಮಗನ ಹೆಸರಿಗೆ ಇನ್ನೂ ಟ್ರಾನ್ಸ್‌ಫರ್ ಆಗಿರುವುದಿಲ್ಲ. ಇದನ್ನು ಅಪ್‌ಟು ಡೇಟ್ ಮಾಡಬೇಕು ಇಲ್ಲದೇ ಹೋದರೆ ಕಷ್ಟವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಲ್ಯಾಂಡ್ ರಿಫಾರಂಸ್ ಜಾರಿಗೆ ತರಬೇಕಾದರೆ ಒಂದು ಕುಟುಂಬದಲ್ಲಿ ಯಜಮಾನನ ಹೆಸರಿನಲ್ಲಿ ಎಷ್ಟು ಭೂಮಿ ಇದೆ ಎನ್ನತಕ್ಕಂಥಾದ್ದಕ್ಕೆ ಸರಿಯಾದ ಲೆಕ್ಕ ಇಲ್ಲ. ಆದುದರಿಂದ ಈ ರಿಕಾರ್ಡ್ ಆಫ್ ರೈಟ್ಸ್‌ನ್ನು ತೀವ್ರವಾಗಿ ಕಾರ್ಯರೂಪಕ್ಕೆ ತರುವುದಕ್ಕೆ ಒಂದು ವಿಶೇಷ ಸಿಬ್ಬಂದಿಯನ್ನು ನೇಮಕ ಮಾಡುವುದು ಸೂಕ್ತವೆಂದು ಸಲಹೆ ಮಾಡುತ್ತೇನೆ. ಈಗ ಇದರ ಜೊತೆಗೆ ಪಹಣಿಯನ್ನು ಬರೆಯುವುದರಲ್ಲಿ ಗೊಂದಲ ಇದೆ. ಪಹಣಿಯನ್ನು ಬರೆಯುವ ಕರಣಿಕ ಅದನ್ನು ತನ್ನ ಹತ್ತಿರವೇ ಇಟ್ಟುಕೊಂಡಿರುತ್ತಾನೆ. ಅದರ ಬಗ್ಗೆ ಏನಾದರೂ ಮಾಹಿತಿ ಬೇಕಾಗಿದ್ದರೆ ತಾಸಿಲ್ದಾರರಿಗೆ ಅರ್ಜಿಕೊಟ್ಟರೆ ಅವನನ್ನು ಕರೆಸಿಕೊಂಡು ಬರೆಸಬೇಕು. ಈಗ ಏನೋ ಅನುವಂಶಿಕ ಪದ್ಧತಿಯನ್ನು ರದ್ದು ಮಾಡಿ ಅವರಿಗೆ ಪರಿಹಾರ ಕೊಟ್ಟು ಎಲ್ಲಾ ಕಡೆಯೂ ವಿಲೇಜ್ ಅಕೌಂಟೆಂಟ್ಸ್‌ಗಳನ್ನು ನೇಮಿಸುವಂತೆ ಹುಕುಂ ಮಾಡಿದ್ದೀರಿ. ಆದರೆ ವಿಲೇಜ್ ಅಕೌಂಟೆಂಟ್ಸ್ ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಾ ಇಲ್ಲ ಎಂದು ಸಾಕಷ್ಟು ದೂರು ಇದೆ. ಆದುದರಿಂದ ಅವರಲ್ಲಿ ಆಗತಕ್ಕಂಥ ಚಿತಾವಣಿ ತಪ್ಪಿಸುವುದಕ್ಕೆ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು. ಪ್ರತಿವರ್ಷವೂ ಕೂಡ ಪಹಣಿ ಬರೆದುದನ್ನು ತಾಲ್ಲೂಕು ಆಫೀಸಿನಲ್ಲಿ ಇರಿಸಬೇಕು, ಅವನ ಕೈಯಲ್ಲಿ ಕೊಟ್ಟು ಇರಿಸಬಾರದು. ಅವನ ಹತ್ತಿರ ಇದ್ದರೆ ಹಲವಾರು ತಿದ್ದುಪಡಿಗಳನ್ನು ಮಾಡುವುದಕ್ಕೆ ಅವಕಾಶವಾಗುತ್ತದೆ. ಆದುದರಿಂದ ಇದರ ಬಗ್ಗೆ ಎಚ್ಚರಿಕೆ ವಹಿಸಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಹೇಮಾವತಿ ರೀಹ್ಯಾಬಿಲಿಟೇಷನ್ ಕೆಲಸದ ಬಗ್ಗೆ ಎಷ್ಟರಮಟ್ಟಿಗೆ ಕಾರ್ಯ ನಡೆದಿದೆ ಎಂದು ಹೇಳುವುದಾದರೆ, ಕಾರ್ಯ ಸಮರ್ಪಕವಾಗಿ ನಡೆದಿಲ್ಲ. ಮಾನ್ಯ ಮಂತ್ರಿಗಳಿಗೆ ಹೆಚ್ಚು ಅನುಭವವಿದೆ. ಹಾಸನ ಜಿಲ್ಲೆಯಲ್ಲಿರುವ ಭೂಮಿಯನ್ನು ಪುನರ್ವಸತಿ ಕಾರ್ಯಗಳಿಗಾಗಿ ರಿಸರ್ವ್ ಮಾಡಬೇಕೆಂದು ಹುಕುಂ ಮಾಡಿದ್ದಾರೆ. ಆದರೆ ಮಂಡ್ಯ ಜಿಲ್ಲೆಯಲ್ಲಿರುವ ಭೂಮಿಯನ್ನು ರಿಸರ್ವ್ ಮಾಡಿ ಹುಕುಂ ಮಾಡಿಲ್ಲ. ಅಲ್ಲಿಯೂ ನಾಟೆ ಹೋಗುತ್ತದೆ. ಈ ಹುಕುಂ ಮಾಡುವಾಗ ಒಂದು ತಪ್ಪು ಅದರಲ್ಲಿ ಇದೆ. ಯಾರು ಮುಳುಗಡೆಯಿಂದ ಜಮೀನು ಕಳೆದುಕೊಳ್ಳುತ್ತಾರೆ ಅವರಿಗೆ ಮಾತ್ರ ಜಮೀನು ಕೊಡಬೇಕು ಎಂದು ಇದೆ. ನಾಲೆತೆಗೆಯುವಾಗ ಸಣ್ಣ ಪುಟ್ಟ ಹಿಡುವಳಿದಾರರು ತಮ್ಮ ಜಮೀನನ್ನು ಕಳೆದುಕೊಂಡರೂ ಅವರಿಗೆ ಜಮೀನು ಕೊಡುವುದಕ್ಕೆ ಇದರಲ್ಲಿ ಅವಕಾಶವಿಲ್ಲ, ಎರಡು ಮೂರು ಎಕರೆ ಜಮೀನಿರುವವನು ನಾಲೆಗೆ ತನ್ನ ಜಮೀನನ್ನು ಕಳೆದುಕೊಂಡರೆ ಅವನು ಎಲ್ಲಿ ಹೋಗಿ ಜೀವನ

ಮಾಡಬೇಕು ? ಅವನಿಗೆ ಇರತಕ್ಕೆ ಮಾರ್ಗವಾದರೂ ಏನು ? ಎರಡು ಎಕರೆಗೆ ಅವನಿಗೆ ಪರಿಹಾರ ವನ್ನು ಕೊಡಬಹುದು, ಅದರಿಂದ ಅವನ ಮುಂದಿನ ಜೀವನಕ್ಕೆ ಏನೇನೂ ಅನುಕೂಲವಾಗುವುದಿಲ್ಲ. ನಾನು ಹಿರಿಯ ಅಧಿಕಾರಿಗಳಲ್ಲಿ ಈ ವಿಚಾರ ಪ್ರಸ್ತಾಪ ಮಾಡಿದಾಗ ಮುಳುಗಡೆಯಾದವರಿಗೆ ಮಾತ್ರ ಜಮೀನು ಕೊಡಬಹುದು, ಎಲ್ಲರಿಗೂ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದರು. 10 ಎಕರೆ ಇರುವವರು ಒಂದೆರಡು ಎಕರೆ ಕಳೆದುಕೊಂಡರೆ ಅಂಥವರಿಗೆ ಜಮೀನು ಕೊಡಬೇಕು ಎಂದು ನಾನು ಹೇಳುವುದಿಲ್ಲ. ಅದರೆ ಎರಡು ಮೂರು ಎಕರೆ ಇದ್ದು ಅದರಲ್ಲಿ ಮುಕ್ಕಾಲು ಭಾಗ ಅಥವಾ ಪೂರ್ತಿ ಭಾಗವನ್ನು ಕಳೆದುಕೊಳ್ಳುವವನು ಉಳಿದುದರಲ್ಲಿ ಜೀವನ ಮಾಡುವುದಾದರೂ ಹೇಗೆ ? ಇದರ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟೀಕರಣ ಮಾಡಬೇಕು ಮತ್ತು ಸೂಕ್ತ ಹುಕುಮನ್ನು ಹೊರಡಿಸಬೇಕು.

ನಾನಾ ಪ್ರದೇಶದಲ್ಲಿ ಕೆಲವು ಕಡೆ ಗ್ರಾಮಗಳನ್ನು ಬದಲಾವಣೆ ಮಾಡಬೇಕಾಗುತ್ತದೆ. ಅಂಥ ಸಂದರ್ಭದಲ್ಲಿ ಅದಕ್ಕೆ ಬೇಕಾಗತಕ್ಕ ಮನೆ ನಿವೇಶನಕ್ಕೆ ಸ್ಥಳವನ್ನು ರಿಸರ್ವ್ ಮಾಡಿ ಇಡ ಬೇಕಾಗುತ್ತದೆ. ಇವೆಲ್ಲವನ್ನೂ ಕೂಲಂಕಷವಾಗಿ ಪರಿಶೀಲನೆ ಮಾಡಿ ಪುನರ್ವಸತಿ ಕಾರ್ಯಕ್ರಮ ತ್ವರಿತವಾಗಿ ನಡೆಯುವುದಕ್ಕೆ ಸರ್ಕಾರ ಹುಕುಂ ಕೊಡಬೇಕು.

ಹೊಳೆನರಸೀಪುರ, ಚನ್ನರಾಯಪಟ್ಟಣ, ಅರಕಲಗೂಡು ಮತ್ತು ಹಾಸನ ತಾಲ್ಲೂಕುಗಳಲ್ಲಿ ಪೂರ್ಣ ಜಮೀನು ರಿಸರ್ವ್ ಮಾಡಿದ್ದಾರೆ. ಆ ಸ್ಥಳದಲ್ಲಿರುವ ಭೂರಹಿತರು ಒಂದೆರಡು ಎಕರೆ ಜಮೀನನ್ನು ಅನಧಿಕೃತವಾಗಿ ವ್ಯವಸಾಯ ಮಾಡಿಕೊಂಡು ಅದಕ್ಕೆ ಟಿ. ಟಿ. ಕೊಡುತ್ತ ಬಂದಿರುತ್ತಾರೆ. 1968ರ ಹುಕುಂ ಮೇರೆಗೆ ಅನಧಿಕೃತವಾಗಿ ಸಾಗುವಳಿ ಮಾಡುತ್ತಿದ್ದು ಟಿ. ಟಿ. ಕೊಟ್ಟು ಅನುಭವಿಸುತ್ತಿದ್ದರೆ ಅವರಿಗೇ ಜಮೀನು ಕೊಡಬೇಕೆಂದಿದೆ. ಆದರೆ ರಿಸರ್ವೇಷನ್ ಹುಕುಂನಿಂದ ಅದನ್ನು ಕಾರ್ಯಗತ ಮಾಡುವುದಕ್ಕೆ ಆಗಿಲ್ಲ. ಭೂ ರಹಿತನಾದವನು ಆ ಜಮೀನಿನ ಮಾಲಿಕ ನಾಗುವುದಕ್ಕೆ ಸಾಧ್ಯವಿಲ್ಲ. ಸರ್ಕಾರದವರು ರಿಸರ್ವೇಷನ್ ಆರ್ಡರ್ ಪುನರ್ವಿಮರ್ಶೆ ಮಾಡಿ ಭೂ ರಹಿತರಿಗೆ ಕೂಡ ಅನುಕೂಲ ಮಾಡಿಕೊಡಬೇಕು. ಈ ಬಗ್ಗೆ ನಾನು ಮಾನ್ಯ ಮಂತ್ರಿಗಳಿಗೆ ಒಂದು ಪತ್ರ ಕೂಡ ಬರೆದಿದ್ದೇನೆ. ಅದರ ಬಗ್ಗೆ ಪರಿಶೀಲನೆ ಮಾಡಿ ಜಾಗ್ರತೆ ಹುಕುಂ ಕೊಡಬೇಕು.

ಪಟೇಲರುಗಳ ಅನುವಂಶಿಕ ಹಕ್ಕನ್ನು ರದ್ದು ಮಾಡಿದ್ದರೂ ಪಟೇಲರಿಗೆ ಏನೂ ಪರಿಹಾರವನ್ನು ಕೊಟ್ಟಿಲ್ಲ. ಈತ ಏನು ಪಾಪ ಮಾಡಿದ್ದ. ಅತನಿಗೆ ಏನು ಪರಿಹಾರವಿದೆ ? ಪಟೇಲ್ ಆಫೀಸನ್ನಾದರೂ ಇಟ್ಟುಕೊಳ್ಳುತ್ತೇವೆಂದು ಹೇಳಿದರೆ ಅಲ್ಪಸ್ವಲ್ಪ ಸವಲತ್ತನ್ನು ಇಟ್ಟುಕೊಂಡು ತಾನು ಪಟೇಲ ಎಂದಾದರೂ ಹೇಳಿಕೊಳ್ಳಬಹುದು. ಅದನ್ನಾದರೂ ಸರ್ಕಾರ ಮಾಡಲಿ. ಆದುದರಿಂದ ದಯಮಾಡಿ ಈ ಬಗ್ಗೆ ಸರ್ಕಾರ ನಿರ್ದಿಷ್ಟವಾದ ನಿಲುವು ತಾಳಬೇಕು ಎಂದು ಹೇಳುತ್ತಿದ್ದೇನೆ.

ವಿಲೇಜ್ ಅಕೌಂಟೆಂಟರೇನಿದ್ದಾರೆ ಅವರನ್ನು ತ್ವರಿತವಾಗಿ ನೇಮಕ ಮಾಡುವುದರ ಬಗ್ಗೆ ಏನೇನು ಕ್ರಮ ತೆಗೆದುಕೊಳ್ಳಬೇಕೋ ಅದನ್ನೆಲ್ಲ ತೆಗೆದುಕೊಳ್ಳಬೇಕು. ಒಂದು ಕಡೆ ಶ್ಯಾನುಭೋಗ ರನ್ನು ತೆಗೆದ ಮೇಲೆ ಮತ್ತೊಂದು ಕಡೆ ಕೆಲಸ ನಿಂತು ಹೋಗುತ್ತದೆ. ಅನೇಕ ಕಡೆ ವಿಲೇಜ್ ಅಕೌಂಟೆಂಟ್ಸ್ ಇಲ್ಲ. ಇದರ ಬಗ್ಗೆ ಕೂಡ ಸ್ಪಷ್ಟವಾದ ನಿರ್ದೇಶನ ಕೊಡಬೇಕೆಂದು ಹೇಳುತ್ತೇನೆ.

ಇನಾಂ ರದ್ದಿಯಾತಿ ಕಾನೂನಿನ ಪ್ರಕಾರ ಪರಿಹಾರವನ್ನು ಕೊಟ್ಟಿರುವುದರಲ್ಲಿ ಎಕ್ಸೆಸ್ ಕಾಂಪೆನ್ಸೇಷನ್ ಕೊಟ್ಟಿದ್ದಾರೆ, ತಪ್ಪು ಕಾಂಪೆನ್ಸೇಷನ್ ಕೊಟ್ಟಿದ್ದಾರೆ ಎಂದು ಅದನ್ನು ರಿಕವರಿ ಮಾಡಬೇಕೆಂದು ಎಲ್ಲರಿಗೂ ನೋಟೀಸ್ ಇಷ್ಯೂ ಮಾಡಿದ್ದಾರೆ. ಹೈ ಕೋರ್ಟಿಗೆ ರೆಫರ್ ಮಾಡಿ ಅಲ್ಲಿಂದ ನೋಟೀಸ್ ಕೊಟ್ಟಿದ್ದಾರೆ. 1960ನೇ ಇಸವಿಯಿಂದ ಪರಿಹಾರವನ್ನು ಕೊಟ್ಟಿದ್ದಾರೆ. ಪರಿಹಾರವನ್ನು ಪಡೆದಿರುವವರಲ್ಲಿ ಕೆಲವರು ಸತ್ತು ಹೋಗಿರಬಹುದು, ಕೆಲವರು ಪತ್ತೆ ಇಲ್ಲದೆ ಇರ ಬಹುದು ಇನ್ನು ಕೆಲವರು ಉಳಿದಿರಬಹುದು. ಅವರಲ್ಲಿ ರಿಕಾರ್ಡ್‌ಗಳು ಎಲ್ಲಿವೆಯೋ, ಏನು ಮಾಡಿಕೊಂಡಿದ್ದಾರೆಯೋ ಗೊತ್ತಿಲ್ಲ. ಅವರೆಲ್ಲ ಈಗ ಕೋರ್ಟ್ ಮುಂದೆ ಹೋಗಿ ತಮಗೆ ಕೊಟ್ಟಿರತಕ್ಕ ಪರಿಹಾರ ಧನ ಕ್ರಮಬದ್ಧವಾಗಿದೆ ಎಂದು ವಾದ ಮಾಡಬೇಕಾಗಿದೆ. ಅದಕ್ಕೆ ಅವರು ಒಬ್ಬ ಲಾಯರನ್ನು ಕೂಡ ನೇಮಿಸಿಕೊಳ್ಳಬೇಕಾಗಿದೆ. ಇದರಿಂದ ಎಷ್ಟು ಕಿರುಕುಳ, ತೊಂದರೆಯಾಗು ತ್ತಿದೆ ಎನ್ನುವುದನ್ನು ಕೂಡ ಮಾನ್ಯ ಮಂತ್ರಿಗಳು ಗಮನಿಸಬೇಕು. ಕೆಲವು ವೇಳೆ ಅಧಿಕಾರಿಗಳು ತಮ್ಮ ಸ್ಥಾನ ದುರುಪಯೋಗ ಮಾಡಿಕೊಂಡು, ಅವರು ಮಾಡಿರುವಂಥ ತಪ್ಪುಗಳಿಗೆ ಈಗ ಪರಿಹಾರ ಪಡೆದಿರುವ ಹಿಂದಿನ ಇನಾಂದಾರರು ತೊಂದರೆ ಪಡಬೇಕಾಗಿರುವಂಥ ಸಂದರ್ಭಗಳ ಕೂಡ ಇವೆ. ಇದರಿಂದ ಸರ್ಕಾರಕ್ಕೆ ಕೂಡ ಅನುಕೂಲಕ್ಕಿಂತ ಪ್ರತಿಕೂಲವೇ ಹೆಚ್ಚಾಗುತ್ತದೆ. ಕೋರ್ಟಿನಲ್ಲಿ ಯಾವ ರೀತಿ ತೀರ್ಮಾನವಾಗುತ್ತದೆ ಎನ್ನುವುದನ್ನು ನಾವು ಆಂಟಿಸಿಪೇಟ್ ಮಾಡುವುದಕ್ಕಾಗುವು ದಿಲ್ಲ. ಸರ್ಕಾರ ಕೂಡ ಸಾಕಷ್ಟು ವೆಚ್ಚ ಮಾಡಬೇಕಾಗುತ್ತದೆ. ಹೈಕೋರ್ಟ್ ಮುಂದೆ ಹೋಗಿರುವುದು ಸಾಧುವಾದುದಲ್ಲ. ಈ ಬಗ್ಗೆ ಇನ್ನು ಮುಂದುವರಿಯದೆ ಇಲ್ಲಿಗೇ ಕೈ ಬಿಡುವುದು ಸೂಕ್ತವೆಂದು ನನ್ನ ಅಭಿಪ್ರಾಯ.

(ಶ್ರೀ ಹೆಚ್. ಡಿ. ದೇವೇಗೌಡ)

ಮಾನ್ಯ ಸಚಿವರು ರೆವೆನ್ಯೂ ಇಲಾಖೆಯ ಆಡಳಿತವನ್ನು ಹಿಡಿದಿದ್ದಾರೆ. ಅವರು ರೈತ ವಂಶೀಕರು ಹೆಚ್ಚು ಅನುಭವವಿರುವವರು. ತಾಲ್ಲೂಕಾಫೀಸುಗಳಲ್ಲಿ ಆಗತಕ್ಕ ಕಿರುಕುಳ ಅವರಿಗೆ ಚೆನ್ನಾಗಿ ಗೊತ್ತಿದೆ. ಕೆಲವು ಕಡೆ ಅನಿರೀಕ್ಷಿತವಾಗಿ ಭೇಟಿ ಕೊಟ್ಟು ಪರಿಶೀಲನೆ ಮಾಡಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಸ್ವಲ್ಪ ನಿಷ್ಠೆ ಇರುವವರು ಕಂದಾಯಮಂತ್ರಿಗಳಾದರೆ ಮಳೆ ಬೆಳೆ ಸರಿಯಾಗಿ ಆಗುತ್ತದೆ ಎಂದು ಹೇಳುತ್ತಾರೆ. ಮಾನ್ಯ ಮಂತ್ರಿಗಳಿಗೆ ಪೂಜಾದಿ ಕಾರ್ಯಗಳಲ್ಲಿ ನಿಷ್ಠೆ ಇದೆ. ಆದರೆ ಈ ಸಲ ಮಳೆ ಹೆಚ್ಚಾಗಿ ನಷ್ಟವಾಗಿದೆ. ಹಿಂದೆ ಕ್ಷಾಮದಿಂದ ನಷ್ಟವನ್ನು ಅನುಭವಿಸಿದರೆ, ಈ ಸಲ ಮಳೆ ಹೆಚ್ಚಾಗಿ ನಷ್ಟವಾಗಿದೆ. ಸಿರಾ ಮತ್ತು ಮಧುಗಿರಿ ತಾಲ್ಲೂಕುಗಳಲ್ಲಿ ಪರಿಹಾರವನ್ನು ಕೊಡುವಂಥ ವ್ಯವಸ್ಥೆ ಮಾಡಿದಾಗ ಸ್ಥಳೀಯ ಅಧಿಕಾರಿಗಳು ಸ್ವಲ್ಪ ಅವ್ಯವಸ್ಥೆಗೆ ಕೈ ಹಾಕಿದ್ದಾರೆ ಎನ್ನುವ ದೂರು ಬಂದಿದೆ. ಆ ಪತ್ರವನ್ನು ಮಾನ್ಯ ಮಂತ್ರಿಗಳ ಕಡೆಗೆ ಕಳುಹಿಸುತ್ತೇನೆ.

ಇದರ ಬಗ್ಗೆ ತಾವು ವಿಚಾರಣೆ ಮಾಡಬೇಕು, ಎಲ್ಲಿ ಅಕ್ರಮ ವ್ಯವಹಾರ ನಡೆದಿದೆ, ಅದನ್ನು ತಡೆಗಟ್ಟಬೇಕು.

11-00 A.M.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನನಗೆ ಗೊತ್ತಾದ ಕಡೆಯಲ್ಲಿ ವಗಾ೯ ಮಾಡುವುದನ್ನು ಮೊದಲು ಮಾಡಿದ್ದೇನೆ. ಆಮೇಲೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಬಹಳ ಸಂತೋಷ, ಇನ್ನೊಂದು ಮಾತು, ಪರಿಹಾರ ಕಾಮಗಾರಿ ಕೆಲಸ ಮಾಡುವುದಕ್ಕೆ ಜೂನ್ 30ರವರೆಗೆ ಕಾಲ ಕೊಟ್ಟು ಹಣ ಕೊಟ್ಟಿದ್ದೀರಿ, ಆ ಕೆಲಸ ಅರ್ಧಂಬರ್ಧ ಆಗಿದೆ. ಪೇಮೆಂಟ್ ಪೂರ್ತಿ ಆಗಿಲ್ಲ, ಎಲ್ಲೆಲ್ಲಿ ಇಂಥ ಸನ್ನಿವೇಶಗಳು ಇದೆ ಎಂದು ನೋಡಿ, ಕೆಲಸವನ್ನು ಪೂರ್ತಿ ಮಾಡಲು ಎಷ್ಟು ಹಣ ಬೇಕೋ, ಅದನ್ನು ರಿಲೀಸ್ ಮಾಡಬೇಕು. ರಾಜ್ಯದಾದ್ಯಂತ ಯಾವುದೇ ಪ್ರದೇಶದಲ್ಲಿ ಈ ಕೆಲಸ ಮಾಡುತ್ತಿದ್ದರೂ ಅದನ್ನು ಮೊಟಕು ಮಾಡುವುದು ಬೇಡ. ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† Sri J. P. SARWESH (Serum).—Mr. Deputy Speaker, supporting the demand before the House, I would like to make a few suggestions.

Sir, first I should like to speak about the Thasildars and how the Tehsil officers are functioning. Sir, we should accept that we have got some of the officers who are of the worst type and who indulge in corruption in such a daring and shameful manner that we cannot find parallel in any other Department. Government is aware that since the last two years, Gulbarga Division is under the grip of famine. Monsoons have failed. Government have given money to be distributed as takavi loans and for buying fodder etc., required by the farmers. But in so distributing these takavi loans, the Thasildars have taken ten percent as their *mamool* or bribe and I brought to the notice of the Government that the Thasildar of Sedum has taken 10 per cent from each applicant to whomever he has granted this takavi loan and imagine what would be the amount colleeted by this Thasildar for distributing Rs. 2-3 lakhs. Some years ago, on my complaint, Government appointed an officer to investigate. That officer investigated the case and he visited Sedum, and after investigation he gave him a clean chit and within a month that man was promoted as Assistant Commissioner. Sir, I was not given an opportunity to speak on the general budget. I

wanted to suggest that the Vigilance Commission should be abolished. The point is, corruption cannot be rooted out as long as capitalism continues in our society. Corruption is always practised by the capitalists. When you give security to every body as envisaged in a socialist society, nobody will indulge in corruption. Unfortunately now, we are allowing officers to become corrupt and amass huge amounts and at the same time we keep the Vigilance Commission which cannot solve the problem. Unless we take our society towards socialism and give security to every one, we cannot abolish corruption.

Today, thousands and lakhs of tenants of agricultural labourers who have no land, are looking to our Hon'ble Minister Sri N. Hutchmasthi Gowda who is going to perform very soon a historical experiment. He is going to bring a legislation prescribing a ceiling on holdings and to distribute the surplus land among the landless. That will be a historical event. Sir, one grave mistake our Government has committed is they have not banned the selling of land. Why is it not done ? When you are sincere about this, why have you not stopped the registration of lands and selling of lands, while the Andhra Government has done and some other Government have also done it. The educated persons and people who have political consciousne s are questioning why it is not done. I questioned some of the office s and they said, the Act will come into force from 1970 and so on. After all, who are buying the land ? It is the poor people. You want poor people to buy the excess land and you want them to go to court and that will take years together. So I request Government immediately to issue orders stopping the registration and selling of lands, so that the surplus lands should not be sold.

Regarding the unauthorised cultivation by the landless people, today the Hon'ble Minister was kind enough to reply that 23,906 acres of land is in the posession of unauthorised cultivators. We are continuously bringing this problem before the House since the last 16 years and though Government was issuing orders, it was never implemented by the officers at the taluk level. By this we can understand how Thasildars of the Revenue Department are behaving in this matter. If they had worked sincerely, by now they would have granted pattas to these poor people. On the other hand, now penalty land revenue is collected from these poor people.

One more thing, previously the landless people were given land free of cost. How can these poor people give Rs. 100 ? I want Government to remove this hardship. Landless tillers must be given free land as it is given to political sufferers and as it is given to ex-service men.

Sir, regarding the water rate, Sri Deve Gowda was saying that it should be reduced where wet cultivation is under tanks and wells. I say that under the Thungbhadra canal and other canals of large-sized irrigation systems, water rate should be increased. The reason is this. Government has spent crores and crores of rupees

(SRI J. P. SARWESH)

on big projects. What is the return that the Government is getting. So I feel that water rate should be increased. Unless that is increased, we will not be able to solve some of the other problems which are facing us.

Regarding village accountants Sir, I want to make one suggestion. Village accountants should not be posted to their native places. The idea of appointment of village accountants was to remove hereditary system. If we post these village accountants in their native place, they will get chance to exploit People. It is necessary that village accountants must be posted outside the taluk; even if it is the same taluk, it may be to other villages.

I want to request the Government that more funds should be provided to Gulbarga Division where people are facing famine for two years and till they get the next crop, they will not be able to lead a happy life.

It is necessary that famine work should be started in these areas and takavi loans should be given. As far as recovery is concerned some of the Thasildars, in spite of the Government Orders, have harassed the cultivators and raiyats and recovered the loans and dues.

ಶ್ರೀ ಬಿ. ವಿ. ಕಕ್ಕಿಲಾಯ (ಬಂಟವಾಳ್).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ರೆವೆನ್ಯೂ ಸಚಿವರು ಅನೇಕ ಹೊಸ ಕಾನೂನುಗಳನ್ನು ಮತ್ತು ಕ್ರಮಗಳನ್ನು ಜಾರಿಗೆ ತರುತ್ತಾರೆ ಎಂದು ಭರವಸೆ ಇತ್ತು. ಆದರೆ ಮೊನ್ನೆ ಮಾನ್ಯ ಮುಖ್ಯಮಂತ್ರಿಯವರು ಧರ್ಮೋಪದೇಶ ಮಾಡಿದ್ದನ್ನು ಕೇಳಿದ ಮೇಲೆ ಸ್ವಲ್ಪ ಅಂಜಿಕೆ ಬಂದಿದೆ. ಅವರು 'ಧರ್ಮೋ ರಕ್ಷತಿ ರಕ್ಷಿತಃ' ಎಂದು ಆರಂಭ ಮಾಡಿ ರೂಲ್ ಅಫ್ ಲಾ ಬಗ್ಗೆ ದೀರ್ಘವಾಗಿ ಭಾಷಣ ಮಾಡಿದರು. ಈವೊತ್ತು ನಮ್ಮಲ್ಲಿ ನೀವು ನಡೆಸುವಂಥ ರೂಲ್ ಅಫ್ ಲಾ ಏನು ಇದೆ ಆದರ ಚೌಕಟ್ಟಿನೊಳಗೆ ನೀವು ಸುಧಾರಣೆಗಳನ್ನು ತರುತ್ತೀರಿ ಅಥವಾ ತರುವುದಕ್ಕೆ ಸಾಧ್ಯ ಎನ್ನುವ ನಂಬಿಕೆ ನಮಗೆ ಇಲ್ಲ. ಶ್ರೀಮಾನ್ ಚೆನ್ನಬಸಪ್ಪನವರು ಪಿ. ಡಬ್ಲ್ಯೂ. ಡಿ. ಕೋಡ್ ನಮ್ಮ ಮುಂದೆ ಹಿಡಿದು ಕಂಟ್ರಾಕ್ಟ್ ಪದ್ಧತಿ ರದ್ದು ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದರು. ತಾವು ಇವೊತ್ತಿನ ದಿವಸ ರೆವಿನ್ಯೂ ಕೋಡ್ ನಮ್ಮ ಮುಂದೆ ಹಿಡಿದು ಭೂಮಿ ಇಲ್ಲದವನಿಗೆ ಭೂಮಿ ಹಂಚುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಬಹುದು. ತಾವು ಕಾನೂನು ಕಟ್ಟಳೆಗಳು, ವಿಧಿನಿಯಮಗಳು, ರೂಲ್ ಅಫ್ ಲಾ, ಧರ್ಮ ಇವುಗಳ ಹೆಸರಿನಲ್ಲಿ ಆಡಳಿತ ಮಾಡಲಿಕ್ಕೆ ಹೊರಟಿರುವವರು ಎಂದು ಮುಖ್ಯ ಮಂತ್ರಿಗಳ ಭಾಷಣದಿಂದ ಅರ್ಥವಾಯಿತು. ತಾವು ಯಾವ ಧರ್ಮ, ಯಾವ ರೂಲ್ ಅಫ್ ಲಾ ರಕ್ಷಣೆ ಮಾಡಲಿಕ್ಕೆ ಹೊರಟಿದ್ದೀರಿ ಎಂದು ನೋಡಬೇಕು. ಮನು ಧರ್ಮ ಶಾಸ್ತ್ರದ ಪ್ರಕಾರ ಶೂದ್ರನಿಗೆ ಆಸ್ತಿ ಸಂಪಾದನೆ ಮಾಡುವ ಹಕ್ಕು ಇಲ್ಲ. ಅವನ ಧರ್ಮ ಬ್ರಾಹ್ಮಣ, ವೈಶ್ಯ, ಕ್ಷತ್ರಿಯರ ಪರಿಚಾರಿಕೆ ಮಾಡುವುದು ಮಾತ್ರ. ಶೂದ್ರ ಏನಾದರೂ ಆಸ್ತಿ ಸಂಪಾದನೆ ಮಾಡಿದರೆ ಬ್ರಾಹ್ಮಣ ಅದನ್ನು ವಶಪಡಿಸಿಕೊಳ್ಳಬಹುದು ಎಂದು ಮನು ಹೇಳಿದ್ದಾನೆ. ಚಂಡಾಲನಿಗೆ ವೇದ ಪಠಣ ಮಾಡುವ ಹಕ್ಕು ಇಲ್ಲ. ವೇದ ಪಠಣ ಮಾಡಿದರೆ ಅವನ ನಾಲಿಗೆ ಕತ್ತರಿಸಬೇಕು. ಹಾಗೆಯೇ ವೇದ ಪಠಣ ಕೇಳಿದರೆ ಕಬ್ಬಿಣ ಕರಗಿಸಿ ಅವನ ಕಿವಿಗೆ ಎರೆಯಬೇಕು. ಇಂಥ ಧರ್ಮವನ್ನು ರಕ್ಷಣೆ ಮಾಡಲಿಕ್ಕೆ ಹೊರಟಿದ್ದೀರಿ? ಹೀಗೆ ಇಂಡಿಯನ್ ಪೀನಲ್ ಕೋಡ್, ಕ್ರಿಮಿನಲ್ ಪ್ರೊಸೀಜರ್ ಕೋಡ್, ಟ್ರಾನ್ಸ್‌ಫರ್ ಆಫ್ ಪ್ರಾಪರ್ಟಿ ಆಕ್ಟ್, ಎವಿಡೆನ್ಸ್ ಆಕ್ಟ್, ಇತ್ಯಾದಿಗಳ ಪ್ರಕಾರ ಇವೊತ್ತಿನ ದಿವಸ ನೀವು ಆಡಳಿತ, ಏನು ನಡೆಸುತ್ತೀರಿ. ಆ ರೂಲ್ ಅಫ್ ಲಾ ದ ಚೌಕಟ್ಟಿನ ಒಳಗೆ ನಮ್ಮ ದೇಶದ ರೈತರನ್ನು, ಕಾರ್ಮಿಕರನ್ನು, ನಮ್ಮ ದೇಶದಲ್ಲಿ ಜನರನ್ನು ಶೋಷಣೆ ಮತ್ತು ದಬ್ಬಾಳಿಕೆ ಮಾಡಿ ಅವರನ್ನು ತುಳಿದು ಇಟ್ಟಿದ್ದೀರಿ. ಈ ಶಾಸನಗಳನ್ನು ಬದಲಾವಣೆ ಮಾಡದೆ ಈ ಚೌಕಟ್ಟಿನೊಳಗೆ ತಾವು ಯಾವ ರೀತಿ ಕಾನೂನು ಮಾಡಿದರೂ ಕೂಡ, ಜನತೆಗೆ ರಾಣಿ ಸಿಕ್ಕುವುದಿಲ್ಲ ಎನ್ನುವುದು ನನ್ನ ಅಭಿಪ್ರಾಯ. ಸಮಾಜವಾದದಲ್ಲಿ ನಿಮಗೆ ನಂಬಿಕೆ

ಇದ್ದರೆ ಧರ್ಮದ ಹೆಸರನ್ನು ಇಟ್ಟುಕೊಂಡಿರುವ ಅಧರ್ಮ ವ್ಯವಸ್ಥೆಗಳನ್ನು ಅಳಿಸಬೇಕು. ಇದಕ್ಕೆ ನಿಜವಾಗಿ ಮಹಾಭಾರತದ ಶಾಂತಿಪರ್ವದಲ್ಲಿ ಧರ್ಮರಾಯನಿಗೆ ಭೀಷ್ಮ ಉಪದೇಶ ಮಾಡಿದ ಧರ್ಮವನ್ನು ಸ್ವಲ್ಪ ಅನುಸರಿಸಿದರೆ ಒಳ್ಳೆಯದು ಎಂದು ಕಾಣುತ್ತದೆ.

"ನ ರಾಜೋ ನರಾಜ್ಯಂ ಆಸೀತ್ |
ನಚದಂಡೋ ನದಂಡಿತಃ |

ಧರ್ಮಾಯ್ಯೇವ ಪ್ರಜಾಸರ್ವಂ |
ರಕ್ಷಂತಿಸ್ಮ ಪರಸ್ಪರಂ ‖"

ಹಿಂದಿನ ಕಾಲದಲ್ಲಿ ರಾಜರು ಇರಲಿಲ್ಲ. ರಾಜ್ಯವು ಇರಲಿಲ್ಲ. ದಂಡವೂ ಇರಲಿಲ್ಲ ದಂಡಿಸಲ್ಪಟ್ಟ ಪ್ರಜೆಯೂ ಇರಲಿಲ್ಲ. ಎಲ್ಲರೂ ಸರಿಸಮಾನರಾಗಿದ್ದರು. ಎಲ್ಲರೂ ದುಡಿದು ಪರಸ್ಪರ ಸಹಕಾರದಿಂದ ಬಾಳುತ್ತಿದ್ದರು. ಕಾನೂನು ಕಟ್ಟಲೆ ಇಲ್ಲದಿದ್ದರೆ ಸಮಾಜ ಹೋಗುತ್ತದೆ. ಅರಾಜಕತೆ ಬರುತ್ತದೆ, ಎಂದೆಲ್ಲ ಹೇಳುತ್ತಾರೆ, ಅದು ಸರಿಯಲ್ಲ. ಹಾಗೆ ಆಗುವುದಿಲ್ಲ.

ಶ್ರೀ ಕೆ. ಪ್ರಭಾಕರ್.—ಧರ್ಮ ಸ್ಥಾಪನೆ ಪೌರಾಣಿಕವೋ ಅಥವ ಐತಿಹಾಸಿಕವೋ ?

ಶ್ರೀ ಬಿ. ವಿ. ಕಕ್ಕಿಲ್ಲಾಯ.—ಅದು ಐತಿಹಾಸಿಕ, ಅಂಥ ರಾಜ್ಯ ನಮ್ಮ ದೇಶದಲ್ಲಿ ನಿರ್ಮಾಣ ಮಾಡಬೇಕು ಎಂದು ಕೇಳಿಕೊಳ್ಳುವುದು. ದಂಡನೆ ಅಥವಾ ದಂಡನೆಯ ಉಪಕರಣಗಳು ಇಲ್ಲದೆ ಮನುಷ್ಯ ಮನುಷ್ಯನನ್ನು ಶೋಷಣೆ ಮಾಡುವುದಕ್ಕೆ ಅವಕಾಶವಿಲ್ಲದಂಥ ಸಮಾಜವನ್ನು ನಾವು ನಿರ್ಮಾಣ ಮಾಡಿದರೆ, ಶೋಷಣೆಯ ಕಾನೂನು ಕಟ್ಟಲೆಗಳು ಮತ್ತು ಇದನ್ನು ಸಂರಕ್ಷಣೆ ಮಾಡುವಂಥ ದಂಡನೆಯ ಸಂಘಟನೆಗಳು, ವ್ಯವಸ್ಥೆಗಳು ಇಲ್ಲದ ಥ ಸಮಾಜವಾದಿ ಸಮಾಜವನ್ನು ದೇಶದಲ್ಲಿ ರಚಿಸಿದಂತಾಗುತ್ತದೆ. ಅದಕ್ಕೆ ಸ್ವಲ್ಪ ಮನಸ್ಸು ಮಾಡಬೇಕು ಎಂದು ತಮ್ಮನ್ನು ಮೊದಲನೆಯದಾಗಿ ವಿನಂತಿ ಮಾಡಿಕೊಳ್ಳುತ್ತೇನೆ.

Sri D. B. KALMANKAR.—You want withering of the State ?

Sri B. V. KAKKILAYA.—Not withering away. First the present State must be broken up and then we will buil l a society where such State is not necessary. ಅದು ನಮ್ಮ ಕನ್‌ಸೆಪ್ಷನ್ ಅದು ನಿಜವಾದ ಪ್ರಜಾಪ್ರಭುತ್ವ. ತಾವು ಏನು ಇವತ್ತು ಸಮಾಜವಾದದ ಬಗ್ಗೆ ಹೇಳುತ್ತೀರಿ, ಆ ಸಮಾಜವಾದವನ್ನು ನಿಜವಾಗಿ ಜಾರಿಗೆ ತರಬೇಕಾಗಿದ್ದರೆ, ಇವತ್ತು ಯೋಚನೆ ಮಾಡುತ್ತಾ ಇರುವಂತಹ ವಿಚಾರಗಳನ್ನು ವಾಸ್ತವಿಕವಾದ ಸ್ಥಿತಿಗಳನ್ನು ಅಂಗೀಕಾರ ಮಾಡುವ ಮತ್ತು ಅದನ್ನು ಒಪ್ಪಿಕೊಂಡು ಕಾರ್ಯರೂಪಕ್ಕೆ ತರತಕ್ಕ ಮತ್ತು ಜನತೆಗೆ ಬೇಕಾದಂಥ ಸುಧಾರಣೆಗಳನ್ನು ಕಾರ್ಯಾಚರಣೆಗೆ ತರತಕ್ಕ ಸ್ವಾತಂತ್ರ್ಯ ನಮ್ಮ ಜನತೆಗೆ ಬೇಕು. ಕೆಲವು ಉದಾಹರಣೆಗಳನ್ನು ಕೊಡುತ್ತೇನೆ. ಭೂಸುಧಾರಣೆ ಜಾರಿಗೆ ತರುವುದಕ್ಕೆ ಇನ್ನೂ ಸಾಧ್ಯವಾಗಿಲ್ಲ. ಇಷ್ಟು ವರ್ಷಗಳಾದ ಮೇಲೆ ಒಂದು ತಿದ್ದುಪಡಿ ಮಸೂದೆಯನ್ನು ತಂದಿದ್ದೀರಿ. ಈ ಸಭೆ ಅದಕ್ಕೆ ಅಂಗೀಕಾರ ಕೊಟ್ಟಿದೆ. ಅನೇಕ ಸದಸ್ಯರು ಹೇಳಿದ ಹಾಗೆ, ಇದರಲ್ಲಿ ಕೇವಲ ಕೆಲವೇ ಮಂದಿಗೆ ರಕ್ಷಣೆ ಸಿಗಬಹುದು. ಅಥವಾ ರಕ್ಷಣೆ ಸಿಕ್ಕಿದೆ. ಇನ್ನೂ ಸಾವಿರಾರು ಕೇಸುಗಳು ಕೋರ್ಟುಗಳಲ್ಲಿ ಇವೆ. ಇವೊತ್ತು ಕೂಡ ಗೇಣಿ ವಸೂಲು ಮಾಡುವುದಕ್ಕೆ ಮನೆಯಲ್ಲಿರುವ ದನಕರುಗಳನ್ನು, ಜಾನುವಾರುಗಳನ್ನು ಕಿತ್ತುಕೊಂಡು ಹೋಗುವುದಕ್ಕೆ ಡಿಕ್ರಿಗಳನ್ನು ಸಂಪಾದನೆ ಮಾಡಿ ರೈತರಿಗೆ ಕಿರುಕಳ ಕೊಡುತ್ತಿದ್ದಾರೆ. ಇದರ ಬಗ್ಗೆ ತುರ್ತು ಆಗಿ ಕ್ರಮ ತೆಗೆದುಕೊಳ್ಳುವುದಕ್ಕೆ ಇವೊತ್ತಿನ ದಿನ ಕಾನೂನಿನಲ್ಲಿ ಅವಕಾಶವಿಲ್ಲ ಎಂದು ತಮ್ಮಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಭೂಸುಧಾರಣೆ ಶಾಸನ ತಿದ್ದುಪಡಿ ಯಾವುದು ಬೇಕಾದರೂ ತನ್ನಿ, ಬೇಗನೆ ತರಬೇಕೆಂದು ಕೇಳಿಕೊಳ್ಳುತ್ತೇನೆ. ಇವೊತ್ತಿನ ದಿವಸ ತಾತ್ಕಾಲಿಕವಾಗಿ ಕಾರ್ಯವನ್ನು ಮಾಡಬೇಕು. ಅನೇಕ ಕಡೆಗಳಗಲ್ಲಿ ರೈತರ ಮೇಲೆ ಗೇಣಿ ಬಾಕಿಗೋಸ್ಕರ ಯಾವ ರೀತಿ ಕಟ್ಟಳೆಗಳು ಇವೆ, ಆ ಕಟ್ಟಳೆಗಳನ್ನು ಮತ್ತು ಡಿಕ್ರಿ ಆಗಿರುವ ಆರ್ಡರ್‌ಗಳನ್ನೂ ಎಲ್ಲವನ್ನೂ ಕೂಡ ತಕ್ಷಣ ಸ್ಟೇ ಮಾಡಿಸಬೇಕು. ಇಲ್ಲ ಎಂದರೆ ನಿಜವಾಗಿ ನಮ್ಮ ರೈತರಿಗೆ ರಕ್ಷಣೆ ಸಿಕ್ಕುವುದಿಲ್ಲ ಎಂದು ನಾನು ತಮಗೆ ಹೇಳಬೇಕಾಗಿದೆ. ಎರಡನೆಯದು ಹಳ್ಳಿಗಳಲ್ಲಿ ಎಲ್ಲಾ ಕಡೆಗಳಲ್ಲಿ ತಾವು ಭೂಸುಧಾರಣೆ ತರುತ್ತೀರಿ ಸೀಲಿಂಗ್ ಕಡಿಮೆಯಾಗುತ್ತದೆ ಎನ್ನುವ ಪ್ರಚಾರ ಆಗಲೇ ಬಂದಿದೆ. ಈ ನಿಯಮಗಳಿಂದ ಒಪ್ಪಿಸಿಕೊಳ್ಳಲು ಬೇಕಾದ ದಾಖಲೆಗಳನ್ನು ವ್ಯವಸ್ಥೆಗಳನ್ನು ಈಗಾಗಲೇ ದೊಡ್ಡ ಭೂಮಾಲೀಕರು ಮಾಡುತ್ತಿದ್ದಾರೆ. ಬಲಾತ್ಕಾರವಾಗಿ ಜಮೀನನ್ನು ರೈತರಿಂದ ವಶಪಡಿಸಿಕೊಳ್ಳುವ ಕ್ರಮ ಎಲ್ಲಾ

(SRI B. V. KAKKILAYA)

ಹಳ್ಳಿಗಳಲ್ಲೂ ನಡೆಯುತ್ತಿದೆ. 145 ನೇ ಸೆಕ್ಷನ್ ಕ್ರಿಮಿನಲ್ ಪ್ರೊಸೀಜರ್ ಕೋಡಿನಲ್ಲಿ ಒಂದು ವಿಧಿ ಇದೆ. ಬಹಳ ವ್ಯಸನದಿಂದ ಇಲ್ಲಿ ಹೇಳಬೇಕಾಗಿದೆ. ತಮ್ಮ ಪೋಲೀಸ್ ಅಧಿಕಾರಿಗಳು ರೆವಿನ್ಯೂ ಅಧಿಕಾರಿಗಳು ಸಾಮೀಲಾಗಿ ಆ 145 ಸೆಕ್ಷನ್ ಪ್ರಕಾರ ರೈತರು ಮಾಲಿಕರು ಯಾರು ಜಮೀನಿನಲ್ಲಿ ಪ್ರವೇಶ ಮಾಡಬಾರದು, ಎಂದು ಆರ್ಡರ್ ಕೊಡುತ್ತಾರೆ. ನಿಜವಾಗಿ ರೈತರು ಪೋಲೀಸರಿಗೆ ಹೆದರಿ ದೂರ ಉಳಿಯುತ್ತಾರೆ. ಹೀಗೆ ರೈತರನ್ನು ದೂರ ನಿಲ್ಲಿಸಿ ಭೂಮಾಲಿಕರು ಮಾತ್ರ ಪವರ್ ಟಿಲ್ಲರ್ ತರಿಸಿ, ಯಾವುದೇ ರೀತಿಯಲ್ಲಿಬೇರೆ ಜನರನ್ನು ತೆಗೆದುಕೊಂಡು ಬಂದು ಅವರ ಮೂಲಕ ವ್ಯವಸಾಯ ಮಾಡಿಸುತ್ತಾರೆ. ಅದನ್ನು ಪೋಲೀಸರು ತಡೆಯುವುದಿಲ್ಲ. ತಮಗೆ ಬೇಕಾದರೆ ಪೋಲೀಸ್ ಮತ್ತು ರೆವಿನ್ಯೂ ಅಧಿಕಾರಿಗಳ ಪಟ್ಟಿಮಾಡಿ ಕೊಡಲಿಕ್ಕೆ ತಯಾರಿದ್ದೇನೆ. ಈ ಸಭೆಯಲ್ಲಿ ಹೇಳುವುದು ಅಷ್ಟು ಉಚಿತವಲ್ಲ ಎನ್ನುವ ಕಾರಣದಿಂದ ಹೆಸರುಗಳನ್ನು ಹೇಳುತ್ತಾ ಇಲ್ಲ. ದಕ್ಷಿಣಕನ್ನಡ ಜಿಲ್ಲೆಯಲ್ಲಿ ಕೆಲವು ಅಸಿಸ್ಟೆಂಟ್ ಕಮೀಷನರ್‌ಗಳು ಭೂಮಾಲೀಕರೊಂದಿಗೆ ಸೇರಿಕೊಂಡು, ಅವರಿಗೆ ನಿಮ್ಮ ಕೇಸ್ ಬಲವಾಗಿದೆ; ನೀವು ದಾವೆ ಮಾಡಿ, ನಾವು 145 ನೇ ಸೆಕ್ಷನ್ ಪ್ರಕಾರ ಇಂಜಂಕ್ಷನ್ ಆರ್ಡರ್ ಮಾಡುತ್ತೇವೆ ಮತ್ತು ಗೇಣಿದಾರರನ್ನು ಹೊರಗೆ ಹಾಕುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂಬುದಾಗಿ ಹೇಳುತ್ತಿದ್ದಾರೆ.ಇಂತಹ ಒಂದು ಅವ್ಯವಸ್ಥೆ ನಮ್ಮ ಜಿಲ್ಲೆಯಲ್ಲಿ ನಡೆಯುತ್ತಿದೆ. ಅಧಿಕಾರಿಗಳು ಮತ್ತು ಭೂಮಾಲೀಕರಿಂದ ಗೇಣಿದಾರರಿಗೆ ನಾನಾ ರೀತಿಯ ತೊಂದರೆಗಳಾಗುತ್ತಿವೆ. ಅನ್ಯಾಯಗಳಾಗುತ್ತಿರುವುದನ್ನು ತೋರಿಸಿಕೊಡುವುದಕ್ಕೆ ನಾನು ತಯಾರಿದ್ದೇನೆ. ಈಗ ಆಗುತ್ತಿರುವ ಅನ್ಯಾಯಗಳನ್ನು ಯಾವ ರೀತಿ ನಿಲ್ಲಿಸುತ್ತೀರಾ ಎಂದು ಕೇಳುತ್ತೇನೆ. ಈಗ ಅಲ್ಲಿರುವ ವಾಸ್ತವ ಸ್ಥಿತಿಯನ್ನು ತಮಗೆ ಹೇಳುತ್ತಿದ್ದೇನೆ. ಇಂದು ರೂಲ್ ಅಫ್ ಲಾ ಏನು ಹೇಳುತ್ತದೆ ಎಂದರೆ ಯಾರ ಹೆಸರಿನಲ್ಲಿ ದಾಖಲೆಗಳಿವೆಯೋ ಅವರೇ ಭೂಮಾಲೀಕರು ಎಂಬುದಾಗಿ. The presumption under the law is that the owner of the land is in actual possession of the land, but that is not the reality. It is the tenant who is in actual possession of the land. His name is not in the records and so he cannot prove that he is the tiller.

ಶ್ರೀ ಕೆ. ಪ್ರಭಾಕರ್.—ಗೇಣಿದಾರರ ಹೆಸರನ್ನು ಪಹಣಿಯಲ್ಲಿ ಬರೆಯಬೇಕೆಂದು ನಿಯಮವಿದ್ದರೂ ಸಹ ಅನೇಕ ಕೇಸ್‌ಗಳಲ್ಲಿ ಬರೆಯುತ್ತಿಲ್ಲ.

ಶ್ರೀ ಬಿ. ವಿ. ಕಕ್ಕಿಲಾಯ.—ಪಹಣಿ ಲೆಕ್ಕದಲ್ಲಿ ಗೇಣಿದಾರರ ಹೆಸರು ಇಲ್ಲದಿದ್ದರೆ ಇಂದಿನ ಕಾನೂನು ಪ್ರಕಾರ ಯಾರ ಹೆಸರು ಪಹಣಿ ಲೆಕ್ಕದಲ್ಲಿ ಇರುತ್ತದೋ ಅವರೇ ಹಿಡುವಳಿದಾರರಾಗುತ್ತಾರೆ. ಅಂದಮೇಲೆ ಸರ್ಕಾರದವರು ಗೇಣಿದಾರರಿಗೆ ಯಾವ ರೀತಿ ಮನ್ನಣೆ ಕೊಡುತ್ತಾರೆಂದು ನಾನು ಕೇಳುತ್ತೇನೆ.

SRI D. B. KALMANKAR.—Section 145 of the Criminal Procedure Code speaks of the physical possession of the land prior to two months of the proceedings.

SRI B. V. KAKKILAYA.—That is exactly what I am saying. The actual possessor of the land is the person who is in actual possession of it. An absentee landlord who resides in the town simply because he has the katha in his name or the land is registered in his name can claim that he is in possession and evict the tenant. The law is in favour of the landlord and not in favour of the tenant. How are you going to change the situation? That is the problem before us. ಇದನ್ನು ಬಗೆಹರಿಸಬೇಕಾದರೆ, ನಿಮ್ಮ ಅಧಿಕಾರಿಗಳು ಏನಿದ್ದಾರೆ ಅವರು ರೂಲ್ ಆಫ್ ಲಾ ಅನ್ನು ಭೂಮಾಲೀಕರಿಗೆ ವಿರುದ್ಧವಾಗಿ, ಗೇಣಿದಾರರ ಪರವಾಗಿ ಉಪಯೋಗ ಮಾಡಿದ್ದೇ ಆದರೆ ಭೂಸುಧಾರಣೆಯನ್ನು ಜಾರಿಗೆ ತರಬಹುದು. ಅದಕ್ಕಾಗಿ ನಮ್ಮ ಪಕ್ಷದ ಕಾರ್ಯಕರ್ತರು ನಿಮ್ಮ ಪಕ್ಷದ ಕಾರ್ಯಕರ್ತರು ಮತ್ತು ಎಲ್ಲ ಪಕ್ಷದ ಕಾರ್ಯಕರ್ತರು ಗೇಣಿದಾರರ ಪರವಾಗಿ ನಿಂತು ಹೋರಾಟ ಮಾಡಬೇಕು. ಮಿಲಿಟರಿ ಬಂದರೂ ಜಮೀನು ಬಿಡುವುದಿಲ್ಲ, ಉಳುಮೆ ಮಾಡುತ್ತೇವೆಂದು ಹೇಳಬೇಕು. 145ನೇ ಸೆಕ್ಷನ್ ಪ್ರಕಾರ ಇಂಜಂಕ್ಷನ್ ಅರ್ಡರ್ ಕೊಟ್ಟರೂ ಸಹ ಜಮೀನ್ನು

ಬಿಡುವುದಿಲ್ಲ, ಉಳುವೆ ಮಾಡುತ್ತೇವೆಂದು ಹೇಳಬೇಕು. ರಕ್ತ ಬೇಕಾದರೂ ಕೊಡುತ್ತೇವೆ, ಜಮೀನು ಬಿಡುವುದಿಲ್ಲವೆಂದು ಹೇಳಬೇಕು. ಈ ರೀತಿ ನಾವುಗಳು ಗೇಣಿದಾರರನ್ನು ಹುರಿದುಂಬಿಸಬೇಕು. ಮತ್ತು ರಕ್ಷಣೆ ಕೊಡಬೇಕು. ಈ ರೀತಿ ಮಾಡುವುದಕ್ಕೆ ಸರ್ಕಾರದ ಪ್ರೋತ್ಸಾಹ ಇದೆಯೋ ಎಂದು ನಾನು ನೇರವಾಗಿ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಜಮೀನು ಹಂಚಿಕೆಯ ಬಗ್ಗೆ ಹೇಳಬೇಕೆಂದರೆ, ನಮ್ಮ ಜಿಲ್ಲೆಯಲ್ಲಿ ಅನೇಕ ಜನರು ಎಷ್ಟೋ ವರ್ಷಗಳಿಂದ ಜಮೀನನ್ನು ಸಾಗುವಳಿ ಮಾಡುತ್ತಿದ್ದಾರೆ. ಜಮೀನಿನಲ್ಲಿಯೇ ಮನೆಗಳನ್ನು ಕಟ್ಟಿಸಿಕೊಂಡು ವಾಸ ಇದ್ದಾರೆ. ತೆಂಗಿನಸಸಿ ಮತ್ತು ಅಡಿಕೆಸಸಿಗಳನ್ನು ನೆಟ್ಟು ಬೆಳೆಸಿದ್ದಾರೆ. ಆದರೂ ಆ ಜಮೀನುಗಳನ್ನು ಅವರ ಹೆಸರಿಗೆ ಮಾಡಿಲ್ಲ. ಏತಕ್ಕೆ ಮಾಡಲಿಲ್ಲ ಎಂದು ಅಧಿಕಾರಿಗಳನ್ನು ಕೇಳಿದರೆ ರೆವಿನ್ಯೂ ಕೋಡ್ ಅಡ್ಡ ಬರುತ್ತದೆಂದು ಹೇಳುತ್ತಾರೆ. ಸಾವಿರಾರು ಜನರು ತಾವು ಮಾಡುತ್ತಿರುವ ಜಮೀನನ್ನು ತಮ್ಮ ಹೆಸರಿಗೇ ಮಾಡಬೇಕೆಂದು ಕೇಳಿಕೊಂಡಿದ್ದರೂ ಅವನ್ನು ಇತ್ಯರ್ಥ ಮಾಡದೆ ಬದಿಗಿಟ್ಟಿದ್ದಾರೆ. ಜಮೀನಿನ ಸುತ್ತ ಬೇಲಿ ಹಾಕಿಕೊಂಡು ಅನೇಕ ವರ್ಷಗಳಿಂದ ವ್ಯವಸಾಯ ಮಾಡುತ್ತಿದ್ದರೂ ಸಹ ಅಧಿಕಾರಿಗಳು ಒಂದು ಹೊಸ ತಂತ್ರವನ್ನು ಹೂಡಿ ನಿಮಗೆ ಜಮೀನನ್ನು ಕೊಡುವುದಕ್ಕಾಗುವುದಿಲ್ಲ, ಬೇರೆಯವರಿಗೆ ಕೊಡುತ್ತೇವೆ ಎಂಬುದಾಗಿ ಹೇಳಿ, ತಮಗೆ ಬೇಕಾದವರಿಂದ ಅರ್ಜಿ ಬರೆಸಿಕೊಂಡು ಜಮೀನನ್ನು ಕೊಡುವ ಪ್ರಯತ್ನ ಮಾಡುತ್ತಿದ್ದಾರೆ. ಇಂತಹ ಅಕ್ರಮಗಳು ನಡೆಯುವುದನ್ನು ಸರ್ಕಾರದವರು ತಪ್ಪಿಸಬೇಕು. ಇಲ್ಲದಿದ್ದರೆ ಹರಿಜನರಿಗೆ ಗಿರಿಜನರಿಗೆ ಮತ್ತು ಬಡಕೃಷಿ ಕಾರ್ಮಿಕರಿಗೆ ಸಹಾಯ ಮಾಡಿದಂತಾಗುವುದಿಲ್ಲ. ನಮ್ಮ ಜಿಲ್ಲೆಯಲ್ಲಿ ಬೇಕಾದಷ್ಟು ಜಮೀನು ಇದೆ. ಅದನ್ನು ಜಮೀನು ಇಲ್ಲದ ಹರಿಜನ ಮತ್ತು ಗಿರಿಜನರಿಗೆ ಮತ್ತು ಬಡವರಿಗೆ ಹಂಚಬೇಕು. ಈಗ ಏನಾಗುತ್ತಿದೆ ಎಂದರೆ, ಒಬ್ಬರ ಮೇಲೆ ಒಬ್ಬರನ್ನು ಎತ್ತಿಕಟ್ಟಿ ಭೂಮಾಲೀಕರು ಮತ್ತು ಭೂಮಿ ಇದ್ದವರೇ ಎಲ್ಲ ಸರ್ಕಾರೀ ಭೂಮಿಯನ್ನು ಕಬಳಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇದಕ್ಕೆ ಅಧಿಕಾರಿಗಳು ಪ್ರೋತ್ಸಾಹ ಕೊಡುತ್ತಿದ್ದಾರೆ. ಇದನ್ನು ಸರ್ಕಾರದವರು ತಡೆಗಟ್ಟಬೇಕು. ಹೆಚ್ಚುವರೀ ಭೂಮಿಯನ್ನು ಹಂಚಲು ಸರ್ಕಾರದವರು ಲ್ಯಾಂಡ್ ಗ್ರ್ಯಾಂಟ್ ಕಮಿಟಿ ಎಂಬುದಾಗಿ ಮಾಡಿದ್ದಾರೆ. ಅವರು ಎಲ್ಲಿಯಾದರೂ ಹೋಟೇಲ್‌ನಲ್ಲಿ ಅಥವಾ ಒಂದು ಕೊಠಡಿಯಲ್ಲಿ ಕುಳಿತುಕೊಂಡು ಬಂದಂಥ ಅರ್ಜಿಗಳನ್ನು ಮತ್ತು ಸರ್ವೆ ನಂಬರ್‌ಗಳನ್ನು ನೋಡಿ ಜಮೀನು ಹಂಚಿಕೆ ಮಾಡುತ್ತಿದ್ದಾರೆ. ಈ ಕ್ರಮ ಸರಿಯಾದುದಲ್ಲ. ಆ ಕಮಿಟಿಯವರು ಪ್ರತಿಯೊಂದು ಸರ್ವೆ ನಂಬರ್‌ನ ಜಾಗಗಳನ್ನು ನೋಡಬೇಕು ; ಅಲ್ಲಿ ನಿಜವಾಗಿ ಯಾರು ಭೂಮಿ ಸಾಗುವಳಿ ಮಾಡುತ್ತಿದ್ದಾರೆಂಬ ಬಗ್ಗೆ ಜನರಿಂದ ವಿಚಾರಣೆ ಮಾಡಬೇಕು, ನಂತರ ಜಮೀನನ್ನು ಯೋಗ್ಯರಾದವರಿಗೆ ಹಂಚಬೇಕೆಂದು ಹೇಳುತ್ತೇನೆ. ಈ ರೀತಿ ಮಾಡದಿದ್ದರೆ ಜಮೀನು ಇದ್ದವರೇ ಜಮೀನನ್ನು ಕಬಳಿಸುವುದಕ್ಕೆ ಅವಕಾಶವಾಗುತ್ತದೆಂದು ಹೇಳುತ್ತೇನೆ. ಜಮೀನು ಹಂಚುವಾಗ ಮೊದಲ ಪ್ರಾಶಸ್ತ್ಯವನ್ನು ಹರಿಜನ ಮತ್ತು ಗಿರಿಜನರಿಗೆ ಕೊಡಬೇಕು. ಅವರಿಗೆ ಶೇಕಡ 50ರಷ್ಟು ಅಲ್ಲದಿದ್ದರೆ 75ರಷ್ಟು ಆದರೂ ಕೊಡಿ, ಅದಕ್ಕೆ ನನ್ನ ಅಭ್ಯಂತರವಿಲ್ಲ. ಆದರೆ ಅವರ ಹೆಸರಿನಲ್ಲಿ ಇತರರು ಕಬಳಿಸುವುದಕ್ಕೆ ಬಿಡಬೇಡಿ ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಲ್ಯಾಂಡ್ ರೆಕಾರ್ಡ್ಸ್ ಅಫ್ ರೈಟ್ಸ್‌ನ್ನು ಜಾರಿಗೆ ತರುವ ಕ್ರಮವನ್ನು ಸರ್ಕಾರದವರು ಕೈಕೊಂಡಿದ್ದಾರೆ. ಈ ಕೆಲಸ ನಮ್ಮ ರಾಜ್ಯದಲ್ಲಿ ಈಗ ಪ್ರಾರಂಭವಾಗಿದೆ. ರೆಕಾರ್ಡ್ಸ್ ಆಫ್ ರೈಟ್ಸ್‌ನ್ನು ಶ್ಯಾನುಭೋಗರು ಬರೆಯುವುದಕ್ಕೆ ಮೊದಲು ಅವರು ಮನೆ ಮನೆಗೂ ಹೋಗಿ ವಿವರಗಳನ್ನು ಸಂಗ್ರಹ ಮಾಡುತ್ತಿದ್ದಾರೆ. ಆದರೆ ಯಾವಾಗ ಎಲ್ಲಿಗೆ ಬರುತ್ತಾರೆಂಬ ವಿಷಯ ರೈತರಿಗೆ ಗೊತ್ತಿರುವುದಿಲ್ಲ. ರೈತರಿಗೆ ಮೊದಲೇ ತಿಳುವಳಿಕೆ ಕೊಟ್ಟು ಅವರು ಬರುತ್ತಿಲ್ಲ. ಇದರಿಂದ ರೈತರಿಗೆ ತೊಂದರೆಯಾಗುತ್ತಿದೆ. ರೆಕಾರ್ಡ್ಸ್ ಆಫ್ ರೈಟ್ಸ್‌ನ್ನು ಶ್ಯಾನುಭೋಗರು ತಯಾರು ಮಾಡಿದ ಮೇಲೆ ಸಂಬಂಧಪಟ್ಟ ಪಂಚಾಯಿತಿಗಳಿಗೆ ತಹಶೀಲ್‌ದಾರರು, ಡೆಪ್ಯೂಟಿ ತಹಶೀಲ್‌ದಾರರು ಮತ್ತು ಅಸಿಸ್ಟೆಂಟ್ ಕಮೀಷನರ್ ಅವರು ಒಂದು ದಿವಸ ಬಂದು ಸ್ಕ್ರುಟಿನಿ ಮಾಡುತ್ತಾರೆ. ಅವರು ಆ ರೀತಿ ಸ್ಕ್ರುಟಿನಿ ಮಾಡುವ ಕಾಲಕ್ಕೆ ಎಲ್ಲ ರೈತರಿಗೂ ತಮ್ಮ ಆಕ್ಷೇಪಣೆಗಳು ಏನಾದರು ಇದ್ದರೆ ಹೇಳುವುದಕ್ಕೆ ಅವಕಾಶವಾಗುವಂತೆ ನೋಟೀಸ್‌ಗಳನ್ನು ಕೊಡುತ್ತಿಲ್ಲ. ಇನ್ನು ಮುಂದೆ ರೆಕಾರ್ಡ್ಸ್ ಆಫ್ ರೈಟ್‌ನ್ನು ಬರೆಯುವುದಕ್ಕೆ ಪ್ರಾರಂಭ ಮಾಡಿದ ಕೂಡಲೇ ಆಯಾ ಸರ್ವೆ ನಂಬರ್‌ನಲ್ಲಿರುವ ರೈತರಿಗೆ ತಮ್ಮ ಹಕ್ಕುಗಳು ಏನೇನಿವೆ ಎಂಬುದನ್ನು ತಿಳಿಸುವುದಕ್ಕೆ ಅವಕಾಶ ಕೊಡಬೇಕು. ಏನಾದರು ಆಕ್ಷೇಪಗಳು ಇದ್ದರೆ ಅದನ್ನು ಶಾನುಭೋಗರೇ ಇತ್ಯರ್ಥ ಮಾಡದೆ, ಆ ಅರ್ಜಿಯ ಕಾಪಿಯನ್ನು ಮೇಲಿನ ಅಧಿಕಾರಿಗೂ ಸಹ ಕಳಿಸಿಕೊಟ್ಟು ಪರಿಶೀಲನೆ ಮಾಡುವುದಕ್ಕೆ ಅವಕಾಶವಿರಬೇಕು. ಮುಖ್ಯವಾಗಿ ಕಾನೂನು ಬದ್ಧತೆಯ ಸ್ವರೂಪ ಕೊಡುವಂತಹ ನಿಯಮವನ್ನು ರಚನೆ ಮಾಡಬೇಕು. ಇದನ್ನು ಮಾಡಿದರೆ ಮಾತ್ರ ರೈತರಿಗೆ ಅನುಕೂಲವಾಗುತ್ತದೆ.

(Sri B. V. Kakkilaya)

ಕಾಲಾವಕಾಶ ಸ್ವಲ್ಪ ಜಾಸ್ತಿ ತೆಗೆದುಕೊಂಡರೂ ಸರಿಯೆ, ಸರಿಯಾದಂಥ ರೆಕಾರ್ಡ್ ಆಫ್ ರೈಟ್ಸ್‌ನ್ನು ತಯಾರು ಮಾಡಬೇಕು. ಅವಸರದಲ್ಲಿ ಮಾಡಿದರೆ ರೈತರಿಗೆ ತೊಂದರೆಯಾಗುತ್ತದೆ. ರೆಕಾರ್ಡ್ ಅಫ್ ರೈಟ್ಸ್‌ನ್ನು ತಯಾರು ಮಾಡುವಾಗ ಆಯಾ ಹಳ್ಳಿಯಲ್ಲಿರುವ ಕಾರ್ಯಕರ್ತರನ್ನು ಮತ್ತು ಹಳ್ಳಿಯಲ್ಲಿರುವ ಜನತೆಯನ್ನು ವಿಚಾರಿಸಿಕೊಂಡು ತಯಾರು ಮಾಡಬೇಕು.

11.30 A.M.

ಇನ್ನೊಂದು ವಿಚಾರ ಹೇಳುವುದೇನೆಂದರೆ ನಮ್ಮಲ್ಲಿ ಕುಂಕಿ ಎಂದು ಇದೆ. ಅದು ಈ ಕಡೆ ಇಲ್ಲ. ಈಗ ಅಲ್ಲಿ ಒಬ್ಬ ವರ್ಗದಾರ ಇದ್ದರೆ ಅವನ ಜಮೀನಿನ ಸುತ್ತಲೂ ಸರ್ಕಾರಿ ಜಮೀನು ಇರುತ್ತದೆ. ಅದರಲ್ಲಿ ಗಿಡಮರಗಳು ಬೆಳೆದಿರುತ್ತವೆ. ಅದಕ್ಕೆ ಕುಂಕಿ ಜಮೀನು ಎಂದು ಹೇಳುತ್ತಾರೆ. ಆ ಜಮೀನನ್ನು ಯಾರಿಗೂ ಕೊಡಬಾರದು. ಅದು ಅವನಿಗೇ ಇರಬೇಕು. ಅದರಲ್ಲಿ ಅವನು ಸೌದೆ ಸೊಪ್ಪು ಇತ್ಯಾದಿಗಳನ್ನು ತೆಗೆದುಕೊಳ್ಳುವುದಕ್ಕೆ ಅನುಕೂಲವಾಗಿದೆ. ಇದಕ್ಕೆ ಕುಂಕಿ ರೈಟ್ಸ್ ಎಂದು ಹೇಳುತ್ತಾರೆ. ಈಗ ನಾಳೆ ಭೂಸುಧಾರಣಾ ಕಾನೂನು ಜಾರಿಗೆ ಬಂದರೆ ಯಾವುದಾದರೂ ಒಂದು ಜಮೀನು ವರ್ಗದಾರನಿಂದ ಗೇಣಿದಾರನಿಗೆ ಬಂದರೆ ಆ ಜಮೀನಿಗೆ ಸಂಬಂಧಪಟ್ಟ ಕುಂಕಿಯೂ ಸಹ ಆ ಗೇಣಿದಾರನಿಗೆ ಬರುವಂತೆ ಮಾಡಬೇಕಾಗುತ್ತದೆ. ಏತಕ್ಕೆಂದರೆ ಭೂಮಿಯು ಒಬ್ಬನ ವಶದಲ್ಲಿ ಇರುವುದಿಲ್ಲ. ಅದು ಅನೇಕ ಜನಗಳ ವಶದಲ್ಲಿರುತ್ತದೆ, ಅಂಥಾ ಸಂದರ್ಭದಲ್ಲಿ ಯಾವುದಾದರೂ ಒಂದು ಜಮೀನು ವರ್ಗದಾರನಿಂದ ಗೇಣಿದಾರನಿಗೆ ಹೋದರೆ ಆ ಜಮೀನಿಗೆ ಸಂಬಂಧಪಟ್ಟ ಕುಂಕಿ ರೈಟ್ಸ್ ಏನಿರುತ್ತದೆ ಅದು ಭೂಮಾಲಿಕರಿಗೇ ಉಳಿಯುತ್ತದೆ. ಆ ರೀತಿ ಆಗಬಾರದು ವರ್ಗದಾರರಿಂದ ಯಾವ ಜಮೀನು ಗೇಣಿದಾರನಿಗೆ ಬರುತ್ತದೆಯೋ ಅದಕ್ಕೆ ಸಂಬಂಧಪಟ್ಟ ಕುಂಕಿರೈಟ್ಸ್ ಕೂಡ ಗೇಣಿದಾರನ ವಶಕ್ಕೆ ಬರಬೇಕಾಗುತ್ತದೆ. ಈ ದೃಷ್ಟಿಯಿಂದ ವರ್ಗದಾರನಿಂದ ಜಮೀನು ವಿಂಗಡಣೆಯಾಗುವಾಗ ಗೇಣಿದಾರನಿಗೆ ಕುಂಕಿ ರೈಟ್ಸ್ ಸಿಕ್ಕದಿದ್ದರೆ ಅವನು ಸೊಪ್ಪು ಸೌದೆ ಇತ್ಯಾದಿಗಳನ್ನು ತರುವುದಕ್ಕೆ ಅನಾನುಕೂಲವಾಗುತ್ತದೆ. ಆದಕಾರಣ ಅದು ಆಗದ ಹಾಗೆ ವ್ಯವಸ್ಥೆ ಮಾಡಿ ಎಲ್ಲಾ ರೈತರಿಗೂ ಸರ್ವೇ ಸಾಧಾರಣವಾಗಿ ಉಪಯೋಗಕ್ಕೆ ಬೇಕಾದ ಸವಲತ್ತುಗಳು ಇರುವ ಹಾಗೆ ನೀರು, ಸೌದೆ, ಸೊಪ್ಪು, ಜಾನುವಾರುಗಳಿಗೆ ಮೇವು ಈ ಎಲ್ಲಾ ಅವಕಾಶ ಇರುವ ಹಾಗೆ ಅವರಿಗೆ ಕುಂಕಿ ರೈಟ್ಸ್‌ನ್ನು ಪುನರ್ ವ್ಯವಸ್ಥೆ ಮಾಡಬೇಕು ಎಂದು ನಾನು ತಮ್ಮಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ವರ್ಷ ಮಳೆ ಬಹಳ ತಡವಾಗಿ ಬಂದಿವೆ. ಈ ರೀತಿ ಮಳೆ ತಡವಾಗಿ ಬಂದದ್ದರಿಂದ ಭೂಮಿಯಲ್ಲಿ ಒಮ್ಮೆ ಹಾಕಿದ ಬೀಜ ಮೇಲಕ್ಕೆ ಮೊಳಕೆಯಾಗಿ ಬಂದು ಅದು ಹಾಗೆಯೇ ಒಣಗಿ ಹೋಯಿತು. ಅನೇಕ ಕಡೆ ಸ್ವಲ್ಪ ಮಟ್ಟಿಗೆ ಬೆಳೆದಿದ್ದ ಬೆಳೆಗೆ ಕೂಡ ಹುಳು ಬಿದ್ದು ಬೆಳೆಯೆಲ್ಲಾ ಹಾಳಾಗಿ ಹೋಯಿತು. ಅಂಥವರಿಗೆ ಸರ್ಕಾರದವರು ಯಾವುದಾದರೂ ಒಂದು ರೀತಿಯ ಪರಿಹಾರವನ್ನು ಒದಗಿಸಿಕೊಡಬೇಕು ಎಂದು ನಾನು ಹೇಳುತ್ತೇನೆ. ರೈತರಿಗೆ ಕೆಲವು ಅನುಕೂಲತೆಗಳನ್ನು ಮಾಡಿಕೊಡಬೇಕು ಅದರ ಕಡೆಗೆ ಸರ್ಕಾರದವರು ತಮ್ಮ ಗಮನವನ್ನು ಹರಿಸಬೇಕು. ಆ ಬಗ್ಗೆ ಯಾವರೀತಿ ಮಾಡಬೇಕೆಂಬ ವಿಚಾರವನ್ನು ಬೇಡಿಕೆಗಳ ಮೇಲೆ ಚರ್ಚೆ ಮಾಡುವಾಗ ನಾನು ಅವುಗಳನ್ನು ತಮ್ಮ ಗಮನಕ್ಕೆ ತರುತ್ತೇನೆ.

ನಮ್ಮ ದೇಶದಲ್ಲಿ ಇವೊತ್ತು ಫಾರೆಸ್ಟ್ ಇಲಾಖೆಯ ವಶದಲ್ಲಿರುವ ಜಮೀನನ್ನು ಮೊದಲಿಗಿಂತ ಜಾಸ್ತಿ ಮಾಡಿದ್ದಾರೆ. ಈಗ ಉದಾಹರಣೆಗೆ ಹೇಳುವುದಾದರೆ ನಮ್ಮ ಜಿಲ್ಲೆಯಲ್ಲಿ ಕೆಲವು ರಬ್ಬರ್ ಕಲ್ಟಿವೇಷನ್ ಮಾಡಿದ್ದಾರೆ. ಮದ್ರಾಸ್ ರಾಜ್ಯದ ನಿಯಮದ ಪ್ರಕಾರ ರಬ್ಬರ್ ಪ್ಲಾಂಟೇಷನ್ನಿಗೂ ಮತ್ತು ಫಾರೆಸ್ಟಿಗೂ 100 ಗಜ ಮಾರ್ಜಿನ್ ಇದ್ದರೆ ಸಾಕು ಎಂದು ಇದೆ. ಆದರೆ ನಮ್ಮ ಸರ್ಕಾರದವರು ಏನು ಮಾಡಿದ್ದಾರೆ ಎಂದರೆ ರಬ್ಬರ್ ಪ್ಲಾನ್‌ಟೇಷನ್ನಿಗೂ ಮತ್ತು ಫಾರೆಸ್ಟಿಗೂ ಮಾರ್ಜಿನ್ 400 ಗಜ ಇರಬೇಕೆಂದು ಮಾಡಿದ್ದಾರೆ. ಮತ್ತು ಫಾರೆಸ್ಟ್ ಇಲಾಖೆಯವರ ಸ್ವಾಧೀನದಲ್ಲಿರುವ ಜಮೀನಿನಲ್ಲಿ ಒಂದು ಬಿದಿರು, ಒಂದು ಗಿಡ ಇಲ್ಲದಿದ್ದರೂ ಕೂಡ ಅದನ್ನು ಫಾರೆಸ್ಟ್ ಎಂದು ಮಾಡಿದ್ದಾರೆ. ಅಂಥಾ ಜಮೀನನ್ನು ರೈತರಿಗೆ ವ್ಯವಸಾಯಕ್ಕೆ ಹಂಚುವುದಕ್ಕೆ ವ್ಯವಸ್ಥೆ ಮಾಡಬೇಕು. ನಮ್ಮ ಜಿಲ್ಲೆಯಲ್ಲಿ ಕೆಲವು ಕಡೆ ಮೈದಾನ ಪ್ರದೇಶ ಇದೆ, ಕೆಲವು ಕಡೆ ಮಲೆನಾಡು ಇದೆ. ಮೈದಾನದಲ್ಲಿ ಇವೊತ್ತು ರೆವಿನ್ಯೂ ಲ್ಯಾಂಡಿನಲ್ಲಿ ತಮ್ಮ ಸ್ವಂತ ಜಮೀನಿನಲ್ಲಿ ಕೂಡ ಅದು ಸಾಗು ಆಗದೇ ಇದ್ದರೂ ಆ ಜಮೀನಿನಲ್ಲಿ ಮನೆಗಳನ್ನು ಕಟ್ಟಬಾರದು ಎಂದು ಹೇಳುತ್ತಾರೆ. ಬೆಳೆ ಬರುವಂತಹ

ಗದ್ದೆಗಳು ಎಲ್ಲಿವೆ ಅಲ್ಲಿ ಯಾರೂ ಮನೆಗಳನ್ನು ಕಟ್ಟುವುದಿಲ್ಲ. ವ್ಯವಸಾಯಕ್ಕೆ ಯೋಗ್ಯವಲ್ಲದ ಮತ್ತು ತಮ್ಮ ಜಮೀನಿನ ಪಕ್ಕದಲ್ಲಿರತಕ್ಕ ಜಮೀನಿನಲ್ಲಿ ಕೂಡ ಯಾರಾದರೂ ಮನೆಯನ್ನು ಕಟ್ಟಬೇಕಾದರೆ ಅವರು ಕನ್‌ವರ್ಷನ್ ಚಾರ್ಜ್ ಕೊಡಬೇಕೆಂದು ಡೆಪ್ಯುಟಿ ಕಮಿಷನರು ಹುಕುಂ ಮಾಡಿದ್ದಾರೆ. ಈ ರೀತಿಯಾಗಿ ಅಲ್ಲಿ ಒಂದು ಹೊಸ ನಿಯಮವನ್ನು ಜಾರಿ ಮಾಡಿದ್ದಾರೆ, ರೈತರು ತಮ್ಮ ಸ್ವಂತ ಜಮೀನಿನಲ್ಲಿ, ವ್ಯವಸಾಯಕ್ಕೆ ಯೋಗ್ಯವಲ್ಲದ ಜಮೀನಿನಲ್ಲಿ ಕೂಡ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಅವಕಾಶವಿಲ್ಲದಂತೆ ಆಗಿದೆ. ಇದರಿಂದ ಅಲ್ಲಿನ ಜನಗಳಿಗೆ ತೊಂದರೆಯಾಗಿದೆ. ಅದ್ದರಿಂದ ಗುಡ್ಡ ದಿಣ್ಣೆ ಪ್ರದೇಶದಲ್ಲಿ ವ್ಯವಸಾಯಕ್ಕೆ ಯೋಗ್ಯವಲ್ಲದ ತಮ್ಮ ಸ್ವಂತ ಜಮೀನಿನಲ್ಲಿ ರೈತರು ಮನೆಗಳನ್ನು ಕಟ್ಟಿಕೊಳ್ಳವುದಕ್ಕೆ ಯಾವ ನಿರ್ಭಂಧವನ್ನೂ ಸರ್ಕಾರದವರು ಹಾಕದೆ ಹಿಂದೆ ಇದ್ದಂತೆ ಅವರು ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಧರ್ಮಸಿಂಗ್ ನಾರಾಯಣಸಿಂಗ್ (ಜೇವರ್ಗಿ).—ಮಾನ್ಯ ಸಭಾಪತಿಗಳೇ, ಇಲ್ಲಿ ಮಂಡಿಸಿರುವ 72-73ನೇ ವರ್ಷಕ್ಕೆ ಸಂಬಂಧಪಟ್ಟ ರೆವೆನ್ಯೂ ಇಲಾಖೆಯ ಬೇಡಿಕೆಗಳನ್ನು ಅನುಮೋದಿಸುತ್ತಾ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಇವೊತ್ತಿನ ದಿವಸ ದೇಶದಲ್ಲಿ ಒಂದು ಹೊಸ ಪರಿಸ್ಥಿತಿ ಉಂಟಾಗಿದೆ. ನಾವು ಇವತ್ತು ದೇಶದಲ್ಲಿ ಬಡ ಜನರಿಗೆ ಅನುಕೂಲವಾಗುವಂತಹ ಹೊಸ ಹೊಸ ಸುಧಾರಣೆಗಳನ್ನು ಮಾಡಲು ಹೊರಟಿದ್ದೇವೆ. ಆದ ಕಾರಣ ಅದಕ್ಕೆ ಸಂಬಂಧಪಟ್ಟ ಹಾಗೆ ಕಾನೂನುಗಳನ್ನು ನಾವು ಮಾಡಬೇಕಾಗಿದೆ. ಆದರೆ ಇಂಥ ಕಾರ್ಯಗಳನ್ನು ನಾವು ಮಾಡುವುದಕ್ಕೆ ಹೊರಟಾಗ ಅದಕ್ಕೆ ಅಡೆತಡೆಗಳು ಕಾನೂನಿನಲ್ಲಿ ಏನಾದರೂ ಬಂದರೆ, ಅದನ್ನು ನಾವು ಮೊಟಕುಗೊಳಿಸಿ ನಮ್ಮ ಸುಧಾರಣಾ ಕಾನೂನುಗಳನ್ನು ಜಾರಿಯಲ್ಲಿ ತರಬೇಕಾಗಿದೆ. ಇವೊತ್ತಿನ ದಿವಸ ಇರತಕ್ಕ ಲ್ಯಾಂಡ್ ಆಕ್ಟ್‌ನಲ್ಲಿ ಕೆಲವು ತಿದ್ದುಪಡಿಗಳನ್ನು ನಾವು ಮಾಡುವುದು ಅವಶ್ಯಕವಿದೆ. ಇವತ್ತು ನಮ್ಮ ಮಂತ್ರಿಮಂಡಲದಲ್ಲಿ ಮಾನ್ಯ ಶ್ರೀ ಅರಸ್‌ರಂತಹ, ಚನ್ನಬಸಪ್ಪರಂತಹ ನುರಿತ ಅನುಭವಿಗಳು ಇದ್ದಾರೆ. ಅವರೆಲ್ಲರೂ ಈ ವಿಚಾರಗಳಲ್ಲಿ ಹೆಚ್ಚು ಶ್ರಮ ವಹಿಸಿ, ದಕ್ಷತೆಯನ್ನು ತೋರಿಸಿ ನಮ್ಮ ದೇಶದಲ್ಲಿ ಎಂಥಾ ರಿಫಾರಂ ಮಾಡಬೇಕೋ ಅದನ್ನು ಮಾಡುತ್ತಾರೆಂಬ ಧೈರ್ಯ ನಮಗೆ ಇದೆ. ಆದ್ದರಿಂದ ಏನೇನು ಕಾನೂನುಗಳು ಅಡ್ಡ ಬರುತ್ತಿವೆ, ಅವುಗಳನ್ನು ತಿದ್ದುಪಡಿ ಮಾಡಿ ನಮ್ಮ ಆ ಶೋತ್ತರಗಳನ್ನು ಪೂರ್ತಿಯಾಗಿ ಈಡೇರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇವೊತ್ತಿನ ದಿವಸ ತಮಗೆಲ್ಲ ಗೊತ್ತಿರುವಂತೆ ಬಡ ಜನರಿಗೆ ಭೂಮಿ ಕೊಡಬೇಕೆಂದು ಹೇಳುತ್ತಿದ್ದೀರಿ. ಆದರೆ ಆ ಸ್ಥಳಗಳಲ್ಲಿ ಏನು ಪರಿಸ್ಥಿತಿ ಇದೆಯೆಂಬುದನ್ನು ನೋಡಿದರೆ ಎಲ್ಲವೂ ತಿಳಿಯುತ್ತದೆ. ಇವತ್ತು ಹಳ್ಳಿಗಳಲ್ಲಿರತಕ್ಕ ಪಾಟೇಲ್ ಪಟವಾರಿಗಳೇ ಅಲ್ಲಿ ಭೂಮಾಲಿಕರಾಗಿದ್ದಾರೆ. ಎಲ್ಲಿಯವರೆಗೆ ಅವರು ಮನಸ್ಸಿನಲ್ಲಿ ಪರಿವರ್ತನೆಯಾಗುವುದಿಲ್ಲವೋ, ಅಲ್ಲಿಯವರೆಗೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಬಡ ಜನರಿಗೆ ಭೂಮಿಯೂ ಸಿಗುವುದಿಲ್ಲ. ಅವರು ಉದ್ಧಾರವೂ ಆಗುವುದಿಲ್ಲ. ಇವತ್ತಿನ ದಿವಸ ಬಡವರಿಗೆ ಜಮೀನು ಕೊಡಬೇಕೆಂದು ಹೇಳುತ್ತಿದ್ದಾರೆ. ಆದರೆ ಇದಕ್ಕೆ ಪಟ್ಟಾ ಲ್ಯಾಂಡ್ಸ್ ಅಡ್ಡಿ ಬರುತ್ತಿವೆ. ಅದೂ ಅಲ್ಲದೆ ಇದರ ಪ್ರೊಸೀಜರ್ ಬಹಳ ಲಂಬವಾಗಿದೆ. ಎಷ್ಟೋ ಕಡೆಗಳಲ್ಲಿ ಈ ಬಡ ಜನರು ಜೋಪಡಿಗಳನ್ನು ಹಾಕಿಕೊಂಡಿರುತ್ತಾರೆ; ಅವರನ್ನು ಈ ಪಟೇಲರು ಮತ್ತು ಇತರ ಅಧಿಕಾರಿಗಳು ಹೊರಗೆ ದಬ್ಬುತ್ತಿದ್ದಾರೆ. ಕಾನೂನು ಪ್ರಕಾರ ಅವರನ್ನು ಹೊರಗೆ ದಬ್ಬುತ್ತಿದ್ದಾರೆ. ಆದರೆ ಹೀಗೆ ಅಧಿಕಾರಿಗಳು ಮಾಡಿದರೆ ಬಡ ಜನರಿಗೆ ಎಲ್ಲಿ ರಕ್ಷಣೆ ದೊರೆಯುತ್ತದೆ? ಆದ್ದರಿಂದ ದೇಶದಲ್ಲಿ ಕ್ರಾಂತಿಯಾಗಬೇಕಾದರೆ ನಾವು ಯಾವಾಗಲೂ ರೂಲ್ಸ್ ನೋಡುತ್ತಾ ಕೆಲಸಗಳನ್ನು ಮಾಡುತ್ತಾ ಹೋದರೆ ನಾವು ಯಾವ ಸುಧಾರಣೆಯನ್ನು ಅಥವ ಅಭಿವೃದ್ಧಿ ಕೆಲಸಗಳನ್ನು ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಇದಕ್ಕೆ ಸರ್ಕಾರದವರು ತೀವ್ರವಾದ ಗಮನ ಕೊಡಬೇಕೆಂದು ಹೇಳುತ್ತೇನೆ.

ಅದೇ ರೀತಿ ಇವತ್ತು ದನಗಳನ್ನು ಮೇಯಿಸುವುದಕ್ಕೋಸ್ಕರ 20-30 ಎಕರೆ ಪ್ರದೇಶ ಜಮೀನನ್ನು ಕೊಡುತ್ತಿದ್ದಾರೆ. ಇದು ಜನರಿಗೆ ಭೂಮಿ ಹಂಚುವ ಕೆಲಸದಲ್ಲಿ ಅಡ್ಡಿ ಬರುವುದರಿಂದ ಇದನ್ನು ಅಬಾಲಿಶ್ ಮಾಡಬೇಕೆಂದು ಹೇಳುತ್ತೇನೆ.

ಇನ್ನು ವಿಲೇಜ್ ಅಕೌಂಟೆಂಟ್‌ಗಳನ್ನು 4-5 ಪಂಚಾಯಿತಿಗಳಿಗೆ ಒಬ್ಬರ ಹಾಗೆ ನೇಮಕ ಮಾಡುತ್ತಾರೆ. ಈ ರೀತಿ ನೇಮಿಸಿದರೆ ಒಬ್ಬರು 4-5 ಪಂಚಾಯತುಗಳನ್ನು ನೋಡಿಕೊಳ್ಳಲು ತುಂಬಾ ಕಷ್ಟವಾಗುತ್ತದೆ. ಬಾಂಬೆ ಕರ್ಣಾಟಕದಲ್ಲಿ ಒಂದು ಪಂಚಾಯಿತಿಗೆ ಒಬ್ಬರೇ ವಿಲೇಜ್ ಅಕೌಂಟೆಂಟ್ ಇರುತ್ತಾರೆ. ಆದರೆ ನಮ್ಮ ಹೈದರಾಬಾದ್ ಏರಿಯಾದಲ್ಲಿ 4-5 ಪಂಚಾಯತುಗಳಿಗೆ ಒಬ್ಬರನ್ನೇ ಇಟ್ಟುಕೊಂಡಿದ್ದಾರೆ. ಅದೂ ಅಲ್ಲದೆ ಇನ್ನು ಲ್ಯಾಂಡ್ ರಿಫಾರಂ ಕಾನೂನು ಬರುವಾಗ

(ಶ್ರೀ ಧರ್ಮಸಿಂಗ್ ನಾರಾಯಣಸಿಂಗ್)

ಕೆಲಸಗಳು ಜಾಸ್ತಿಯಾಗುತ್ತಾ ಹೋಗುವುದರಿಂದ, ಒಂದು ಪಂಚಾಯುತಿಗೆ ಒಬ್ಬರನ್ನೇ ಹಾಕಬೇಕೆಂದು ಕೇಳಿಕೊಳ್ಳುತ್ತೇನೆ. ಅದೂ ಅಲ್ಲದೆ ನಮ್ಮ ಗಂಗಾವತಿ, ಲಿಂಗಸುಗೂರು, ಸಿಂಧನೂರು—ಈ ಪ್ರದೇಶಗಳಲ್ಲಿ ನೀರಿಗೆ ಸಂಬಂಧಪಟ್ಟ ಕೆಲಸ ಬಹಳವಾಗಿರುವುದು ಒಂದು ವಿಲೇಜಿಗೆ ಒಬ್ಬರನ್ನೇ ಅಕೌಂಟೆಂಟ್ ಆಗಿ ನೇಮಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಮತ್ತೊಂದು ವಿಷಯವೇನೆಂದರೆ, 1-7-68ರಿಂದ ಯಾರು ಕ್ವಾಲಿಫೈ ಆಗಿರುತ್ತಾರೆ ಅವರಿಗೆ ಭೂಮಿ ಕೊಡಬೇಕೆಂದು ಹೇಳುತ್ತಿದ್ದೀರಿ. ಅದೇ ರೀತಿ ಜಮೀನು ಯಾರು ಸಾಗುವಳಿ ಮಾಡುತ್ತಿದ್ದಾರೆ, ಅವರಿಗೆ ಕೂಡ ಕೊಡಬೇಕೆಂದು ಇದೆ. ಮತ್ತೊಂದು ಏನೆಂದರೆ, ಈಗ ಈ ಲ್ಯಾಂಡ್ ರೆವೆನ್ಯೂ ಇನ್‌ಸ್ಪೆಕ್ಟರರು ಏನಿದ್ದಾರೆ ಅವರಿಗೆ ಈ ಸೆಕ್ಷನಿನೊಳಗೆ ಮ್ಯುಟೇಶನ್ ಮಾಡುವುದಕ್ಕೆ ಅಧಿಕಾರ ಕೊಟ್ಟಿದ್ದೀರಿ. ಅವರು ಬಹಳ ತಪ್ಪು ಮಾಡುತ್ತಿದ್ದಾರೆ. ಮನಸ್ಸಿಗೆ ಬಂದ ಹಾಗೆ ಮಾಡುತ್ತಾರೆ. ಆಮೇಲೆ ಅಪೀಲಿಗೆ ಅಸಿಸ್ಟೆಂಟ್ ಕಮಿಶನರಿಗೆ ಬರಬೇಕಾಗುತ್ತದೆ. ಈ ಪವರನ್ನು ತಾಹಸೀಲ್ದಾರರವರಿಗೆ ಕೊಡಬೇಕು. ಒಬ್ಬ ರೈತನು ಜಿಲ್ಲಾ ಕೇಂದ್ರಕ್ಕೆ ಹೋಗುವುದು ಬರುವುದು ಅಂದರೆ ಬಹಳ ಕಷ್ಟ. ಆದ್ದರಿಂದ ಈ ಅಧಿಕಾರವನ್ನು ತಾಹಸಿಲ್ದಾರರರಿಗೆ ಕೊಟ್ಟರೆ ಇದರಿಂದ ಇರೆಗ್ಯುಲ್ಯಾರಿಟೀಸ್ ಆಗುವುದಿಲ್ಲ.

ಇನ್ನೊಂದು ಈ ಹೊಸ ಸ್ಕೈಟ್ಸ್ ಏನು ಕೊಡುತ್ತೇವೆಂದು ಹೇಳುತ್ತಿದ್ದಾರೆ, ಇದರಿಂದ ಬಹಳ ತೊಂದರೆಯಾಗುತ್ತದೆ. ಅದರಲ್ಲೂ ಪಟ್ಟಾ ಲ್ಯಾಂಡ್ಸ್‌ಗಳನ್ನು ನೋಟಿಫೈ ಮಾಡುವುದಕ್ಕೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ನಾವು ಏನು ಬಡವರು ಇರುವುದಕ್ಕೆ ಭೂಮಿ ಕೊಡುತ್ತೇವೆಂದು ಹೇಳುತ್ತಿದ್ದೇವೆ, ಮತ್ತು ಸಮಾಜವಾದವನ್ನು ಜಾರಿಗೆತರುತ್ತೇವೆಂದು ಹೇಳುತ್ತಿದ್ದೇವೊ, ಅವುಗಳನ್ನು ಜಾರಿಗೆತರುವುದಕ್ಕೆ ಕಾನೂನುಗಳು ಅಡ್ಡಿ ಬರುತ್ತವೆ ಎಂದು ಹೇಳಿದರೆ ದೇಶದಲ್ಲಿ ನಮ್ಮ ಬಗ್ಗೆ ಏನೊಂದು ಅಭಿಪ್ರಾಯವನ್ನು ಇಟ್ಟುಕೊಂಡಿದ್ದಾರೆ, ಅದು ಹೋಗಿ ಒಂದು ದೊಡ್ಡ ಕ್ರಾಂತಿಯೇ ಆಗಬಹುದು. ಈಗ ಜನರು ಒಂದು ಹೊಸರೀತಿಯ ಸರ್ಕಾರ ನಿರ್ಮಾಣವಾಗಿದೆಯೆಂದು ತಿಳಿದುಕೊಂಡಿದ್ದಾರೆ. ಅದು ಈಡೇರದಿದ್ದರೆ ದೇಶದ ಜನರು ಪುನಃ ನಮ್ಮನ್ನು ತೆಗೆದುಹಾಕುತ್ತಾರೆ. ಆದ್ದರಿಂದ ತಾವು ಇಂಥ ಪೂಜ್ಯವಾದ ಕಾರ್ಯಗಳಿಗೆ ಕಾನೂನು ಅಡ್ಡಿ ಏನು ಬರುತ್ತದೆ, ಅದನ್ನು ತೆಗೆದು ಹಾಕಿದರೆ ನಮ್ಮ ನಮ್ಮ ಕಾರ್ಯಗಳು ಸುಗಮವಾಗಿ ನಡೆಯುತ್ತವೆ. ದೇಶದಲ್ಲಿ ಸಾಗುವಳಿ ಮಾಡತಕ್ಕ ಜನರಿಗೆ ಭೂಮಿ ಸಿಗಬೇಕು. ಅದರಲ್ಲೂ ಹರಿಜನರಿಗೆ ಮುಖ್ಯವಾಗಿ ಭೂಮಿ ಸಿಗಲೇಬೇಕೆಂದು ಹೇಳುತ್ತೇನೆ. ತಾವು ಇನತ್ತು ಹರಿಜನರಿಗೆ ಭೂಮಿ ಕೊಡುತ್ತಿದ್ದೇವೆಂದು ಹೇಳುತ್ತಿದ್ದೀರಿ. ಗುಲ್ಬರ್ಗದಲ್ಲಿ ಸುಲ್ತಾನ್‌ಪುರ ಎಂಬಲ್ಲಿ ಹರಿಜನರಿಗೆ ಸಾಗುವಳಿ ಮಾಡಲು ಭೂಮಿ ಕೊಟ್ಟು, ಅವರು ಸಾಗುವಳಿ ಮಾಡಲು ಹೋದಾಗ ಮರ್ಡರ್ ಕೂಡ ಆಗಿದೆ. ಆದ್ದರಿಂದ ಇವೆಲ್ಲವನ್ನೂ ಪೂರ್ತಿ ಮಾಡಲು ತಾವು ಒಂದು ಹೊಸ ರೀತಿಯಲ್ಲಿ ವಿಚಾರವಿನಿಮಯ ಮಾಡಬೇಕಾದುದು ಅವಶ್ಯಕ.

ಇನ್ನೊಂದು ವಿಚಾರವೇನೆಂದರೆ, ತಾವು ಅಸಿಸ್ಟೆಂಟ್ ಕಮಿಶನರಿಗೆ ಏನೊಂದು ಅಧಿಕಾರವನ್ನು ಸೆಕ್ಷನ್ 107ರ ಪ್ರಕಾರ ಕೊಟ್ಟಿದ್ದೀರೋ, ಅದರಿಂದ ಜನರಿಗೆ ನ್ಯಾಯ ದೊರೆಯುವುದಿಲ್ಲ. ಇದರಲ್ಲಿ ಬಹಳ ಇರೆಗ್ಯುಲ್ಯಾರಿಟಿ ನಡೆಯುತ್ತಿದೆ. ಆದ್ದರಿಂದ ಅಸಿಸ್ಟೆಂಟ್ ಕಮಿಶನರಿಗೆ ಕೊಟ್ಟಂತಹ ಅಧಿಕಾರವನ್ನು ಮ್ಯಾಜಿಸ್ಟ್ರೇಟರಿಗೆ ಕೊಡಬೇಕೆಂದು ಹೇಳುತ್ತೇನೆ. ಮತ್ತೊಂದು ವಿಚಾರವೇನೆಂದರೆ ಹಿಂದಿನ ಸರ್ಕಾರದಲ್ಲಿ ಈ ತಾಹಸೀಲ್ದಾರ ಮತ್ತು ಅಸಿಸ್ಟೆಂಟ್ ಕಮಿಶನರವರ ಮಟ್ಟದಲ್ಲಿ ಬಹಳ ಕರಪ್ಶನ್ ಹೆಚ್ಚಾಗಿ ನಡೆಯುತ್ತಿತ್ತು. ಇದರಿಂದಾಗಿ ಅವರ ಕೆಳಗೆ ಇರತಕ್ಕಂತಹ ಅಧಿಕಾರಿ ವರ್ಗದವರಲ್ಲಿ ಸಹ ಕರಪ್ಶನ್ ಹೆಚ್ಚಾಗುತ್ತಿತ್ತು. ಆದ್ದರಿಂದ ಇವತ್ತು ನಾವು ಈ ನೌಕರಿ ವರ್ಗದವರಲ್ಲಿ ಕೂಡ ಒಂದು ವೈಚಾರಿಕ ಕ್ರಾಂತಿಯನ್ನು ಮಾಡಬೇಕಾಗಿದೆ. ಆದ್ದರಿಂದ ಯಾವ ಅಸಿಸ್ಟೆಂಟ್ ಕಮಿಶನರ್ ಜನರಿಗೆ ನ್ಯಾಯ ದೊರಕಿಸದೆ, ಅತ್ಯಾಚಾರಗಳನ್ನು ಮಾಡುತ್ತಾರೆ, ಅವರನ್ನು ಸ್ಪಾಟ್ ಇನ್ಸ್‌ಪೆಕ್ಷನ್ ಮಾಡಿ ಹಿಡಿದು, ಶಿಕ್ಷೆ ಮಾಡುವಂತೆ ಇರಬೇಕು. ಮತ್ತು ಇಂತಹ ಇರೆಗ್ಯುಲ್ಯಾರಿಟಿಗಳನ್ನು ತಪ್ಪಿಸಬೇಕು. ಆ ರೀತಿಯಲ್ಲಿ ಸರ್ಕಾರದಿಂದ ಅಧಿಕಾರಿಗಳಿಗೆ ಆದೇಶ ಹೋಗಬೇಕಾಗಿದೆ. ನೀವು ಎಲ್ಲಿಯವರೆಗೆ ಈ ರೀತಿಯಾಗಿ ಡೈರೆಕ್ಷನ್ಸ್ ಕೊಡುವುದಿಲ್ಲವೊ ಅಲ್ಲಿಯವರೆಗೆ ಜನರಿಗೆ ರಕ್ಷಣೆ ಸಿಗುವುದಿಲ್ಲ. ಹಿಂದಿನ ಸರ್ಕಾರದಲ್ಲಿ ಮಾನ್ಯ ಕೌಜಲಗಿಯವರು ಕಂದಾಯ ಮಂತ್ರಿಗಳಾಗಿದ್ದರು. ಆಗ ಎಷ್ಟೋ ಡೆಪ್ಯುಟಿ ತಹಸೀಲ್ದಾರರುಗಳಿಗೆ ಪ್ರೊಮೋಷನ್ಸ್ ಆಗಿತ್ತು. ಆಗ ನಮ್ಮ ಭಾಗದಲ್ಲಿ ಏನು ಫಸ್ಟ್ ಡಿವಿಜನ್ ಕ್ಲಾರ್ಕುಗಳಾಗಿ ಇದ್ದರು, ಅವರಲ್ಲಿ ಒಂದ 126 ಜನರಿಗೆ ಡಿಪ್ಯುಟಿ ತಾಹಸೀಲ್ದಾರರಾಗಿ ಪ್ರೊಮೋಷನ್ಸ್ ಕೊಟ್ಟಿದ್ದರು. ಆದರೆ ನಮ್ಮ ಹೈದಾಬಾದ ಕರ್ನಾಟಕದವರಿಗೆ ಒಬ್ಬರಿಗೂ ಪ್ರಮೋಶನ್ ಸಿಕ್ಕಲಿಲ್ಲ. ಈಗ 45 ಜನ ಡೆಪ್ಯುಟಿ ತಹಸೀಲ್ದಾ

ರರು ಪ್ರೊಮೋಶನ್‌ಸಿಗೆ ಇದ್ದಾರೆ. ಅವರಿಗೆ ಪ್ರೊಮೋಶನ್ ಕೊಡಬೇಕೆಂದು ಕೇಳುತ್ತೇನೆ ಹೈದರಾಬಾದ್ ಕರ್ಣಾಟಕದೊಳಗೆ ಮಾನ್ಯ ಶ್ರೀ ವೀರೇಂದ್ರಪಾಟೀಲ್ ಅವರು ಹೋದ ನಂತರ ಹೈದರಾಬಾದ್ ಕರ್ಣಾಟಕದ ಬಗ್ಗೆ ಅಂತಹವರನ್ನು ಅಲಕ್ಷ್ಯ ಮಾಡುತ್ತಾರೆಂಬ ಭಾವನೆ ನಮ್ಮ ಜನರಲ್ಲಿ ಬರಬಾರದು; ಯಾರೂ ಅದರ ಬಗ್ಗೆ ಕೇಳುತ್ತಾ ಇಲ್ಲ ಎಂಬ ಭಾವನೆ ಬರಬಾರದು. ಅಲ್ಲಿ ಸ್ವಲ್ಪಮಟ್ಟಿಗೆ ಅನ್ಯಾಯವಾಗಿದೆ. ಅದನ್ನು ವಿಚಾರಮಾಡಿ ಕೊಡಬೇಕು. ಇವತ್ತಿನ ದಿವಸ ನಾನು ಕೆಲವು ಸೂಚನೆಗಳನ್ನು ಕೊಟ್ಟಿದ್ದೇನೆ. ತಾವು ಅನುಭವಿಗಳು. ಹೊಸದಾಗಿ ಮಂತ್ರಿಗಳಾಗಿರುವ ಕಾರಣ ಇದೆಲ್ಲವನ್ನೂ ಕೂಡಲೆ ಜಾರಿಗೆ ತರತ್ತೀರೆಂದು ನಂಬಿ ನನಗೆ ತಾವು ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ). - ಮಾನ್ಯ ಅಧ್ಯಕ್ಷರೇ, ಹಿಂದೆ ಮಾತನಾಡಿದ ಮಾನ್ಯ ಶ್ರೀ ಧರ್ಮಸಿಂಗ್ ಅವರು ಕನ್ನಡದಲ್ಲಿ ಬಹಳ ಚೆನ್ನಾಗಿ ಮಾತನಾಡಿದ್ದಕ್ಕೆ ನಾನು ಅವರನ್ನು ವಂದಿಸುತ್ತೇನೆ. ಸನ್ಮಾನ್ಯ ಕಂದಾಯ ಮಂತ್ರಿಗಳು ಏನೊಂದು ರೆವಿನ್ಯೂ ಡಿಮ್ಯಾಂಡನ್ನು ಇಟ್ಟಿದ್ದಾರೆಯೋ ಅದರ ಬಗ್ಗೆ ನಾನು ಕೆಲವು ಅಭಿಪ್ರಾಯಗಳನ್ನು ಹೇಳಲಿಕ್ಕೆ ಅಪೇಕ್ಷೆಪಡುತ್ತೇನೆ. ಈಗ ಭೂ ಸುಧಾರಣೆಯನ್ನು ಜಾರಿಗೆ ತರುತ್ತೇವೆಂದು ಹೇಳುತ್ತಿದ್ದಾರೆ. ಅದನ್ನು ಜಾರಿಗೆ ತರುವಾಗ ಅದರ ಬಗ್ಗೆ ಹೇಳುತ್ತೇನೆ. ನಾನು ಅದರ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ಈಗ ಹೋಗುವುದಿಲ್ಲ. ಇವರು ಅದನ್ನು ಜಾರಿಗೆ ತರುವ ಬಗ್ಗೆ ನನಗೆ ಅನುಮಾನವಿದೆ. ಈ ವಿಚಾರವನ್ನು ನಾನು ಆಗಿನಿಂದಲೂ ಹೇಳುತ್ತಾ ಬಂದಿದ್ದೇನೆ. ನಿನ್ನೆಯ ಪತ್ರಿಕೆ ನೋಡಿದರೆ ಇವರು ಸ್ಟ್ಯಾಂಡರ್ಡ್ ಹೆಸರನ್ನು ಕೈಬಿಟ್ಟಿರುವ ಹಾಗೆ ಕಾಣುತ್ತದೆ. ಸಾದಾ ಎಕರೆ, ಗುಂಟೆಗಳಲ್ಲಿ ಏನು ಇಟ್ಟಿದ್ದಾರೆಯೋ ಅದರ ಬಗ್ಗೆ ಆಮೇಲೆ ಹೇಳುತ್ತೇನೆ. ಸ್ಟ್ಯಾಂಡರ್ಡ್ ಎಕರೆ ಹೆಸರಿನಲ್ಲಿ ಅವರು ತರುವ ಭೂ ಸುಧಾರಣೆ ಸುರಂಗಪೂರಿತವಾಗಿ ಆಗಿರುತ್ತದೆ. ತಾವು ಕಾಫಿ ಪ್ಲಾಂಟೇಷನ್ನಿಗೆ ವಿನಾಯಿತಿ ಕೊಡುತ್ತೀರಿ. ಅದನ್ನು ಈಗ ಮಾಡುವುದಿಲ್ಲವೆಂದು ಹೇಳಿದ್ದೀರಿ. ಕಾಫಿ ತೋಟಗಳಿಗೆ ವಿನಾಯಿತಿ ಕೊಡುವಾಗ ಬಾಗಾಯಿತಿನವರು ಏನು ಪಾಪ ಮಾಡಿದ್ದಾರೆ? ತೆಂಗಿನ ತೋಟದವರು ಮಾಡಿರುವ ಪಾಪವೇನು? ತೆಂಗಿನ ತೋಟ, ಕಾಫಿ ತೋಟ ಇವರೆಲ್ಲರನ್ನೂ ಬಿಡಿ. ಆಮೇಲೆ ತರೀಯವರು ಏನು ಪಾಪ ಮಾಡಿದರು? ಎಲ್ಲರ ಬಗ್ಗೆ ಸಮಗ್ರವಾದ ಕಾನೂನನ್ನು ಜಾರಿಗೆ ತರಬೇಕಾಗಿದೆಯೇ ಹೊರತು ಒಂದನ್ನು ಬಿಟ್ಟು ಒಂದನ್ನು ತಂದರೆ ಅದು ಅನ್ಯಾಯವಾಗುತ್ತದೆ. ತಾವು ಈ ರೀತಿಯಾಗಿ ತಾರತಮ್ಯ ಮಾಡುತ್ತಿದ್ದೀರೆಂದು ನಾನು ಭಾವಿಸುತ್ತೇನೆ. ಒಂದು ಉದಾಹರಣೆಯನ್ನು ಹೇಳುತ್ತೇನೆ. 1500 ಜನ ಮಾತ್ರ 25 ಎಕರೆಗಳಿಗಿಂತಲೂ ಹೆಚ್ಚಿಗೆ ಇರುವವರು. 25 ಎಕರೆಗಳಿಗಿಂತಲೂ ಕಡಿಮೆ ಪ್ಲಾಂಟೇಷನ್ ಇರುವವರು 45 ಸಾವಿರ ಜನ ಹಿಡುವಳಿದಾರರು ಇದ್ದಾರೆ. ಇದರ ಬಗ್ಗೆ ಮಾನ್ಯ ಶ್ರೀ ಎಚ್. ಎಲ್. ನಾಗೇಗೌಡ ಒಂದು ಪುಸ್ತಕವನ್ನು ಬರೆದಿದ್ದಾರೆ. 45 ಸಾವಿರ ಜನ ಸಣ್ಣ ಹಿಡುವಳಿದಾರರ ರಕ್ಷಣೆ ಮಾಡುವವರೂ ಹಾಗೂ 1500 ಜನ ದೊಡ್ಡವರನ್ನು ರಕ್ಷಣೆ ಮಾಡುವವರೂ ಇದರ ಬಗ್ಗೆ ಯೋಚನೆ ಮಾಡಬೇಕು. ಸಮಗ್ರವಾದ ಭೂ ಸುಧಾರಣೆಯೆಂದರೆ, ಕಾಫಿ ತೋಟ ಇದ್ದರೆ, ಭೂಮಿ ಎಲ್ಲವನ್ನೂ ಸೇರಿಸಿ ಮಿತಿ ತರಬೇಕು. ಈ ಮಿತಿಯನ್ನು ಹಾಕುವ ಬಗ್ಗೆ ಸೋಷಿಯಲಿಸ್ಟ್ ಪಾರ್ಟಿಯವರು ಒಂದು ನಿರ್ಧಾರಕ್ಕೆ ಬಂದಿದ್ದಾರೆ. ಇವತ್ತು ಎಕರೆ ಎಂದು ಹೇಳುವುದನ್ನು ಬಿಟ್ಟು ಆ ಕಡೆ ನಗರದ ಮೇಲೆ ಆಸ್ತಿ ಮಿತಿ, ಗ್ರಾಮಾಂತರ ಪ್ರದೇಶದಲ್ಲಿ ಭೂಮಿ ಮಿತಿ - ಹೀಗೆ ಎಕರೆ ವ್ಯಾಪ್ತಿಯನ್ನು ನಿಯಮಿಸುವುದಕ್ಕೆ ಹೋದರೆ ಬಹಳ ಗೊಂದಲವುಂಟಾಗುತ್ತದೆ. ಅದಕ್ಕೆ ನಾವು ಈಗ ಒಂದು ನಿರ್ಧಾರಕ್ಕೆ ಬಂದಿದ್ದೇವೆ. ನಗರದ ಆಸ್ತಿ ಮೇಲೆಯೇ ಆಗಲಿ, ಅಥವಾ ಹಳ್ಳಿಗಳ ಭೂಮಿ ಮೇಲಾಗಲೀ ಪರಿಮಿತಿ ಹಾಕುವಾಗ ನಿವ್ವಳ ಆದಾಯ 6 ಸಾವಿರ ರೂಪಾಯಿಗಳು ಯಾರಿಗೆ ಬರುತ್ತದೋ ಅವರನ್ನು ಬಿಟ್ಟು ಅದಕ್ಕಿಂತಲೂ ಹೆಚ್ಚು ಆದಾಯ ಬಂದರೆ ಅಂತಹವರಿಗೆ ತಾವು ಮಿತಿಯನ್ನು ಹಾಕಬೇಕು. ನಗರದ ಆಸ್ತಿ ಮೇಲೆಯೂ ಅಷ್ಟೇ. ಆ ಕಡೆ ಭೂಮಿ ಮೇಲೂ ಅಷ್ಟೇ. ಎರಡು ಕಡೆಗಳಲ್ಲಿಯೂ ಒಂದೇ ತತ್ವ ಇರಬೇಕು. ಇದರಲ್ಲಿ ಒಂದು ಸ್ಕೇಲನ್ನು ಇಟ್ಟುಕೊಂಡರೆ ನಿಜವಾಗಿ ನಾವು ಒಂದು ಸಮಾಜವಾದವನ್ನು ಜಾರಿಗೆ ತರುವುದಕ್ಕೆ ಅನುಕೂಲವಾಗುತ್ತದೆ. ಆಗ ಸರ್ಕಾರೀ ನೌಕರರೂ ಬರುತ್ತಾರೆ. ದೊಡ್ಡ ದೊಡ್ಡ ಕಾಂಗ್ರೆಸ್ಸಿನವರೂ ಬರುತ್ತಾರೆ. ಸಣ್ಣಪುಟ್ಟ ರೈತರೂ ಬರುತ್ತಾರೆ. ಬಡವರೂ, ಶ್ರೀಮಂತರೂ ಎಲ್ಲರೂ ಬರುತ್ತಾರೆ. ಇವರಲ್ಲಿ ಅಜಗಜಾಂತರ ವ್ಯತ್ಯಾಸ ಏನಿದೆಯೋ ಅದನ್ನು ಸಮಮಟ್ಟಕ್ಕೆ ತರುವುದಕ್ಕೆ ಸರ್ಕಾರ ಪ್ರಯತ್ನವನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆ. ಅದನ್ನು ಬಿಟ್ಟು ತಾವು ಯಾವುದೇ ಪರಿಹಾರವನ್ನು ತಂದರೆ ಅದು ಗೊಂದಲವನ್ನುಂಟುಮಾಡುತ್ತದೆ. ತಾರತಮ್ಯದ ಆರೋಪ ನಿಮ್ಮ ಮೇಲೆ ಬರುತ್ತದೆ. ಆ ಬಗ್ಗೆ ತಾವು ಯೋಚನೆ ಮಾಡಬೇಕು. ವಿಚಾರ

(ಶ್ರೀ ಕೋಣಂದೂರು ಲಿಂಗಪ್ಪ)

ಮಾಡಬೇಕು. ಸುಧಾರಣೆ ಮಾಡುವಾಗ ಯಾವತ್ತಿಗೂ ಕೂಡ ರಿಯಾಯಿತಿ ಕೊಡುವುದನ್ನು ನಾನು ಒಪ್ಪುವುದಿಲ್ಲ. ಕಾಫಿ ತೋಟದವರಿಗೆ ರಿಯಾಯಿತಿ ಕೊಟ್ಟರೆ ಬಾಗಾಯಿತು ಅವರಿಗೂ ಕೊಡಿ. ಅವರೇನು ಪಾಪ ಮಾಡಿದ್ದಾರೆ? ಆದ್ದರಿಂದ ಈಗ ಸಮಗ್ರವಾದ ಭೂ ಸುಧಾರಣೆಯನ್ನು ಆದಷ್ಟು ಜಾಗ್ರತೆಯಾಗಿ ಜಾರಿಗೆ ತರಬೇಕೆಂದು ಹೇಳುತ್ತೇನೆ. ವಿನಾ ಮೋಷ ಮಾಡುವುದು ಸರಿಯಲ್ಲ. ನಗರ ಮತ್ತು ಗ್ರಾಮಗಳಲ್ಲಿ ಏಕಕಾಲದಲ್ಲಿ ಮಿತಿ ತರುವುದು ಯೋಗ್ಯವಾಗುತ್ತದೆಂದು ಸೂಚಿಸುತ್ತೇನೆ. ಇನ್ನು ತಾವೇನು ರೆವಿನ್ಯೂ ಇಲಾಖೆಯ ಬಗ್ಗೆ ಡಿಮ್ಯಾಂಡ್ ತಂದಿದ್ದೀರೋ ಆ ವಿಚಾರದಲ್ಲಿ ನಾನು ನಾಲ್ಕು ಮಾತುಗಳನ್ನು ಹೇಳುವುದು ಅವಶ್ಯಕತೆ ಇದೆ. ಇವತ್ತು ನಮ್ಮ ತಾಲ್ಲೂಕು ಆಫೀಸುಗಳನ್ನು ನೋಡಿದರೆ ಹಿಂದೆ ಬ್ರಿಟಿಷರ ಕಾಲದಲ್ಲಿದ್ದ ಹಾಗೆಯೇ ಅವು ಇವೆ. ಅಲ್ಲಿನ ಜನಗಳೋ ತಹಸೀಲ್ದಾರ್ ಮತ್ತು ಗುಮಾಸ್ತರು ಹೊಸಬರೇ ಬರುತ್ತಾರೆ. ಅವರು ಕಂಬಕ್ಕೆ ಕಂಬ ಕೈಚಾಚುವ ಹಾಗೆ ಇದ್ದಾರೆ. ದೊಡ್ಡ ತಲೆದಿಂಬು ಕೊಡುವವರಿಗೆ ಕೆಲಸ ತಕ್ಷಣ ಆಗುವುದು. ಲಂಚ ಎಂಬ ಶಬ್ದ ಸವೆದುಹೋಗಿದೆ. ಅದಕ್ಕೆ ಹೊಸ ಶಬ್ದ ಮೆಹರ್‌ಬಾನಿ ಎಂದು ಹೇಳುತ್ತಾರೆ.

ಶ್ರೀ ವಿ. ಎನ್. ಪಾಟೀಲ್ (ಹುಮ್ನಾಬಾದ್).— ಮೆಹರ್‌ಬಾನಿ ಅಂದರೆ ಮುಸ್ಕಿ ಕೆಲಸವೆಂದು ಹೇಳುತ್ತಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಹಳೆಯ ಶಬ್ದ ಲಂಚ ಎಂಬುದು ಹೋಗಿ ಈಗ ಹೊಸ ಪದ ಮೆಹರ್‌ಬಾನಿ ಎಂದು ಬಂದಿದೆ. ಅದನ್ನು ತಡೆಹಿಡಿಯಬೇಕು. ಯಾರೇ ಒಬ್ಬ ಸಾಮಾನ್ಯ ಪ್ರಜೆ ಅದನ್ನು ನಿಮ್ಮ ಗಮನಕ್ಕೆ ತಂದರೆ ತಕ್ಷಣ ನೀವು ಕ್ರಮವನ್ನು ಉಗ್ರವಾಗಿ ಕೈಗೊಳ್ಳುವ ಪ್ರಯತ್ನವನ್ನು ಮಾಡಬೇಕು. ಹಾಲಿ ತಾಲ್ಲೂಕ್ ಆಫೀಸುಗಳಲ್ಲಿ ನಡೆಯುತ್ತಿರುವ ಆಡಳಿತ ಪದ್ಧತಿಯನ್ನು ತಾವು ಬದಲಾವಣೆ ಮಾಡಬೇಕೆಂದು ಹೇಳುತ್ತೇನೆ. ಈ ಕಛೇರಿಗಳಿಗೆ ಬರತಕ್ಕ ಹಳ್ಳೀ ಜನರಿಗೆ ಈ ಅಧಿಕಾರಿಗಳು ದೊಡ್ಡ ಕಂಟಕರಾಗಿ ಅವರಿಗೆ ಕಿರುಕುಳ ಕೊಡದಂತೆ ಒಂದು ಪದ್ಧತಿಯನ್ನು ಜಾರಿಗೆ ತರಬೇಕಾಗಿದೆ. ರೈತನು ನೇರವಾಗಿ ತಾಶೀಲ್ದಾರನ ಹತ್ತಿರ ಹೋಗಿ ಇಲ್ಲವೇ ಆ ಕ್ಲಾರ್ಕುಗಳ ಹತ್ತಿರ ಹೋಗಿ ಅವರಲ್ಲಿ ಸಂಪರ್ಕ ಬೆಳೆಸಿ ತನ್ನ ಕಾರ್ಯವನ್ನು ಮಾಡಿಕೊಳ್ಳತಕ್ಕಂಥ ಒಂದು ಸನ್ನಿವೇಶವನ್ನು ನಾವು ಉಂಟುಮಾಡುವುದಿಲ್ಲವೋ ಅಲ್ಲಿಯವರೆಗೂ ದೇಶ ಮುಂದಕ್ಕೆ ಬರುವುದಿಲ್ಲ. ರೈತರನ್ನು ಹಳ್ಳೀ ಜನರನ್ನು ತಾಲ್ಲೂಕ್ ಕಛೇರಿಗೆ ಹೋದ ಕೂಡಲೆ ಈ ದಿವಸ ಯಾರು ಆ ಗೇಟಿನಲ್ಲಿ ನಿಂತು 'ಏನೋ' ಎಲ್ಲಿಗೆ ಹೋಗುತ್ತೀಯಾ? 'ತಾಶೀಲ್ದಾರರು ಇಲ್ಲ' ಹೋಗು ಎಂದು ಹೇಳತಕ್ಕ ಪದ್ಧತಿ ಹೋಗಬೇಕು. ಆದರೆ ನಮ್ಮ ತಾಲೂಕಿನಲ್ಲಿ ಈಗ ಇಂಥ ಪದ್ಧತಿ ಏನೂ ಇಲ್ಲ. ಅಲ್ಲಿ ನಾವು ಅದನ್ನು ಸರಿಪಡಿಸಿದ್ದೇವೆ. ಅಲ್ಲಿ ನಮ್ಮ ಪೂಜ್ಯ ಗೋಪಾಲ ಗೌಡರು ಇದ್ದ ಕಾಲಕ್ಕೇ ಇದನ್ನೆಲ್ಲಾ ಅವರು ಸರಿಪಡಿಸಿದ್ದರು. ಅದಕ್ಕಾಗಿ ನಾನು ಅವರನ್ನು ಈ ಸಂದರ್ಭದಲ್ಲಿ ಸ್ಮರಿಸಬೇಕಾಗಿದೆ. ಆದರೆ ಈಗ ಅಲ್ಲಿ ಇನ್ನೂ ಕೆಲವು ಸಣ್ಣ ಪುಟ್ಟ ಕಿರುಕುಳಗಳಿವೆ. ಅವುಗಳನ್ನು ನಾವು ನೋಡಿಕೊಳ್ಳುತ್ತೇವೆ. ನೀವೇನೂ ನಮ್ಮ ತಾಲ್ಲೂಕಿನ ಬಗ್ಗೆ ಈ ವಿಚಾರದಲ್ಲಿ ಕಾಳಜಿ ತೆಗೆದುಕೊಳ್ಳಬೇಕಾಗಿಲ್ಲ. ಇನ್ನು ಇದೇ ಸಂದರ್ಭದಲ್ಲಿ ಸರ್ಕಾರಕ್ಕೆ ನನ್ನ ಒಂದು ಸಲಹೆ ಇದೆ. ಅದೇನೆಂದರೆ—ಪ್ರತಿಯೊಂದು ತಾಲ್ಲೂಕ್ ಕಛೇರಿ ಇರತಕ್ಕ ಕಡೆ ಆ ಕ್ಷೇತ್ರದ ಎಂ.ಎಲ್.ಎ. ಮತ್ತು ಎಂ.ಎಲ್.ಸಿ. ಇವರುಗಳಿಗೆ ಆಫೀಸನ್ನು ಮಾಡಿಕೊಳ್ಳಲು ಒಂದು (ಕೋಣೆ) ರೂಮನ್ನು ಒದಗಿಸಬೇಕು ಎಂದು. ಅಲ್ಲಿ ಇವರ ಪರವಾಗಿ ಒಬ್ಬ ಕ್ಲಾರ್ಕ್ ಅಲ್ಲಿ ಕೆಲಸ ಮಾಡಿ ಕೊಂಡಿರುವುದಕ್ಕೆ ಅವಕಾಶವಾಗುತ್ತದೆ. ಅದಕ್ಕೆ ಸರ್ಕಾರದವರೇನೂ ಹೆಚ್ಚಿಗೆ ಖರ್ಚುಮಾಡಬೇಕಾಗಿಲ್ಲ. ಅಲ್ಲಿಗೆ ಒಂದು ಮೂರಕ ಕುರ್ಚಿ—ಮೇಜನ್ನು ಹಾಕಿಸಿ ಕೊಟ್ಟರೆ ಸಾಕು. ಹಳ್ಳಿಗಾಡಿನ ಜನರಿಗೆ ತಾಲ್ಲೂಕ್ ಕಛೇರಿಗೆ ಬಂದಾಗ ಅಲ್ಲಿ ನಮ್ಮ ಕಡೆಯ ಜನ ಒಬ್ಬರು ಇದ್ದಾರೆ, ಅವರು ನಮ್ಮ ಕೆಲಸ ಮಾಡಿಕೊಡುತ್ತಾರೆ, ನಮಗೆ ಅವರಿರುವುದರಿಂದ ಒಂದು ಅನುಕೂಲವಾಗುತ್ತದೆ ಎಂಬ ಭಾವನೆ ಜನರಲ್ಲಿ ಬರುತ್ತದೆ. ಅದಕ್ಕಾಗಿ ಸರ್ಕಾರದವರು ಇದನ್ನು ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

12-00 NOON

ಇನ್ನು ಪಹಣಿಯ ಬಗ್ಗೆ ಒಂದು ಮಾತು. ಇದರ ಬಗ್ಗೆ ಎಷ್ಟು ಹೇಳಿದರೂ ಸಾಲದು. ಅದರಲ್ಲಿ ಒಂದು ಸಣ್ಣ ತಿದ್ದುಪಡಿ ಮಾಡುವುದಕ್ಕೂ ಆ ಕಾಗದ ಡಿವಿಜನಲ್ ಕಮಿಷನರ ಹತ್ತಿರ ಬರಬೇಕಾಗಿದೆ. ಇದರಿಂದ ರೈತರಿಗೆ ಬಹಳ ತೊಂದರೆಯಾಗಿದೆ. ಅದರಿಂದ ಈ ತಿದ್ದುಪಡಿಯನ್ನು ಸ್ಥಳದಲ್ಲೇ ಅಂದರೆ ಆಯಾಯಾ ತಾಲ್ಲೂಕ್ ಸಾಧ್ಯವಿಲ್ಲದಿದ್ದರೆ ಆಯಾಯಾ ಸಬ್‌ಡಿವಿಜನ್ನಿನಲ್ಲಿ ತೀರ್ಮಾನ ಮಾಡುವುದಕ್ಕೆ ಅವಕಾಶ ಮಾಡಿ ಅದೂ ಸಾಧ್ಯವಿಲ್ಲವಾದರೆ ಆಯಾ ಜಿಲ್ಲೆಯಲ್ಲಿ

ತೀರ್ಮಾನ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ದೊಡ್ಡ ಜಮೀನ್ದಾರರಾದರೆ ಪರವಾ ಇಲ್ಲ. ಈ ಸಣ್ಣ ಪುಟ್ಟ ರೈತರಿಗೆ ಇಷ್ಟು ದೂರ ಬರುವುದಕ್ಕೆ ಅವರಲ್ಲಿ ರೈಲ್ ಹಾಗೂ ಬಸ್ ಚಾರ್ಜಗಳನ್ನು ಕೊಡುವುದಕ್ಕೆ ತ್ರಾಣವಿಲ್ಲ. ಇನ್ನು ಇಲ್ಲಿ ಸರ್ಕಾರದವರು ಏನು ಆ ಗೇಣೀದಾರರ ಬಗ್ಗೆ ಶಾಸನ ತರುತ್ತೇವೆಂದು ಹೇಳುವುದಕ್ಕೆ ಪ್ರಾರಂಭ ಮಾಡಿದರೋ ಆಗಲೇ ನಮ್ಮಲ್ಲಿ ಆ ಭೂಮಾಲೀಕರು ಗೇಣಿದಾರರನ್ನು ಹೊರಗೆ ಹಾಕಲಿಕ್ಕೆ ಹತ್ತಿದ್ದಾರೆ, ಒಕ್ಕಲೆಬ್ಬಿಸುವುದಕ್ಕೆ ಷುರು ಮಾಡಿದ್ದಾರೆ. ಇದಕ್ಕೆ ಕೆಲವು ಕಡೆಗಳಲ್ಲಿ ಪೋಲೀಸರ ಬೆಂಬಲವೂ ಇದೆ. ಇಂಥ ಒಂದು ನಿದರ್ಶನವನ್ನು ನಮ್ಮ ಸಾಗರದ ಶ್ರೀ ತಿಮ್ಮಪ್ಪನವರು ಆಗಲೇ ಫೇಸ್ ಮಾಡಿ ಬಂದಿದ್ದಾರೆ. ಮೊನ್ನೆ ಸೊರಬಾದಲ್ಲಿ ಒಬ್ಬ ಭೂಮಾಲೀಕರು ಒಬ್ಬ ಗೇಣಿದಾರನನ್ನು ಒಕ್ಕಲೆಬ್ಬಿಸತಕ್ಕ ಸಂದರ್ಭದಲ್ಲಿ ಅತ ಪೋಲೀಸರ ಮಾರ ಬಿದ್ದಹಾಗೆ ಕಾಣುತ್ತಿದೆ. ಅದಕ್ಕೆ ಅಲ್ಲಿಯ ಡಿ.ವೈ.ಎಸ್.ಪಿ. ಭೂಮಾಲೀಕರ ಕಡೆ ಸೇರಿಕೊಂಡು ಗೇಣೀದಾರನ ಬಗ್ಗೆ 107 ರ ಪ್ರಕಾರ ಕೇಸನ್ನು ಹಾಕಿದ್ದಾರೆ. ಅಲ್ಲಿ ಪೋಲೀಸನವರು ಶ್ರೀ ತಿಮ್ಮಪ್ಪನವರಿಗೆ threaten ಮಾಡಿದ್ದಾರೆ, ಗೇಣೀದಾರರಿಗೆ ಕಿರುಕುಳ ಕೊಡುತ್ತಿದ್ದಾರೆ. ಗೇಣೀದಾರರಿಗೆ ಇದು ಜೀವದ ಪ್ರಶ್ನೆ. ಇದಕ್ಕೆ ಪೋಲೀಸಿನವರು ಕೈ ಹಾಕಿದರೆ ನಾವು ಆ ಅಧಿಕಾರಿಗಳ ಜೀವಕ್ಕೆ ಕೈ ಹಾಕಬೇಕಾಗುತ್ತದೆ. ಏಕೆಂದರೆ ಒಂದು ಕಡೆ ಗೇಣೀದಾರನಿಗೆ ಬುದ್ಧಿವಂತ ಜಮೀನ್ದಾರರಿಂದ ಕಿರುಕುಳ ಮತ್ತು ಮೋಸ ಕೃತ್ಯಗಳು ಆಗುತ್ತಿದ್ದರೆ ಅತ್ತ ಪೋಲೀಸಿನವರಿಂದ ಭಯ ಮತ್ತು ಕಿರುಕುಳ, ಈ ಮಧ್ಯೆ ಗೇಣಿದಾರ ಹಾಳಾಗುತ್ತಿದ್ದಾನೆ. ಈಗಲಾದರೂ ತಾವು ಸರಿಯಾಗಿ ಆ ಪೋಲೀಸರಿಗೆ ಸರಿಯಾದ ಆಣತಿಯನ್ನು ಕೊಟ್ಟು ಅವರು ಈ ವಿಚಾರದಲ್ಲಿ ಬಾಯಿ ಹಾಕದಂತೆ ಕೈ ಹಾಕದಂತೆ ಮಾಡಬೇಕು. ಪೋಲೀಸರು ಈ ವಿಚಾರದಲ್ಲಿ ಅತಿಕ್ರಮ ಪ್ರವೇಶ ಮಾಡಿದರೆ ಪರಿಣಾಮ ಬಹಳ ಕೆಡುತ್ತದೆ ಎಂದು ಎಚ್ಚರಕೊಡುತ್ತೇನೆ. ಇನ್ನು ಪಹಣಿ ವಿಚಾರದಲ್ಲಿ ತಾಶೀಲ್ದಾರ ಹೆಚ್ಚಿನ ಆಸಕ್ತಿ ವಹಿಸುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಆಗಲೇ ಶ್ರೀ ದೇವೇಗೌಡರು ಹೇಳಿದರು ರೈತನ ಜಮೀನಿಗೆ ಅಕ್ಕಪಕದಲ್ಲಿ ಇರತಕ ಭೂಮಿಯನ್ನು ಅವನಿಗೇ ಕೊಡಬೇಕು ಎಂದು. ಈ ದಿವಸ ಕೆಲವರು ಅಂಥ ಭೂಮಿಯನ್ನು ತಮ್ಮ ವಶಕ್ಕಾಗಲೇ ತೆಗೆದುಕೊಂಡಿದ್ದಾರೆ—ಅದಕ್ಕೆ ಅವರು ಟಿ. ಟಿ. ಅನ್ನೂ ಕೊಡುತ್ತಿದ್ದಾರೆ. ಆದರೆ ಈ ಟಿ.ಟಿ. ಹಾಕುವುದಕ್ಕೇನೂ ಒಂದು ಇತಿಮಿತಿ ಇಲ್ಲವೋ? ಈ ದಿವಸ ಅರಣ್ಯ ಇಲಾಖೆಯ ಅಧಿಕಾರಿಗಳು ಇಂಥ ಭೂಮಿಯನ್ನೆಲ್ಲಾ ಅರಣ್ಯ ಖಾತೆಯ ಭೂಮಿ ಎಂದು ಅಡ್ಡಿ ಮಾಡುತ್ತಿದ್ದಾರೆ. ಹೀಗೆ ಅರಣ್ಯ ಇಲಾಖೆಯವರೇನಾದರೂ ಆ ಭೂಮಿಯನ್ನು ವಶಪಡಿಸಿಕೊಂಡಿದ್ದೇ ಆದರೆ ಅನೇಕ ರೈತರಿಗೆ ಅವರ ತೋಟಕ್ಕೆ ಜಮೀನುಗಳಿಗೆ ಹೋಗುವುದಕ್ಕೆ ದಾರಿಯೇ ಇಲ್ಲದಂತಾಗುತ್ತದೆ. ಆದರೆ ಸರ್ಕಾರದವರು ಕೂಡಲೇ ಅರಣ್ಯ ಇಲಾಖೆಗೆ ಬರೆದು ಎಲ್ಲೆಲ್ಲಿ ವ್ಯವಸಾಯಕ್ಕೆ ಯೋಗ್ಯವಾದ ಭೂಮಿ ಇದೆಯೋ ಅಲ್ಲೆಲ್ಲಾ ಅದನ್ನು ಕೂಡಲೆ ವ್ಯವಸಾಯಕ್ಕೆ ಬಿಟ್ಟು ಕೊಡುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಹಾಲಿ ರೈತನು ಯಾವ ಜಾಗಕ್ಕೆ ಟಿ.ಟಿ. ಕೊಡುತ್ತಿದ್ದಾನೆ ಅಲ್ಲೆಲ್ಲಾ ಆತನು ನೆಟ್ಟ ಗಿಡಗಳು ನಿಂತಿವೆ. ಅಲ್ಲಿ ನೆಲ ಗಟ್ಟಿಗಿರುತ್ತದೆ. ಆದಾಗ್ಯೂ ಅಂಥ ಜಮೀನುಗಳನ್ನೂ ಅರಣ್ಯ ಇಲಾಖೆಯವರು ವಶಪಡಿಸಿಕೊಳ್ಳುತ್ತಿದ್ದಾರೆ. ಇನ್ನು ಕೆಲವು ಕಡೆ ನೋಟೀಸನ್ನು ಕೊಟ್ಟು ಕಟ್ಟಿಸಿರತಕ್ಕ ಮನೆಗಳನ್ನು ಕೀಳಿಸುತ್ತಿದ್ದಾರೆ. ಇದನ್ನೆಲ್ಲ ಕೂಡಲೇ ತಪ್ಪಿಸಿ ಆಯಾ ಭೂಮಿಯನ್ನೂ ಮತ್ತು ನೆಲಗಟ್ಟುಗಳನ್ನೂ ಆಯಾ ರೈತನಿಗೆ ಉಚಿತವಾಗಿ ಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಇಲ್ಲಿಯವರೆಗೂ ಇದ್ದ ಟಿ.ಟಿ. ದಾರರನ್ನು ಈಗಲಾದರೂ ಖಾತೇದಾರರನ್ನಾಗಿ ಮಾಡಿ. ಆತನು ಕಳೆದ 25 ವರ್ಷಗಳಿಂದಲೂ ಭೂಮಿ ಇಲ್ಲದೆ ಬಗರ್ ಹುಕುಂ ನಿಂದ ಭೂಮಿಯನ್ನು ಟಿ.ಟಿ. ಕೊಟ್ಟುಕೊಂಡು ಸಾಗುವಳಿ ಮಾಡಿಕೊಂಡು ಬರುತ್ತಿದ್ದಾನೆ. ಇನ್ನು ಕೆಲವು ಕಡೆ ಗುಡ್ಡಕ್ಕೆ ಬೇಲಿ ಹಾಕಿ ಕೊಂಡಿದ್ದಾರೆ. ಅಲ್ಲಿ ಜಮೀನು ಯಾರಿಗೂ ಸಿಕ್ಕಬಾರದು ಎನ್ನುವುದು ಅವರ ಉದ್ದೇಶ. ಅಂಥ ಭೂಮಾಲೀಕರ ಭೂಮಿಯನ್ನು ಸರ್ಕಾರದವರು ಕೂಡಲೆ ತಮ್ಮ ವಶಕ್ಕೆ ತೆಗೆದುಕೊಂಡು ಅದನ್ನು ಉಳುವುದಕ್ಕೆ ಭೂಮಿ ಇಲ್ಲದ ಭೂರಹಿತ ರೈತನಿಗೆ ಉಚಿತವಾಗಿ ಹಂಚಬೇಕೆಂದು ಹೇಳುತ್ತೇನೆ. ಸರ್ಕಾರದವರು ಕಳೆದ 25 ವರ್ಷಗಳಿಂದಲೂ ರೈತನಿಗೆ ಭೂಮಿಯನ್ನು ಕೊಡದಿದ್ದ ಕಾರಣ ನಮ್ಮ ಸೋಷಿಯಲಿಸ್ಟ್ ಪಕ್ಷದವರು ಚಳವಳಿ ಮಾಡಿ ಜನರನ್ನು ವ್ಯವಸಾಯ ಮಾಡದೆ ಪಾಳು ಬಿದ್ದಿದ್ದ ಭೂಮಿಯಲ್ಲಿ ಬಿಡಬೇಕಾಯಿತು. ಆ ರೀತಿ ಎರಡು ಕಡೆ ಅಂದರೆ ಹರತಾಳ ಮತ್ತು ಗಂಧವಸರ ಈ ಎರಡು ಕಡೆಗಳಲ್ಲಿ ಜನರನ್ನು ಜಮೀನು ಸಾಗುವಳಿ ಮಾಡುವುದಕ್ಕೆ ಬಿಡಬೇಕಾಯಿತು. ಅವರಿಗೆ ಸರ್ಕಾರದವರು ಟಿ.ಟಿ. ಇದುತ್ತಿದ್ದಾರೆ. ಇವರನ್ನು ಸರ್ಕಾರದವರು ಅಕ್ರಮ ಸಾಗುವಳಿದಾರರೆಂದು ಕರೆದಿದ್ದಾರೆ. ಹಾಗೇ ದಾವಣಗೆರೆಯ ಬಳಿ ಕಾಡಜ್ಜಿ ಎಂಬ ಒಂದು ಸ್ಥಳದಲ್ಲೂ ಜನರು ಭೂಮಿಯನ್ನು ಸಾಗುವಳಿ ಮಾಡುತ್ತಿದ್ದಾರೆ. ಅಲ್ಲಿ ಆ ಭೂಮಿಯಲ್ಲಿ ಬೇಸಾಯ ಮಾಡುತ್ತಿರುವವರೆಲ್ಲಾ ಹರಿಜನ ಗಿರಿಜನರು,

(ಶ್ರೀ ಕೋಣಂದೂರು ಲಿಂಗಪ್ಪ)

ಭೂಹೀನರು. ಈ ಜಮೀನುಗಳನ್ನೆಲ್ಲಾ ಅವರಿಗೆ ತಕ್ಷಣ ಮಂಜೂರು ಮಾಡಬೇಕು. ಆದರೆ ನಿಮ್ಮ ಪಕ್ಷದಲ್ಲೇ ಕೆಲವು ಸದಸ್ಯರೂ ಅದಕ್ಕೆ ಅಡ್ಡಿ ಒರುತ್ತಿದ್ದಾರೆಂಬ ವರ್ತಮಾನವಿದೆ. ಅದಕ್ಕೆ ಮಾನ್ಯ ಸಚಿವರು ಮನಸ್ಸು ಕೊಡಬಾರದು. ತಕ್ಷಣ ಅವರಿಗೆ ಆ ಜಮೀನುಗಳನ್ನು ಮಂಜೂರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನಾನು ಮುಳುಗಡೆ ಆದ ಜಮೀನುಗಳ ವಿಚಾರಕ್ಕೆ ಬರುತ್ತೇನೆ.

ಇನ್ನು ಮುಳುಗಡೆ ವಿಷಯ. ಶರಾವತಿ ಯೋಜನೆ ಕೆಲಸವಾದಾಗ ಸಾಗರ, ಹೊಸನಗರ, ಮಂಡಗದ್ದೆ, ಕರಪಚ್ಚಿ ಈ ಗ್ರಾಮಗಳ ಪ್ರದೇಶ ಮುಳುಗಡೆಯಾಗಿದೆ. ಆದಾಗಿ 12 ವರ್ಷವಾಗಿದೆ, ಮಂಡಗದ್ದೆ ಮತ್ತಿತರ ಕಡೆ ಈ ದಿವಸದವರೆಗೆ ಅಲ್ಲಿ ಜಮೀನು ಕೊಟ್ಟಿರುವವರಿಗೆ ಸಾಗುವಳಿ ಚೀಟಿ ಕೊಟ್ಟಿಲ್ಲ. ಶೇಕದಾರರು, ಅಮಲ್ದಾರರು, ಅಸಿಸ್ಟೆಂಟ್ ಕಮಿಷನರು ಮುಂತಾದವರು ಮುಳುಗಡೆ ಪ್ರದೇಶಕ್ಕೆ ಹೋಗುವುದು, ರೈತರಿಗೆ ತೊಂದರೆ ಕೊಡುವುದು ಇದು ಮಾತ್ರ ನಡೆಯುತ್ತಿದೆ. ಮುಳುಗಡೆ ಯಾರ ಪ್ರದೇಶದಲ್ಲಿ ಆಗಿದೆ ಆ ರೈತರಿಗೆ ತಕ್ಷಣ ಸಾಗುವಳಿ ಚೀಟಿ ಕೊಡುವ ವ್ಯವಸ್ಥೆ ಮಾಡಬೇಕು. ಕಡೆಯದಾಗಿ ಇನಾಂತಿಗಳ ವಿಷಯ. ಜಮೀನುದಾರರಿಗೆ ಪರಿಹಾರ ಕೊಡುವ ಒಂದು ಕಲಂ ಇದೆ. ಇದನ್ನು ನೋಡಿದರೆ ಒಂದು ರೀತಿಯಲ್ಲಿ ಆಶ್ಚರ್ಯವಾಗುತ್ತದೆ. ಸರಕಾರ ಇನಾಮುಗಳನ್ನು ರದ್ದುಮಾಡಿದ್ದಾರೆ. ರದ್ದಾದ ನಂತರ ಇನಾಂದಾರರಿಗೆ ಪರಿಹಾರ ಕೊಟ್ಟಿದ್ದಾರೆ. ಆದರೆ ಈಗ ಇನಾಂದಾರರು ಜಮೀನುದಾರರಾಗಿದ್ದಾರೆ. ಅವರಿಗೆ ಮತ್ತೆ ಪರಿಹಾರ ಈಗ ಕೊಡುತ್ತಿದ್ದಾರೆ. ಹಿಂದೆ ಇನಾಂತಿ ರದ್ದುಮಾಡಿದಾಗ ಪರಿಹಾರ ಕೊಟ್ಟಿರುವವರಿಗೆ ಮತ್ತೆ ಅವರು ಜಮೀನುದಾರರಾಗಿರುವಾಗ ಪರಿಹಾರ ಕೊಡಬಾರದು. ಅದರ ಬದಲು ನಾನು ಹೇಳುವುದಾದರೆ ಇನಾಂ ರದ್ದಾದನಂತರ ಗೇಣಿ ವಸೂಲು ಮಾಡಿರುವುದನ್ನು ಗೇಣಿದಾರರಿಗೆ ಜಮೀನುದಾರರಿಂದ ವಾಪಸು ಕೊಡಿಸಬೇಕು.

ಸಣ್ಣ ಹಿಡುವಳಿದಾರರಿಗೆ ವಿಶೇಷ ಗಮನಕೊಟ್ಟು ಅವರ ಹಿತ ರಕ್ಷಣೆ ಮಾಡಬೇಕು. ಅವರಿಗೆ ಪುನರ್ವ್ಯವಸ್ಥೆ ಮಾಡಬೇಕು. ಕೃಷಿ ಕಾರ್ಮಿಕರಿಗೆ ಮತ್ತು ಭೂಹೀನರಿಗೆ ಗಮನಕೊಟ್ಟು ಜಾಗ್ರತೆಯಾಗಿ ಅವರಿಗೆ ಭೂಮಿ ಕೊಡಬೇಕು. ಭೂಮಿ ಹಂಚಲು ಸಮಿತಿಗಳನ್ನು ಮಾಡುವವರಿದ್ದೀರಿ, ಅವನ್ನು ಜಾಗ್ರತೆ ಮಾಡಬೇಕು. ಸಮಿತಿಯವರು ಯಾವುದೋ ಒಂದು ಕಡೆ ಕುಳಿತು ಹಂಚಬಾರದು. ಪ್ರತಿ ಗ್ರಾಮದಲ್ಲಿ ಬರುವ ದರಖಾಸ್ತು ಅರ್ಜಿಗಳ ಸಂಖ್ಯೆ ನೋಡಿ, ಗ್ರಾಮಸ್ಥರನ್ನು ಕರೆದು ಅವರ ಅಭಿಪ್ರಾಯ ಪಡೆದು ಹಂಚುವ ವ್ಯವಸ್ಥೆಮಾಡಬೇಕು. ಇಷ್ಟು ಹೇಳಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸುತ್ತೇನೆ.

†ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್ (ಸಿರಸಿ).—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ನಮ್ಮ ರೆವೆನ್ಯೂ ಮಂತ್ರಿಗಳಾದ ಶ್ರೀ ಹುಚ್ಚಮಾಸ್ತಿಗೌಡರು ಮಂಡಿಸಿರುವ ರೆವೆನ್ಯೂ ಇಲಾಖೆಯ ಬೇಡಿಕೆಯನ್ನು ಹೃತ್ಪೂರ್ವಕವಾಗಿ ಪುಷ್ಟೀಕರಿಸುತ್ತಾ ಕೆಲವು ಸಲಹೆಗಳನ್ನು ಸರಕಾರಕ್ಕೆ ಕೊಡಲು ಇಚ್ಛಿಸುತ್ತೇನೆ. ರೈತರ ಮಗ, ರೈತರ ಕಷ್ಟವನ್ನರಿತವರು ಆದ ಒಬ್ಬ ವ್ಯಕ್ತಿ ರೆವೆನ್ಯೂ ಇಲಾಖೆಯನ್ನು ವಹಿಸಿಕೊಂಡಿರುವುದು ನಮ್ಮೆಲ್ಲರ ಭಾಗ್ಯ. ಹಳ್ಳಿಗಾಡಿನಲ್ಲಿರುವ ಶೇಕಡ 80 ಜನರ ಕಷ್ಟ ಕಾರ್ಪಣ್ಯ ಅರಿತು ಗ್ರಾಮಾಂತರ ಪ್ರದೇಶಗಳಲ್ಲಿ ಹತ್ತಾರು ವರ್ಷಗಳಿಂದ ಅನುಭವ ಪಡೆದ ವ್ಯಕ್ತಿಯೊಬ್ಬರು ರೆವೆನ್ಯೂ ಇಲಾಖೆ ಮಂತ್ರಿಗಳಾಗಿರುವುದು ನಮ್ಮ ಸುದೈವ. ಅವರು ಜನರ ಕಷ್ಟಸುಖವನ್ನರಿತಿದ್ದಾರೆ, ರೈತರು ಮತ್ತು ಕೂಲಿಗಾರರ ಕಷ್ಟವನ್ನರಿತಿದ್ದಾರೆ. ಅವರ ನಾಯಕತ್ವದಲ್ಲಿ ಹಳ್ಳಿಗಾಡಿನಲ್ಲಿರುವ ರೈತರು ಮತ್ತು ಬಡವರ ಕಷ್ಟ ನಿವಾರಣೆ ಆಗುವುದೆಂಬ ನಂಬಿಕೆ ಇದೆ. ಇದಕ್ಕಾಗಿ ನಾನು ಸಭೆಯ ಮುಂದಿರುವ ಬೇಡಿಕೆಯನ್ನು ಅನುಮೋದಿಸುತ್ತೇನೆ.

ಎರಡನೆಯದಾಗಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಸುಮಾರು 5 ವರ್ಷಗಳ ಹಿಂದೆ ಒಂದು ಲಕ್ಷ ಎಕರೆ ಅರಣ್ಯದ ಜಮೀನನ್ನು ರೆವಿನ್ಯೂ ಇಲಾಖೆಗೆ ಬಿಡುಗಡೆ ಮಾಡಲು ಸರಕಾರಿ ಅಜ್ಞೆಯಾಯಿತು. ವರ್ಷಕ್ಕೆ 5 ಅಥವ 10 ಸಾವಿರ ಎಕರೆ ಬಿಡುಗಡೆಮಾಡಿ ನಿರುದ್ಯೋಗಿಗಳು ಮತ್ತು ಬಡವರಿಗೆ ವಿಲೇ ಮಾಡುವುದಾಗಿ ಹೇಳಿದರೂ ಅದನ್ನು ಸಮರ್ಪಕವಾಗಿ ಜಾರಿಗೆ ಕೊಟ್ಟಿಲ್ಲ. ಅದನ್ನು ಜಾರಿಗೆ ತಂದು ಜಾಗ್ರತೆಯಾಗಿ ಆ ಜಮೀನನ್ನು ಹಂಚಬೇಕೆಂದು ಮನವಿಮಾಡುತ್ತೇನೆ.

ಮುಂಬಯಿ ರೂಲ್ಸ್ ಪ್ರಕಾರ ಹತ್ತಾರು ವರ್ಷದಿಂದ ಕೆಲಸ ಮಾಡಲು ವಿಲೇಜ್ ಅಕೌಂಟೆಂಟರನ್ನು ನೇಮಕಮಾಡಿದ್ದರು, ಅವರನ್ನು ತೆಗೆದುಹಾಕಿದ್ದಾರೆ. ಅವರ ಸ್ಥಿತಿ ಚಿಂತಾಜನಕವಾಗಿದೆ. ಅವರಿಗೆ ಬೇರೆ ಕೆಲಸ ಕೊಡುವುದನ್ನು ಅಥವ ಅವರನ್ನು ಮೊದಲಿದ್ದ ಕೆಲಸದಲ್ಲೇ ಮುಂದುವರಿಸುವುದನ್ನು ಪರಿಶೀಲನೆ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಈಗ ಭೂಸುಧಾರಣೆ ವಿಷಯದಲ್ಲಿ ಒಂದು ರಚನಾತ್ಮಕವಾದ ಕ್ರಾಂತಿ ನಡೆಯುತ್ತಿದೆ. ಈ ಸರಕಾರ ಬಂದಮೇಲೆ ಈ ರಾಜ್ಯದಲ್ಲಿರುವ ಭೂಮಿಯನ್ನು ಬಂಡವಾಳಗಾರರಿಂದ ತಪ್ಪಿಸಿ ಟೆನೆಂಟುಗಳಿಗೆ, "ಉಳುಮೆ ಮಾಡುವ ಉಳುವವನೇ ಹೊಲದ ಒಡೆಯ" ಎಂಬ ತತ್ವಕ್ಕನುಗುಣವಾಗಿ ಹಂಚಲು, ಸುಧಾರಣೆಯನ್ನು ಜಾರಿಗೆ ತರಲು ಒಂದು ಬಿಲ್ಲನ್ನು ಈ ಸಭೆಯ ಮುಂದೆ ಮಂಡಿಸಲು ಪ್ರಯತ್ನಮಾಡಿದ್ದಾರೆ. ಈ ಸುಧಾರಣೆಯನ್ನು ಜಾರಿಗೆ ತರುವಾಗ 10 ಸ್ಟ್ಯಾಂಡರ್ಡ್ ಎಕರೆಗಳಿಗಿಂತ ಜಾಸ್ತಿ ಯಾರಿಗೂ ಕೊಡಬಾರದು, ಇದಕ್ಕೆ ಆಡಳಿತ ಪಕ್ಷ ಒಪ್ಪಿದೆ; ಸ್ವಾಗತವಿದೆ. 10 ಸ್ಟ್ಯಾಂಡರ್ಡ್ ಎಕರೆ ಮಿತಿ ಮಾಡಿರುವುದನ್ನು ಯಾವ ವಿಧವಲ್ಲೂ ಬದಲಾಯಿಸಬಾರದು.

ಈಗ ರಿಲಿಜಿಯಸ್ ಎಂಡೋಮೆಂಟ್ ಜಮೀನಿದೆ, ಮಠ ಮತ್ತು ದೇವಸ್ಥಾನಗಳ ಜಮೀನಿದೆ, ಅವನ್ನು ಸರಕಾರ ವಹಿಸಿಕೊಳ್ಳಬೇಕು. ಉಳುವವರ ಹೆಸರಿನಲ್ಲಿ ಪಹಣಿ ಬರೆದಿರುವುದಿಲ್ಲ, ಅವರ ಹೆಸರಿನಲ್ಲಿ ಲೆಕ್ಕವಿರುವುದಿಲ್ಲ. ಬಂಡವಾಳಶಾಹಿಗಳ ಹೆಸರಿನಲ್ಲಿ ಲೆಕ್ಕವಿರುವುದರಿಂದ ಸರಕಾರಕ್ಕೆ ಯಾರು ನಿಜವಾಗಿ ಜಮೀನನ್ನು ಉಳುಮೆ ಮಾಡುವವರು ಎಂಬುದು ಗೊತ್ತಾಗುವುದಿಲ್ಲ. ಟೆನೆಂಟ್ ಯಾರೆಂಬುದು ಗೊತ್ತಾಗುವುದಿಲ್ಲ. ಆದುದರಿಂದ ಸರಕಾರದವರು ಈ ಜಮೀನನ್ನು ವಹಿಸಿಕೊಂಡು ಸೂಕ್ತ ರೀತಿಯಲ್ಲಿ ಕಾನೂನು ಮಾಡಿ ಜಮೀನಿಲ್ಲದಿರುವ ಅಗ್ರಿಕಲ್ಚರಲ್ ಲೇಬರರ್ಸ್‌ಗೆ ಅವರು ವಾಸ ಮಾಡುವ ಸ್ಥಳಗಳಲ್ಲಿ ಕೊಡಬೇಕು, ವ್ಯವಸಾಯದ ಕೂಲಿಗಳ ಪುನರ್ವ್ಯವಸ್ಥೆಗೆ ಯೋಜನೆ ಮಾಡಿ ಅದನ್ನು ಜಾರಿಗೆ ತರಬೇಕು. ಹೀಗೆ ಒಂದು ರಚನಾತ್ಮಕವಾದ ಕ್ರಾಂತಿ ಮಾಡಿ ಭೂಮಿ ಇಲ್ಲದಿರುವವರಿಗೆ, ದುಡಿಯುವವರಿಗೆ, ಅನ್ನವಿಲ್ಲದವರಿಗೆ, ಹಳ್ಳಿಗಾಡಿನವರಿಗೆ, ರೈತ ಕೂಲಿಗಳಿಗೆ ಕೆಲಸ ದೊರೆಯುವಂತೆ ಮಾಡಲು ಇರುವ ಜಮೀನೆಲ್ಲವನ್ನೂ ತೆಗೆದುಕೊಂಡು ಅವರಿಗೆ ಹಂಚಲು ಅನುಕೂಲವಾಗುವಂತೆ ಒಂದು ಯೋಜನೆ ಮಾಡಿ ಅದನ್ನು ಜಾರಿಗೆ ತರಬೇಕು. ಮಂತ್ರಿಗಳು ಈಗ ಹನ್ನೆರಡೂವರೆ ಲಕ್ಷ ಎಕರೆ ಜಮೀನನ್ನು ಉಳುವವರಿಗೆ ಕೊಡಲು ಅವಕಾಶವಿದೆ ಎಂದು ತಿಳಿಸಿದ್ದಾರೆ. ಇದರಲ್ಲಿ ಅರ್ಧ ಉಳುವುದಕ್ಕೆ ಯೋಗ್ಯವಾಗಿಲ್ಲ. ಉಳಿದರ್ಧವನ್ನು ಬಿಡುಗಡೆ ಮಾಡಿ ಅದಕ್ಕೆ ಒಂದು ಸಮಿತಿ ಮಾಡಿ ಅದರ ಮೂಲಕ ಹಂಚುವುದಾಗಿ ತಿಳಿಸಿದ್ದಾರೆ. ಇದು ಉತ್ತಮವಾದುದು. ಉಳುಮೆಗೆ ಯೋಗ್ಯವಾಗಿಲ್ಲದಿರುವ 6 ಲಕ್ಷ ಎಕರೆ ಜಮೀನನ್ನು ಅರಣ್ಯ ಇಲಾಖೆಗೆ ಕೊಟ್ಟು ಅಷ್ಟು ಉಳುಮೆಗೆ ಯೋಗ್ಯವಾದ ಪ್ರದೇಶವನ್ನು ಅರಣ್ಯ ಇಲಾಖೆಯಿಂದ ತೆಗೆದುಕೊಂಡು ಉಳುಮೆ ಮಾಡುವವರಿಗೆ ಕೊಡುವ ವ್ಯವಸ್ಥೆಮಾಡಬೇಕು ಎಂದು ಸಲಹೆ ಮಾಡುತ್ತೇನೆ. ಯಾರು ಟೆನೆಂಟ್ಸ್ ಎಂದು ಅನಿಸಿಕೊಂಡಿದ್ದಾರೋ ಅವರನ್ನು ಯಾವ ವಿಧದಿಂದಲೂ ತೆಗೆಯುವುದಕ್ಕೆ ಸರಕಾರದಲ್ಲಿ ಯಾವ ವಿಧವಾದ ನಿಯಮ ಇರಬಾರದು. ಅವರು ದುಡಿದು ಅದನ್ನು ಉತ್ತಮ ಸ್ಥಿತಿಗೆ ತಂದಿರತಕ್ಕವರು ಆಗಿರುವುದರಿಂದ, ಅನೇಕ ಜನ ಟೆನೆಂಟ್ಸ್ ಬಡವರು ಉತ್ತರ ಕನ್ನಡದಲ್ಲಿ ಇರುವುದರಿಂದ, ಮಲೆನಾಡು ಪ್ರದೇಶದಲ್ಲಿ ಇರುವವರಿಗೆ ಹೆಚ್ಚಿನ ರಕ್ಷಣೆ ಕೊಡಬೇಕು ಎನ್ನುವ ಅಂಶವನ್ನು ಹೇಳುತ್ತೇನೆ. ಹತ್ತು ಎಕರೆಗೆ ಕಡಿಮೆ ಇರತಕ್ಕ ರೈತ ಕಂದಾಯ ಕೊಡುವುದನ್ನು ರದ್ದು ಮಾಡಬೇಕು. ಈ ಸಲಹೆಯನ್ನು ಪರಿಶೀಲನೆ ಮಾಡಿ ಯಾರು ಸಫಿಷಿಯಂಟ್ ಹೋಲ್ಡರ್ಸ್ ತತ್ವಕ್ಕೆ ಒಳಗಾಗಿದ್ದಾರೋ ಅಂತಹವರಿಗೆ ಕಂದಾಯ ಮುಂದುವರಿಸಿ. ಯಾರು ಸಫಿಷಿಯಂಟ್ ಹೋಲ್ಡರ್ಸ್ ಇಲ್ಲವೋ ಅಂತಹವರಿಗೆ ಕಂದಾಯವನ್ನು ರದ್ದು ಮಾಡಬೇಕು. ಕಂದಾಯವನ್ನು ರದ್ದು ಮಾಡುವುದರಿಂದ ಆಗತಕ್ಕ ನಷ್ಟ ಮತ್ತು ಹಣವನ್ನು ಬೇರೆ ರೂಪದಲ್ಲಿ ಬಂಡವಾಳಷಾಹಿಗಳಿಂದ ಬರತಕ್ಕ ರೀತಿಯಲ್ಲಿ ಸೆಸ್ ಹಾಕಿ ವಸೂಲು ಮಾಡಬೇಕೆಂದು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ. ಮತ್ತೊಂದು ಚಿಂತಾಜನಕವಾದ ವಿಷಯವೇನೆಂದರೆ ನಿರ್ಗತಿಕರು ಆಗಿರತಕ್ಕವರು, ಬಡವರು, ಗೇಣು ಬಟ್ಟೆ ಇಲ್ಲದೆ ಇರತಕ್ಕವರು, ಹರಿಜನರು ಮತ್ತು ಗಿರಿಜನರು ಅರ್ಜಿಗಳನ್ನು ಕೊಡುತ್ತಾರೆ. ಮಂತ್ರಿಗಳಿಗೆ ಅರ್ಜಿಗಳನ್ನು ಕೊಡುವಾಗ 2 ರೂಪಾಯಿನ ಸ್ಟ್ಯಾಂಪ್ ಹಾಕಿ ಕೊಡಬೇಕು. ಡೆಪ್ಯುಟಿ ಕಮಿಷನರಿಗೆ ಕೊಡುವಾಗ ಒಂದೂಕಾಲು ರೂಪಾಯಿಯ ಸ್ಟ್ಯಾಂಪ್ ಹಾಕಿ ಕೊಡಬೇಕು. ಸ್ಟ್ಯಾಂಪ್ ಡ್ಯೂಟಿ ಹಾಕಿ ಕೊಡುವುದಕ್ಕೆ ನಿರ್ಗತಿಕರು, ಬಡವರು, ಹರಿಜನರು ಆಗಿರುವುದರಿಂದ ಅದನ್ನು ಹಚ್ಚಿ ಕೊಡುವುದಕ್ಕೆ ಆಗುವುದಿಲ್ಲ. ಆದುದರಿಂದ ಅವರಿಗೆ ರಿಯಾಯಿತಿ ಕೊಡಬೇಕೆಂದು ಈ ಸಂದರ್ಭದಲ್ಲಿ ತಮ್ಮನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಫಸ್ಟ್ ಪ್ಲಾನ್, ಸೆಕೆಂಡ್ ಪ್ಲಾನ್, ಥರ್ಡ್ ಪ್ಲಾನ್ ಮತ್ತು ಫೋರ್ತ್ ಪ್ಲಾನಿನಲ್ಲಿ ರಾಷ್ಟ್ರದ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ ಪ್ರಾಜೆಕ್ಟುಗಳಲ್ಲಿ ಲಕ್ಷಗಟ್ಟಲೆ ಇರಿಗೇಷನ್ ಕೆಲಸಗಳು ಆಗುತ್ತಿವೆ. ಇದರಿಂದ ಬಂಡವಾಳಷಾಹಿಗಳು ಪ್ರಯೋಜನ ಹೊಂದಿದ್ದಾರೆ. ಬಡವರಿಗೆ ಮಾತ್ರ ಈ ಪ್ರಾಜೆಕ್ಟುಗಳಲ್ಲಿ ಯಾವ ಜಮೀನು ಸಿಕ್ಕಲಿಲ್ಲ. ಎಲ್ಲೆಲ್ಲಿ ಹೆಚ್ಚು ಸರಕಾರಿ ಜಮೀನುಗಳು ಪ್ರಾಜೆಕ್ಟಿನಲ್ಲಿ ಇವೆಯೋ ಅಂಥ ಕಡೆ ರಿಹ್ಯಾಬಿಲಿಟೇಷನ್ ಸ್ಕೀಂ ತಂದು ಅಗ್ರಿಕಲ್ಚರಲ್ ಕಾಲೋನಿಗಳನ್ನು ಮಾಡಿ ಸೆಂಟ್ರಲ್ ಸ್ಪಾನ್ಸಾರ್ಡ್ ಸ್ಕೀಂ ತಂದು ಬಡವರು ಆಗಿರತಕ್ಕವರು, ಕೂಲಿಗಾರರು,

(ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್)

ಜಮೀನು ಇಲ್ಲದೆ, ಇರತಕ್ಕವರು ಇಂಥವರಿಗೆ ಪುನರ್ ವಸತಿ ಸೌಕರ್ಯ ಮಾಡಿಕೊಡುವ ವಿಚಾರ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಎಲ್ಲಕ್ಕಿಂತ ಮೊದಲು ತೋಟಿ ತಳವಾರರು, ನೀರುಗಂಟಿಗಳಿಗೆ ಜಮೀನು ಇರುವುದು ವಂಶಪಾರಂಪರ್ಯವಾಗಿ ನಡೆದುಕೊಂಡು ಬಂದಿದೆ. ರಾಜ್ಯದಲ್ಲಿ, ಗ್ರಾಮಾಂತರ ಪ್ರದೇಶದಲ್ಲಿ ಇರತಕ್ಕ ಬಂಡವಾಳ ಷಾಹಿಗಳು ಮತ್ತು ಇತರೆ ಜಮೀನು ಇಲ್ಲದೆ ಇರತಕ್ಕವರು ಆ ಜಮೀನುಗಳನ್ನೆಲ್ಲಾ ಕೊಂಡುಕೊಂಡುಬಿಟ್ಟಿದ್ದಾರೆ. ಈ ವಿಷಯದಲ್ಲಿ ಮಾನ್ಯ ಮಂತ್ರಿಗಳು ಒಂದು ಹೊಸ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ ಎಂದು ತಿಳಿದು ಬಂದಿದೆ. 15 ವರ್ಷಗಳಿಂದ ಯಾರು ಯಾರು ತೋಟಿ ತಳವಾರರು, ನೀರುಗಂಟಿಗಳಿಂದ ಜಮೀನುಗಳನ್ನು ಕೊಂಡುಕೊಂಡಿದ್ದಾರೋ ಅವುಗಳನ್ನು ರದ್ದು ಮಾಡಿ ಎಂದು ಸರಕಾರದವರು ಒಂದು ಹೊಸ ಸರಕಾರಿ ಹುಕುಂ ಮಾಡಿದ್ದಾರೆ ಎಂದು ಗೊತ್ತಾಗಿದೆ. ಅದಕ್ಕಾಗಿ ನಾನು ರೆವಿನ್ಯೂ ಮಂತ್ರಿಗಳನ್ನು ಅಭಿನಂದಿಸುತ್ತೇನೆ. ಆ ಜಮೀನುಗಳನ್ನೆಲ್ಲಾ ಸರಕಾರದವರೇ ವಹಿಸಿಕೊಂಡು ಯಾರು ಯಾರು ವಂಶಪಾರಂಪರ್ಯವಾಗಿ ಬಂದ ಜಮೀನುಗಳನ್ನು ಕೊಂಡುಕೊಂಡಿದ್ದಾರೋ ಅದನ್ನು ಕೂಡಲೇ ರದ್ದು ಮಾಡಿ ಬಡವರಿಗೆ, ಕೂಲಿಗಾರರಿಗೆ, ನಿರ್ಗತಿಕರಿಗೆ ಪುನಃ ಅದನ್ನು ಒದಗಿಸಿ ಕೊಡತಕ್ಕ ಏರ್ಪಾಡುಮಾಡಬೇಕೆಂದು ನಾನು ಅತ್ಯಂತ ವಿನಯದಿಂದ ಅಧ್ಯಕ್ಷರ ಮೂಲಕ ಸಲಹೆ ಮಾಡುತ್ತೇನೆ. ಅಕ್ವಿಜಿಷನ್ ಆಫ್ ಲ್ಯಾಂಡ್‌ನ ವಿಷಯದಲ್ಲಿ ಈಗ ಇರತಕ್ಕ ಪ್ರೊಸೆಸ್ ನೋಡಿದರೆ 15—20 30 ವರ್ಷಗಳಾದರೂ ಸಹ ರೆಕಾರ್ಡುಗಳನ್ನು ಸರಿಯಾದ ವ್ಯವಸ್ಥೆ ಮಾಡುವುದಕ್ಕೆ ಆಗಿಲ್ಲ. ಎಲ್ಲರಿಗೂ ಸೈಟುಗಳನ್ನು ಕೊಡಬೇಕು, ಮನೆಗಳನ್ನು ಕೊಡಬೇಕು, ಸುಖೀ ರಾಜ್ಯ ಮಾಡಬೇಕು, ಬಡವರು ಆಗಿರತಕ್ಕಂಥವರ ಸ್ಥಿತಿ ಉತ್ತಮವಾಗಬೇಕು, ಜನತೆಗೆ ನಿಜವಾದ ಸಮಾಜವಾದದ ಪ್ರಯೋಜನ ಬೇಕು, ಇಂದಿರಾಗಾಂಧಿಯವರ ಆದರ್ಶ ನಾಯಕತ್ವವನ್ನು ಅಳವಡಿಸುವುದಕ್ಕೆ ಯಾವ ರೀತಿ ಸಿದ್ಧವಾಗಿದ್ದಾರೋ ಅದೇ ರೀತಿ ಇದನ್ನು ಸರಿಪಡಿಸಬೇಕಾದರೆ ಈಗ ಇರತಕ್ಕ ಲ್ಯಾಂಡ್ ಅಕ್ವಿಜಿಷನ್ ಪ್ರೊಸೆಸ್‌ಗೆ ಇರತಕ್ಕ ರೂಲ್ಸನ್ನು ಸಧ್ಯದಮಟ್ಟಿಗೆ ಸುಲಲಿತವಾಗಿ ಮಾಡಬಹುದು. ಅರ್ಜಿಕೊಟ್ಟು ಒಂದು ವರ್ಷದೊಳಗೆ ಸೈಟು ಸಿಕ್ಕತಕ್ಕ ವ್ಯವಸ್ಥೆ ಮಾಡಬೇಕು ಎನ್ನುವ ವಿಷಯವನ್ನು ಆಲೋಚನೆಮಾಡಬೇಕೆಂದು ನಾನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ. ಲ್ಯಾಂಡ್ ಗ್ರ್ಯಾಂಟ್ಸ್ ಕಮಿಟಿ ಎಂದು ಏನು ಮಾಡಿದ್ದಾರೆ ಅದರ ಪ್ರಕಾರ ಹಳ್ಳಿಗಾಡಿನ ಪ್ರದೇಶದಲ್ಲಿ ಇರತಕ್ಕ ಜನಗಳಿಗೆ ಸಿಕ್ಕಿಲ್ಲ. 100ಕ್ಕೆ 50 ಭಾಗ ಪರಿಶಿಷ್ಟ ವರ್ಗಕ್ಕೆ ಜಮೀನು ಕೊಡಬೇಕೆಂದು ಇದ್ದರೂ ಸಹ ಇದುವರೆಗೂ ಅವರಿಗೆ ಆ ಜಮೀನು ಸಿಕ್ಕಲಿಲ್ಲ. ಉತ್ಕೃಷ್ಟ ಜಮೀನು ಎಲ್ಲೆಲ್ಲಿ ಇದೆಯೋ ಅದರಲ್ಲಿ ಅರ್ಧ ಭಾಗವನ್ನು ಪರಿಶಿಷ್ಟ ವರ್ಗಕ್ಕೆ ಮೀಸಲು ಆಗಿ ಇಟ್ಟಿದ್ದೇವೆ ಎನ್ನುವ ಒಂದು ನೋಟಿಫಿಕೇಷನ್ನು ತಾಲ್ಲೂಕು ಆಫೀಸುಗಳ ಮುಂದೆ ಮತ್ತು ವಿಲೇಜ್ ಪಂಚಾಯಿತಿಗಳ ಆಫೀಸಿನಲ್ಲಿ ನೋಟಿಫೈ ಮೊದಲೇ ಮಾಡಬೇಕು ಎನ್ನುವ ವಿಷಯವನ್ನು ಮಾನ್ಯ ಮಂತ್ರಿಗಳಿಗೆ ಸಲಹೆ ಮಾಡುತ್ತೇನೆ. ಅಂತಹ ಕಮಿಟಿಗಳನ್ನು ಮಾಡುವಾಗ ಸುಮಾರು 10—12 ಜನ ಇರುತ್ತಾರೆ. 5-6 ಜನ ಅಫಿಷಿಯಲ್ ಮೆಂಬರ್ಸ್ ಇರುತ್ತಾರೆ. 4 ಜನ ನಾನ್ ಅಫಿಷಿಯಲ್ ಮೆಂಬರ್ಸ್ ಇರುತ್ತಾರೆ ಎಂದು ಮಾನ್ಯ ಮಂತ್ರಿಗಳು ಅನೇಕ ಕಡೆ ಹೇಳಿದ್ದಾರೆ, ನಾನೂ ಕೇಳಿದ್ದೇನೆ. 174 ತಾಲ್ಲೂಕುಗಳಲ್ಲಿ 174 ಕಮಿಟಿಗಳು ಇದ್ದರೆ ಅಲ್ಲಿ ಯಾರೋ ಒಬ್ಬ ಮೆಂಬರ್ ಇರುತ್ತಾರೆ. ಅವನು ವಿದ್ಯಾವಂತನು ಅಲ್ಲ. ಆತನಿಗೆ ಲ್ಯಾಂಡ್ ಗ್ರ್ಯಾಂಟ್ಸ್ ರೂಲ್ಸ್ ಗೊತ್ತಿರುವುದಿಲ್ಲ. ಅಲ್ಲಿನ ಎಂ.ಎಲ್.ಎ. ಮತ್ತು ತಾಲ್ಲೂಕು ಬೋರ್ಡ್ ಪ್ರೆಸಿಡೆಂಟ್‌ಗೆ ಅವರು ವಿರುದ್ಧವಾಗಿ ಹೋಗುವುದಕ್ಕೆ ಆಗುವುದಿಲ್ಲ. ಆದುದರಿಂದ ಒಂದೊಂದು ಡಿಸ್ಟ್ರಿಕ್ಟಿನಲ್ಲಿ ಷೆಡ್ಯೂಲ್ ಕ್ಯಾಸ್ಟ್, ಷೆಡ್ಯೂಲ್ ಟ್ರೈಬ್ಸ್ ಎಂ. ಎಲ್. ಎ. ಗಳನ್ನು ಕೆಲವು ಕಡೆ ನಾಲ್ಕು ಜನ, ಕೆಲವು ಕಡೆ ಮೂರು ಜನ, ಕೆಲವು ಕಡೆ ಒಂದು ಇದ್ದರೆ ಎಂ. ಎಲ್. ಎ. ಗಳನ್ನು ತಾಲ್ಲೂಕು ಕಮಿಟಿಗಳ ಎಕ್ಸ್ಅಫಿಷಿಯೋ ಮೆಂಬರ್ಸ್ ಆಗಿರುವಂತೆ ಮಾಡಬೇಕು. ಅವರಿಗೆ 50 ಪರ್ಸೆಂಟ್ ಜಮೀನುಗಳನ್ನು ಕೊಡಿಸುವುದಕ್ಕೆ ಒತ್ತಾಯ ಮಾಡತಕ್ಕ ರೀತಿಯಲ್ಲಿ ಕಮಿಟಿಯಲ್ಲಿ ಎಕ್ಸ್ಅಫಿಷಿಯೋ ಷೆಡ್ಯೂಲ್ಡ್ ಕ್ಯಾಸ್ಟ್ ಮೆಂಬರ್‌ಗಳನ್ನು ಎಂ. ಪಿ., ಎಂ. ಎಲ್. ಎ. ಅಥವಾ ಎಂ. ಎಲ್. ಸಿ. ಗಳನ್ನು ಮೆಂಬರ್‌ಗಳನ್ನಾಗಿ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಭೂ ಸುಧಾರಣೆ ಜಾರಿಗೆ ಬರಲಿದೆ. ಹೊಸಕ್ರಾಂತಿ ಜಾರಿಗೆ ಬರಲಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆಯಾ ತಾಲ್ಲೂಕಿನಲ್ಲಿ ಇರತಕ್ಕವರನ್ನು ಎಕ್ಸ್ಅಫಿಷಿಯೋ ಮೆಂಬರ್ ಆಗಿ ಹಾಕುವುದು ಸಹಜ. ಉಳಿದ ತಾಲ್ಲೂಕುಗಳಿಗೂ ಅದೇ ಸದಸ್ಯರು ತರಬೇಕು ಎನ್ನುವುದು ತಮ್ಮ ಸಲಹೆಯೋ?

ಶ್ರೀ ಎಂ. ಹೆಚ್. ಜಯಪ್ರಕಾಶ್‌ನಾರಾಯಣ್.—ತುಮಕೂರು ಡಿಸ್ಟ್ರಿಕ್ಟಿನಲ್ಲಿ ಇಬ್ಬರು ಷೆಡ್ಯೂಲ್ಡ್ ಕ್ಯಾಸ್ಟ್ ಎಂ. ಎಲ್. ಎ. ಗಳು ಇದ್ದಾರೆ. ಅವರು ಎರಡು ತಾಲ್ಲೂಕಿಗೂ ರೆಪ್ರೆಸೆಂಟ್ ಮಾಡುತ್ತಾರೆ. 9 ತಾಲ್ಲೂಕಿಗೂ ರೆಪ್ರೆಸೆಂಟ್ ಮಾಡುವುದಕ್ಕೆ ಆಗುವುದಿಲ್ಲ. 9 ತಾಲ್ಲೂಕು ಇದ್ದರೂ ಸಹ ಇಬ್ಬರು ಮೆಂಬರ್ಸ್ ಎಕ್ಸ್ ಅಫಿಷಿಯೋ ಮೆಂಬರ್ಸ್ ಆಗಬೇಕು ಎಂದು ಸಲಹೆ ಮಾಡುತ್ತೇನೆ. ಇದನ್ನು ದಯವಿಟ್ಟು ಪರಿಶೀಲನೆ ಮಾಡಿ ಕ್ರಮಬದ್ಧವಾಗಿದ್ದರೆ, ಉತ್ತಮ ಸಲಹೆ ಆಗಿದ್ದರೆ ಅದನ್ನು ಜಾರಿಯಲ್ಲಿ ತರಬೇಕೆಂದು ಮಾನ್ಯ ಮಂತ್ರಿಗಳನ್ನು ಪ್ರಾರ್ಥನೆ ಮಾಡುತ್ತೇನೆ. ಕೆಲವು ದಿವಸಗಳಲ್ಲಿ ಭೂಸುಧಾರಣೆ ಜಾರಿಗೆ ಬರಲಿದೆ. ರಚನಾತ್ಮಕವಾದ ಕ್ರಾಂತಿ ರಾಜ್ಯದಲ್ಲಿ ನಡೆದು ಸರಕಾರ ಉದಾತ್ತವಾದ ಸಮಾಜವಾದದ ನೀತಿಯನ್ನು ಅನುಸರಿಸಿ ಗ್ರಾಮಾಂತರ ಪ್ರದೇಶದಲ್ಲಿ ಇರತಕ್ಕ ಜನತೆಗೆ ಜಮೀನನ್ನು ಒದಗಿಸರತಕ್ಕ ರೀತಿಯಲ್ಲಿ ಕೆಲಸ ಮಾಡುತ್ತದೆ ಎನ್ನುವ ಆಶೆ ನಮಗೆ ಇದೆ. ಅದನ್ನು ನಾವು ಎದುರು ನೋಡುತ್ತಿದ್ದೇವೆ.

ಇನ್ನು ಸರ್ವಿಸ್ ವಿಷಯದಲ್ಲಿ ಕೆಲವು ಅಂಶಗಳನ್ನು ಹೇಳುತ್ತೇನೆ. ಷೆಡ್ಯೂಲ್ಡ್ ಕ್ಯಾಸ್ಟ್ ಷೆಡ್ಯೂಲ್ ಟ್ರೈಬ್ಸ್ ಆಫೀಸರುಗಳು ಇದ್ದಾರೆ. ಡೆಪ್ಯುಟಿ ಕಮಿಷನರ್ ಗ್ರೇಡಿನಲ್ಲಿ 4—5 ಜನ ಇರಬಹುದು. ಸೆಕ್ರೆಟರಿಗಳನ್ನಾಗಿ ಹಾಕಿದ್ದಾರೆ. ಅವರನ್ನು ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ ಹಾಕಬೇಕು. ಅದರಿಂದ ಟೆಂಪಲ್ಸ್‌ಗೆ ಹೋಗುವುದಕ್ಕೆ ಅವಕಾಶವಾಗುತ್ತದೆ. ಜನತೆಗೆ ಅನ್‌ಟಚಬಿಲಿಟಿ ಹೋಗುತ್ತದೆ. ಮತ್ತು ಅವರಿಗೆ ವಿವಿಧವಾದ ಅನುಕೂಲಗಳನ್ನು ಮಾಡಿಕೊಡುವುದಕ್ಕೆ ಸಹಾಯವಾಗುತ್ತದೆ. ಹೆಡ್‌ಕ್ವಾರ್ಟರ್ಸ್‌ನಲ್ಲಿ ಅಸಿಸ್ಟೆಂಟ್ ಕಮಿಷನರುಗಳು 10—15 ಜನ ಇರಬಹುದು. ಅವರಿಗೆ ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ ಸಬ್ ಡಿವಿಜನ್ ಚಾರ್ಜ್ ಕೊಡಿ. ಅವರೂ ಸಹ ಕೆಲಸಗಳನ್ನು ಮಾಡುವುದಕ್ಕೆ ಅರ್ಹರಾಗಿದ್ದಾರೆ. ಅವರ ಚರಿತ್ರೆ ಚೆನ್ನಾಗಿದೆ. ಅವರು ಲಂಚಕೋರರು ಅಲ್ಲ. ಐ. ಎ. ಎಸ್. ಗೆ ರೆಕಮೆಂಡ್ ಮಾಡಿದ ಪರಿಶಿಷ್ಟ ವರ್ಗದ ಆಫೀಸರುಗಳು ಇಬ್ಬರನ್ನು ವಿತ್‌ಡ್ರಾ ಮಾಡಿದ್ದಾರೆ ಎಂದು ಕೇಳಿದ್ದೇನೆ. ಇದು ಸಮಾಜವಾದದ ಒಂದು ನೀತಿ ಅಲ್ಲದೇ ಇದ್ದರೂ ರಾಜ್ಯಾಂಗಕ್ಕೆ ದ್ರೋಹ ಮಾಡತಕ್ಕ ಅಂಶವಾಗಿದೆ. ಇದನ್ನು ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಮಾನ್ಯ ಮಂತ್ರಿಗಳು, ರೆವಿನ್ಯೂ ಮಂತ್ರಿಗಳು ಬಡವರಿಗೆ ಆದರ್ಶರಾಗಿದ್ದಾರೆ, ರೈತರಿಗೆ ಆದರ್ಶರಾಗಿದ್ದಾರೆ. ನಮ್ಮ ಕಷ್ಟ ಸುಖಗಳನ್ನು ಅವರು ಅರಿತಿದ್ದಾರೆ. ಬಡವರ ಸೇವೆ, ಹರಿಜನರ ಸೇವೆಯನ್ನು ಹತ್ತಾರು ವರ್ಷಗಳಿಂದ ಮಾಡಿದ್ದಾರೆ. ಅವರು ಈ ಅಂಶಗಳನ್ನೆಲ್ಲಾ ಪರಿಶೀಲನೆ ಮಾಡಿ, ಕಾರ್ಯಗತ ಮಾಡಿ ಬಡವರ ಉದ್ಧಾರ ಮಾಡುತ್ತಾರೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

12-30 P.M.

†ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಸಚಿವರು ತಮ್ಮ ಬೇಡಿಕೆಯನ್ನು ಈ ಸದನದ ಮುಂದೆ ಏನು ಇಟ್ಟಿದ್ದಾರೋ ಅದನ್ನು ಕೆಲವು ಕಾರಣಗಳ ಮೇಲೆ ವಿರೋಧ ಮಾಡುವುದಕ್ಕೆ ಇಚ್ಛೆಪಡುತ್ತೇನೆ.

ಮಾನ್ಯ ಅಧ್ಯಕ್ಷರೇ, ನಾನು ಕಂದಾಯ ಸಚಿವರ ಬಗ್ಗೆ ಒಳ್ಳೆಯ ಅಭಿಪ್ರಾಯವನ್ನು ಇಲ್ಲಿಯ ವರೆಗೂ ಇಟ್ಟುಕೊಂಡಿದ್ದೆ. ಮಾನ್ಯ ಸಚಿವರು ನಿಜವಾಗಲೂ ಬಡವರ ಬಗ್ಗೆ ಅಭಿಮಾನವುಳ್ಳವರು. ಅದರ ಬಗ್ಗೆ ನಾನು ಅಲ್ಲಗಳೆಯುವುದಿಲ್ಲ. ಏತಕ್ಕೆಂದರೆ ನಾನು ಎಲ್ಲಾ ಮಂತ್ರಿಗಳನ್ನೂ ನೋಡಿದ್ದೇನೆ. ಆದರೆ ಕಂದಾಯ ಸಚಿವರ ಆಫೀಸಿಗೆ ಹೋದಾಗ ನನ್ನ ಮನಸ್ಸಿಗೆ ಕಂಡದ್ದು ಅಚ್ಚು ಮೆಚ್ಚಿನ ಪಾತ್ರ ಯಾವುದು ಎಂದರೆ ತುಮಕೂರು ಜಿಲ್ಲೆಯ ರೈತರು ಹರಕು ಮುರುಕು ಬಟ್ಟೆ ಇರುವ ಅರ್ಧ ನಿಕ್ಕರನ್ನು ತೊಟ್ಟಿರುವ ಚಡ್ಡಿ. ಅವರ ಮುಖ ನೋಡಿದರೆ ಬಡತನದ ಪೊಳಕೆಯಿಂದಲೂ ಬೇಸತ್ತು ಹೋಗಿದ್ದಾರೆ ಎನ್ನುವ ವಿಷಯ ಗೊತ್ತಾಗುತ್ತದೆ. ಶ್ರೀಮಾನ್ ಹುಚ್ಚ ಮಾಸ್ತಿಗೌಡರ ಹೃದಯ ಒಳ್ಳೆಯ ಹೃದಯ, ಅವರು ಬಹಳ ಒಳ್ಳೆಯವರು, ನಾನು ಅವರನ್ನು ಹೊಗಳಬೇಕು ಎನ್ನುವ ಉದ್ದೇಶವಲ್ಲ, ಅವರ ವಿಚಾರದಲ್ಲಿ ಬಹಳ ವಿಶ್ವಾಸ ಇದೆ, ಬಹಳ ಗೌರವ ಇದೆ, ನಾನು ವಾಸ್ತವಿಕೆಯನ್ನು ಮುಚ್ಚಿಟ್ಟು ಮಾತನಾಡುವುದಕ್ಕಾಗುವುದಿಲ್ಲ. ಅವರಲ್ಲಿ ನನಗೆ ಈಗಲೂ ಅಭಿಮಾನ ಇದೆ. ಆದರೆ ಅವರು ರಾಜಕೀಯ ಒತ್ತಡಕ್ಕೆ ಬಲಿ ಬಿದ್ದಿದ್ದಾರೆ. ಸಮಾಜವಾದವನ್ನು ಪ್ರತಿಪಾದನೆ ಮಾಡತಕ್ಕಂಥ ಸರ್ಕಾರ ಈ ರಾಜ್ಯದಲ್ಲಿ ಅನೇಕ ಘೋಷಣೆಗಳನ್ನು ಕೂಗಿತು. ಯಾವುದೆಂದರೆ ಭೂಹಿಡುವಳಿ ಪರಿಮಿತಿ ಕಡಿಮೆ ಮಾಡುತ್ತೇವೆ, ದೇಶದಲ್ಲಿರತಕ್ಕಂಥ ಲಕ್ಷೋಪಲಕ್ಷ ಎಕರೆ ಭೂಮಿಯನ್ನು ಜಮೀನು ಇಲ್ಲದವರಿಗೆ ಹಂಚಿಕೆ ಮಾಡುತ್ತೇವೆ ಎಂದು. ಭಾರಿ ಭಾರಿ ಜಮೀನ್ದಾರರುಗಳು ಏನು ಜಮೀನನ್ನು ಇಟ್ಟುಕೊಂಡಿದ್ದಾರೋ ಅದನ್ನು ಕಾನೂನು

(ಶ್ರೀ ಎಸ್. ಬಂಗಾರಪ್ಪ)

ಮೂಲಕ ಅವರಿಂದ ಕಿತ್ತು ಜಮೀನನ್ನು ಜಮೀನು ಇಲ್ಲದವರಿಗೆ ಜಮೀನು ಕೊಡುತ್ತೇವೆ ಎನ್ನುವ ಮಾತನ್ನು ಜನತೆಯಲ್ಲಿ ನಂಬುವ ಹಾಗೆ ಮಾಡಿಬಿಟ್ಟಿದ್ದಾರೆ. ಅದೇ ರೀತಿ ಈಗಲೂ ಕೂಡ ಜನತೆ ನಂಬಿದ್ದಾರೆ. ಇಂಥಾ ಆಟವನ್ನು ಸರ್ಕಾರದವರು ಆಡಿದ್ದಾರೆ. ಭೂಸುಧಾರಣೆ ಕಾನೂನು ವಿಷಯವಾಗಿ ನಾನು ನೇರವಾಗಿ ಒಂದು ಉದಾಹರಣೆ ಕೊಡಬಲ್ಲೆ. ಮಂತ್ರಿಮಂಡಲದಲ್ಲಿ ಮೊನ್ನೆ ತೀರ್ಮಾನವಾಗಿದೆ. ಒಂದು ಸಂಸಾರಕ್ಕೆ ಖುಷ್ಕಿ ಜಮೀನು ಇದ್ದರೆ 36 ರಿಂದ 54 ಎಕರೆ, ತರೀ ಜಮೀನು ಇದ್ದರೆ 10 ರಿಂದ 18 ಎಕರೆ, ಮಳೆನೀರಿನ ಆಶ್ರಯದಲ್ಲಿ ಇರುವ ಜಮೀನು ಆದರೆ ಪರಿಮಿತಿ 54 ಎಕರೆ ಈ ರೀತಿ ತೀರ್ಮಾನವಾಗಿದೆ. ಮತ್ತೆ ಎ.ಐ.ಸಿ.ಸಿ.ಯವರು ಏನು ತೀರ್ಮಾನ ಮಾಡುತ್ತಾರೋ ಗೊತ್ತಿಲ್ಲ. ಇದರ ಬಗ್ಗೆ ಇನ್ನೂ ಚರ್ಚೆ ಮಾಡುತ್ತಿದ್ದಾರೆ. ಒಟ್ಟಿನಲ್ಲಿ ಹೇಳುವುದಾದರೆ ಡೆಲ್ಲಿಯಲ್ಲಿ ತಮಗಿಂತ ದೊಡ್ಡವರು ಎಂದರೆ ಎ.ಐ.ಸಿ.ಸಿ.ಯವರು ಕೂತುಕೊಂಡು ಮತ್ತೇನು ತೀರ್ಮಾನ ಮಾಡುತ್ತಾರೋ ಗೊತ್ತಿಲ್ಲ. ಅವರು ಕೂತುಕೊಂಡು ತೀರ್ಮಾನ ಮಾಡಿದ ಮೇಲೆ ಇಲ್ಲಿ ಮಂತ್ರಿಮಂಡಲ ಕೂತುಕೊಂಡು ತೀರ್ಮಾನ ಮಾಡಬೇಕು. ನಾನು ಹೇಳುವುದು ಏನೆಂದರೆ ಈ ವಿಷಯದಲ್ಲಿ ನಿಮಗೆ ಧೈರ್ಯ ಇದ್ದರೆ, ನಿಷ್ಟೆ ಇದ್ದರೆ ನಿಮ್ಮ ಧೈರ್ಯವನ್ನು ವ್ಯಕ್ತಪಡಿಸಿ. ಡೆಲ್ಲಿಯವರು ಏನಾದರೂ ಹೇಳಲಿ ನಿಮ್ಮ ಸೀಲಿಂಗ್ ಲಿಮಿಟನ್ನು ಇಂಪ್ಲಿಮೆಂಟ್ ಮಾಡಿ. ಇದರ ಬಗ್ಗೆ ನಿಮ್ಮ ಧೈರ್ಯವನ್ನೂ ಶಕ್ತಿಯನ್ನೂ ಪ್ರದರ್ಶನ ಮಾಡಿ. ನಾನು ಮೊದಲೇ ಹೇಳಿದ ಹಾಗೆ ಒಂದು ಸಂಸಾರಕ್ಕೆ ಇಷ್ಟು ಇರಬೇಕು ಎಂದು ಏನು ತೀರ್ಮಾನ ಮಾಡಿದ್ದೀರೋ ಅದನ್ನು ಜಾರಿಗೆ ತನ್ನಿ. ಈ ಬೂಟಾಟಿಕೆಯನ್ನು ಮಾಡಬೇಡಿ. ಜಮೀನು ಇಲ್ಲದೇ ಇರತಕ್ಕಂಥಾವರಿಗೆ ಎಷ್ಟು ಜನರಿಗೆ ಜಮೀನು ಕೊಡುತ್ತೀರಿ ? ಎಷ್ಟು ಪರ್ಸೆಂಟೇಜ್ ದೊಡ್ಡ ದೊಡ್ಡ ಜಮೀನ್ದಾರರಿಂದ ಜಮೀನು ಸಿಕ್ಕುತ್ತದೆ ? ನಿಮ್ಮ ಸಮಾಜವಾದದಲ್ಲಿ ಈ ಮಂತ್ರಿಮಂಡಲವಾಗಲಿ ಅಥವಾ ಎ.ಐ.ಸಿ.ಸಿ. ಯಾಗಲಿ ತೀರ್ಮಾನ ಮಾಡಿದರೆ ನನ್ನ ಲೆಕ್ಕಾಚಾರದ ಪ್ರಕಾರ ಶೇಕಡ 2 ಪರ್ಸೆಂಟು ಮಾತ್ರ ಜಮೀನ್ದಾರರಿಂದ ಜಮೀನು ತೆಗೆದುಕೊಳ್ಳಬಹುದೇ ವಿನಃ ಅದಕ್ಕಿಂತ ಜಾಸ್ತಿ ಸಿಕ್ಕುವುದಿಲ್ಲ. ಆದುದರಿಂದ ನಿಮ್ಮ ಸಮಾಜವಾದದಲ್ಲಿ ಒಂದು ಸಂಸಾರಕ್ಕೆ ಇಷ್ಟು ಸ್ಟ್ಯಾಂಡರ್ಡ್ ಎಕರೆ ಇರಬೇಕು ಎಂದು ಏನು ಹೇಳುತ್ತೀರೋ ಅದು ಪೊಳ್ಳು ಸಮಾಜವಾದವಾಗುತ್ತದೆ. ರಾಜ್ಯ ಸರ್ಕಾರದ್ದು ಮತ್ತು ಕೇಂದ್ರ ಸರ್ಕಾರದ್ದು ಎಲ್ಲಾ ಸೇರಿಸಿದರೂ ಕೂಡ ನಿಮಗೆ 2 ಪರ್ಸೆಂಟ್‌ಗಿಂತ ಜಾಸ್ತಿ ಜಮೀನು ಸಿಕ್ಕುವುದಿಲ್ಲ. ಸಮಾಜವಾದದ ಹೆಸರಿನಲ್ಲಿ ಭೂಸುಧಾರಣೆ ತರುತ್ತೇವೆಂದು ಹೇಳುತ್ತೀರಿ. ಅಧ್ಯಕ್ಷರ ಮೂಲಕ ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ, ನಿಮಗೆ ಧೈರ್ಯ ಇದ್ದರೆ ಒಂದು ಸಂಸಾರಕ್ಕೆ 5 ಸ್ಟ್ಯಾಂಡರ್ಡ್ ಎಕರೆ ಇರಬೇಕು ಅಂತ ಸಲಹೆ ಮಾಡಿ. ಏತಕ್ಕೆ ಈ ರೀತಿ ಸಲಹೆ ಮಾಡಬಾರದು ? ಇದು ಅನ್‌ಎಕನಾಮಿಕ್ ಹೋಲ್ಡಿಂಗ್ ಅಗುತ್ತೆ ಎಂದು ಹೇಳುವುದಾದರೆ ಇದಕ್ಕೆ ಒಂದು ಉದಾಹರಣೆ ತೆಗೆದುಕೊಳ್ಳಿ. ಜಪಾನ್ ದೇಶವನ್ನೇ ತೆಗೆದುಕೊಳ್ಳಿ. ಅಲ್ಲಿ ದೊಡ್ಡ ದೊಡ್ಡ ಹೋಲ್ಡಿಂಗ್ಸ್ ಇಲ್ಲ. ಅಲ್ಲಿ ಇರುವುದೆಲ್ಲಾ ಸಣ್ಣ ಸಣ್ಣ ಹೋಲ್ಡಿಂಗ್ಸೇ. ಜಪಾನ್ ದೇಶ ಅನ್ನುವುದು ಭಾರಿ ಭೂಭಾಗವಲ್ಲ. 4 ಮುಖ್ಯವಾದ ದ್ವೀಪಗಳು ಸೇರಿ ಅದು ಒಂದು ದೇಶವಾಗಿದೆ. ಇಲ್ಲಿ ಕೆಲವರು 500-1000 ಎಕರೆಗಳು ಇಟ್ಟುಕೊಂಡು ಭಾರಿ ಭಾರಿ ಜಮೀನ್ದಾರರಾಗಿದ್ದಾರೆ. ಅವರು 25 ವರ್ಷದಿಂದಲೂ ಕೂಡ ಮೋಸ ಮಾಡುತ್ತಿದ್ದಾರೆ. ಆದುದರಿಂದ ಇದನ್ನು ತಡೆಗಟ್ಟಬೇಕು. ಜಪಾನ್ ದೇಶದಲ್ಲಿರತಕ್ಕವರೆಲ್ಲಾ ಸಣ್ಣಸಣ್ಣ ಹಿಡುವಳಿದಾರರೇ. ಅಲ್ಲಿ 100-200 ಎಕರೆ ಸಣ್ಣ ಹೋಲ್ಡಿಂಗ್ಸ್ ಯಾರಿಗೂಇಲ್ಲ. ಅಲ್ಲಿ ಸಣ್ಣ ಸಣ್ಣ ಹೋಲ್ಡಿಂಗ್ಸ್‌ನಲ್ಲಿ ಎಷ್ಟು ಪ್ರೊಡಕ್ಷನ್ ಮಾಡುತ್ತಿದ್ದಾರೆ ನೋಡಿ. ಅದುದರಿಂದ ಇಲ್ಲಿ ಆರೀತಿ ಆಗುವುದಿಲ್ಲ ಎಂದು ಹೇಳಿದರೆ ಏತಕ್ಕೆ ? ಈ ರಾಜ್ಯದಲ್ಲಿ ದಯವಿಟ್ಟು ಅನ್‌ಎಕನಾಮಿಕ್ ಹೋಲ್ಡಿಂಗ್ಸ್ ಮಾಡಬೇಕು ಎಂದು ಹೇಳುತ್ತೇನೆ. ಈವೊತ್ತಿನ ದಿವಸ ಜಪಾನ್ ದೇಶ ಉದಾಹರಣೆಗೆ ತೆಗೆದುಕೊಂಡರೆ ಅದು ಒಂದು ಮುಂದುವರೆದ ರಾಷ್ಟ್ರವಾಗಿ ವ್ಯವಸಾಯದಲ್ಲಿ ಒಂದು ಮಾದರಿ ದೇಶವಾಗಿ ಇಂಟರ್‌ನ್ಯಾಷನಲ್ ಟ್ರೇಡ್ ಮಾರ್ಕೆಟ್‌ಗೆ ಕಾಂಪೀಟ್ ಮಾಡುತ್ತಾರೆ. ಅಲ್ಲದೆ ಜಪಾನ್ ದೇಶದ ಕೆಲವು ಭತ್ತದ ತಳಿಗಳನ್ನು ತೆಗೆದುಕೊಂಡು ನಾವು ಇಲ್ಲಿ ಬೆಳೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಈ ದೃಷ್ಟಿಯಿಂದ ಸಣ್ಣ ಸಣ್ಣ ಹಿಡುವಳಿಯೇ ಇರಲಿ ಎಂದು ನಾನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಈಗ ತಾವು ಒಂದು ಸಂಸಾರಕ್ಕೆ ತರೀ ಜಮೀನು ಆದರೆ 10 ರಿಂದ 18 ಎಕರೆ ಖುಷ್ಕಿ ಆದರೆ 54 ಎಕರೆ ಈ ರೀತಿಯಾದ ಒಂದು ಎಂಟಿ ಸ್ಲೋಗನ್ಸ್ ಏನು ಕೂಗುತ್ತಾ ಇದ್ದೀರೋ ಅದು ಒಂದು ಬೂಟಾಟಿಕೆ ಸಮಾಜವಾದ ಎಂದು ಹೇಳಬೇಕಾಗುತ್ತದೆ. ಏತಕ್ಕೆಂದರೆ ನೀವು ಜಮೀನು ಕೊಡುವುದಾದರೆ 2 ಪರ್ಸೆಂಟ್ ಮಾತ್ರ ಜಮೀನು ಇಲ್ಲದೇ ಇದ್ದವರಿಗೆ ಕೊಡಬಹುದು, ಪೂರ್ಣವಾಗಿ ತಮ್ಮ ಭರವಸೆಯನ್ನು ಈಡೇರಿಸುವುದಕ್ಕಾಗುವುದಿಲ್ಲ. 20-25 ವರ್ಷದಿಂದಲೂ ನಡೆಯುತ್ತಾ ಇರತಕ್ಕಂಥ ಮೋಸ ಮಾಡಬೇಡಿ. ರಾಜ್ಯದ

ಜನತೆಯ ಈಡೇರಿಕೆಯನ್ನು ಪೂರೈಕೆಮಾಡಬೇಕಾದರೆ ನಿಮಗೆ ಧೈರ್ಯ ಇದ್ದರೆ ಸೀಲಿಂಗ್ ಲಿಮಿಟ್‌ನ್ನು 5 ಸ್ಟ್ಯಾಂಡರ್ಡ್ ಎಕರೆಗೆ ಇಳಿಸಿ. ಜಪಾನ್ ಮಾದರಿ ತತ್ವವನ್ನು ಅನುಕರಣೆ ಮಾಡಿ. ದೊಡ್ಡದು ಹೈಯೆಲ್ಡಿಂಗ್ ಬರುವುದಿಲ್ಲ. ಸಣ್ಣ ಸಣ್ಣ ಹೋಲ್ಡಿಂಗ್ಸ್ ಮಾಡಿ ಜಾಸ್ತಿ ಉತ್ಪನ್ನ ಬರುವ ಹಾಗೆ ಮಾಡಿ. ನಾವು ಏನೇ ಹೇಳಿದರೂ ಕೂಡ ನೀವು 10 ಎಕರೆಗಿಂತ ಕಡಿಮೆ ಹೋಗುವುದಿಲ್ಲ ಎನ್ನುವುದು ಗೊತ್ತು. ನಿಮಗೆ ವೆಸ್ಟೆಡ್ ಇಂಟರೆಸ್ಟ್ ಸೇರಿಕೊಂಡಿದೆ. ಅಷ್ಟು ಸುಲಭವಾಗಿ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸೀಲಿಂಗ್ ಲಿಮಿಟ್ ಮಾಡುವುದಕ್ಕೆ ನಮ್ಮ ಧೈರ್ಯ ಇಲ್ಲ ಎಂದು ತಾವು 5 ಎಕರೆಗೆ ಸಿಲೀಂಗ್ ಲಿಮಿಟ್ ಮಾಡಿ ಎಂದು ಸಲಹೆ ಕೊಡುತ್ತೀರಾ ?

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ಹೆಸರು ಚೆನ್ನಾಗಿದೆ. ಹುಚ್ಚ ಎಂದು ಇರುವುದರ ಜೊತೆಗೆ ಮಾಸ್ತಿ ಎಂದೂ ಕೂಡ ಇದೆ. ಮಸ್ತಿ ಮಾಸ್ತಿ ಎರಡೂ ಒಳ್ಳೆಯದೇ. ನಮ್ಮ ಊರಿನಲ್ಲಿ ಹೇಳುತ್ತಾರೆ ಮಸ್ತಿಗಲ್ಲು ಎಂದರೆ ವೀರತ್ವವನ್ನು ತೋರಿಸುವುದಕ್ಕೆ ಇದೆ ಎಂದು. ಏನಾದರೂ ಕಷ್ಟ ಸಂಕಟಗಳು ಆದರೆ ಆ ಊರಗಲ್ಲನ್ನು ಎತ್ತಿದರೆ ಅವರ ಕಷ್ಟಗಳು ನಿವಾರಣೆಯಾಗುತ್ತದೆಯಂತೆ. ಆದ್ದರಿಂದ ನಾನು ಅಧ್ಯಕ್ಷರ ಮೂಲಕ ಕೇಳಿಕೊಳ್ಳುತ್ತೇನೆ. ಇಂತಹ ವಿಷಯದಲ್ಲಿ ಜಮೀನ್ದಾರರ ವಿರುದ್ಧವಾಗಿ ಬಂಡವಾಳಶಾಹಿಗಳ ವಿರುದ್ಧವಾಗಿ, ಬಡವರ ಹಿತರಕ್ಷಣೆಯ ಪರವಾಗಿ ನೀವು ಹುಚ್ಚರಾಗಬೇಕು. ನಿಮಗೆ ಧೈರ್ಯ ಇದ್ದರೆ, ಮನಸ್ಸು ಇದ್ದರೆ ಹುಚ್ಚರಾಗಬೇಕು. ಅದಕ್ಕೆ ನಿಮ್ಮ ಮನಸ್ಸು ಆಧಾರವಾಗಲಿ. ಇದರ ಮೇಲೆ ನೀವು ಗೌಡಗಿರಿ ಮಾಡಬೇಕು. ಮೂರನ್ನೂ ಇಟ್ಟುಕೊಳ್ಳಿ, ಬೇಡ ಅನ್ನುವುದಿಲ್ಲ.

ಜಮೀನು ಹಂಚಿಕೆ ಸಮಿತಿ ವಿಷಯವಾಗಿ ಹೇಳಬೇಕು ಎಂದರೆ ಆ ಸಮಿತಿಯಲ್ಲಿ ಹರಿಜನರು ಇರಲೇ ಬೇಕು, ಎಷ್ಟು ಪರ್ಸೆಂಟೇಜ್ ಎನ್ನುವುದನ್ನು ನಮೂದು ಮಾಡಲೇ ಬೇಕು, ಸಮಿತಿಯವರು ಹಳ್ಳಿಗಳಿಗೆ ಹೋಗಲೇಬೇಕು ಎನ್ನುವ ಕಾನೂನು ದಯವಿಟ್ಟು ಮಾಡಿ. ನಾನು ಹೋದಸಾರಿ ಸಮಿತಿಯಲ್ಲಿ ಕೆಲಸ ಮಾಡಿದ್ದೇನೆ. ಹಳ್ಳಿಗಳಿಗೆ ಹೋಗಲೇ ಬೇಕು ಎಂದು ಕಡ್ಡಾಯ ಮಾಡದೆ ಇದ್ದರೆ ಸತ್ಯಾಂಶ ಹೊರಗೆ ಬರುವುದಿಲ್ಲ. ರೆವಿನ್ಯೂ ಅಧಿಕಾರಿಗಳು ಏನೇನು ಮಾಡಿದ್ದಾರೆ, ರಿಕಾರ್ಡ್ ಹೇಗೆ ಬಿಲ್ಡ್‌ಅಪ್ ಮಾಡಿದ್ದಾರೆ, ಮೋಸ ಮಾಡುವ ರಿಕಾರ್ಡ್ ಮಾಡಿದ್ದಾರೆಯೇ ಎನ್ನುವುದು ಗೊತ್ತಾಗುವುದಿಲ್ಲ. ಸೊರಬ ತಾಲ್ಲೂಕಿನಲ್ಲಿ ನಾನೇ ಹಿಡಿದು ಬಲಿ ಹಾಕಿದ್ದೇನೆ. ಕೆಲವುಸಾರಿ ಮಂತ್ರಿಗಳು ಕೂಡ ಮಾಡುವುದಕ್ಕಾಗುವುದಿಲ್ಲ. ಜಮೀನಿರುವವರಿಗೆ ಜಮೀನಿಲ್ಲ ಎಂದು ರಿಕಾರ್ಡ್ ಮಾಡಿದ್ದರು. ಕನ್‌ಸಲ್ಟೇಟಿವ್ ಕಮಿಟಿಗೆ ಬದಲಾಗಿ ಗ್ರ್ಯಾಂಟಿಂಗ್ ಕಮಿಟಿ ಎಂದು ಮಾಡಿ. ಸಮಿತಿ ಮಾಡಿದ ತೀರ್ಮಾನವನ್ನು ಅಸಿಸ್ಟೆಂಟ್ ಕಮಿಷನರ್ ಆಗಲೀ ಡೆಪ್ಯೂಟಿ ಕಮಿಷನರಾಗಲೀ ಒಪ್ಪಬೇಕು ಎನ್ನುವುದು ಸರಿಯಲ್ಲ. ಅವರು ದೇಶದ ನೌಕರರು. ಜನತೆಯ ಪ್ರತಿನಿಧಿಯಾಗಿ ತೀರ್ಮಾನ ಮಾಡುವಾಗ ಅದು ಫೈನಲ್ ಆಗಿರಬೇಕು. ಅದರ ಮೇಲೆ ಮತ್ತೊಬ್ಬರು ನೌಕರಷಾಹಿ ವರ್ಗದವರು ತೀರ್ಮಾನ ಕೊಡುವುದು ಬೇಡ. ಅದನ್ನು ತೆಗೆದುಹಾಕಬೇಕು ಎಂದು ಹೇಳುತ್ತೇನೆ.

ಪಹಣಿ ವಿಷಯ—ಸೊರಬ ತಾಲ್ಲೂಕಿನಲ್ಲಿ ಯಾವ ರೀತಿ ನಡೆದಿದೆ ಎನ್ನುವುದರ ಬಗ್ಗೆ ಪತ್ರ ಬರೆದಿದ್ದೇನೆ. ಅದಕ್ಕೆ ಉತ್ತರ ಬಂದಿಲ್ಲ. ಉದಾಹರಣೆಗೆ ಮಂಗಾಪುರ ಮತ್ತು ಮಾಗಡಿ ಗ್ರಾಮಗಳನ್ನು ಹೇಳುತ್ತಿದ್ದೇನೆ. ಎಲ್ಲ ಗ್ರಾಮಗಳಲ್ಲಿಯೂ ಮೋಸ ಮಾಡುತ್ತಿದ್ದಾರೆ. ಪಹಣಿಯನ್ನು ತಿದ್ದಿ ತಿದ್ದಿ ಬರೆದಿರುತ್ತಾರೆ. ಜಮೀನ್ದಾರರು ಜಮೀನುಗಳನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು ಫಸಲನ್ನು ತೆಗೆದುಕೊಂಡಿದ್ದಾರೆ. ಕ್ರಿಮಿನಲ್ ಕೇಸು ಕೂಡ ಆಗಿದೆ. ಇದೆಲ್ಲ ಆಗಿರುವುದು ಲಂಚ ತಿನ್ನತಕ್ಕ ಅಧಿಕಾರಿಗಳಿಂದ. ದಯಮಾಡಿ ಇದರ ಬಗ್ಗೆ ವಿಚಾರಣೆ ಮಾಡಬೇಕು.

ಶ್ರೀ ಕೋಣಂದೂರು ಲಿಂಗಪ್ಪನವರು ಹೇಳಿದ ಹಾಗೆ ಪೋಲೀಸರು ಕೂಡ ರೆವೆನ್ಯೂ ಅಧಿಕಾರಿಗಳು ಮತ್ತು ಜಮೀನ್ದಾರರ ಜೊತೆಗೆ ಷಾಮೀಲಾಗಿ ಜಮೀನ್ದಾರರಿಗೇ ಸಂಪೂರ್ಣ ರಕ್ಷಣೆಯನ್ನು ಕೊಡುತ್ತಿದ್ದಾರೆ.

ಫ್ಯಾಮೀನ್ ರಿಲೀಫ್ ಬಗ್ಗೆ ಒಂದು ಮಾತು ಹೇಳಬೇಕು. ನನ್ನ ಸ್ನೇಹಿತರು ಒಂದು ವಿಷಯವನ್ನು ನನಗೆ ತಿಳಿಸಿದ್ದಾರೆ. ಬಿದರೆ ಜಿಲ್ಲೆಯ ಔರಾದ ತಾಲ್ಲೂಕಿನಲ್ಲಿ ಸುಮಾರು 20 ಗ್ರಾಮಗಳಲ್ಲಿ ಈಗಾಗಲೇ ಕ್ಷಾಮ ಬಂದಿದೆ. ಅದರ ಬಗ್ಗೆ ಪರಿಹಾರವೇನೂ ಸರ್ಕಾರದಿಂದ ಸಿಕ್ಕಿಲ್ಲವೆಂದು ಹೇಳುತ್ತಿದ್ದಾರೆ. ಆ ಗ್ರಾಮಗಳಲ್ಲಿ ಕಂದಾಯ ಮತ್ತು ತಕಾವಿ ಸಾಲಕ್ಕೆ ತಗಾದೆ ಮಾಡುತ್ತಿದ್ದಾರೆ. ಈ ಗ್ರಾಮಗಳ ಬಡಜನರಿಗೆ ಕೂಡಲೇ ಸಹಾಯ ಮಾಡಬೇಕು ಎಂದು ಹೇಳುತ್ತೇನೆ.

(ಶ್ರೀ ಎಸ್. ಬಂಗಾರಪ್ಪ)

ತಕರಾರು ತಃಖ್ತೆ ವಿಷಯ. ಟಿ. ಟಿ. ಕಾನೂನು ಪ್ರಕಾರ ಫೈನ್ ಎಂದು ಹೇಳುತ್ತಾರೆ. ಕನ್ನಡದಲ್ಲಿ ಅದಕ್ಕೆ ದಂಡ ಎಂದು ಹೆಸರು. ಏತಕ್ಕೋಸ್ಕರ ದಂಡ ? ಸರ್ಕಾರದ ವಶದಲ್ಲಿರುವ ಬಂಜರು ಜಮೀನನ್ನು, ಜಮೀನಿಲ್ಲದ, ಹೊಟ್ಟೆಗೆ ಅನ್ನವಿಲ್ಲದ ಬಡವ ಸಾಗುವಳಿ ಮಾಡಿಕೊಂಡರೆ, ಸಮಾಜವಾದವನ್ನು ಹೇಳತಕ್ಕ ಜನ ಅವನಿಗೆ ದಂಡ ಹಾಕಿದ್ದಾರೆ. ಆ ದಂಡ ನಿಮಗೆ ಹಾಕಬೇಕು. ನಿಮಗೆ ಹಿಂದೆ ಸರ್ಕಾರ ನಡೆಸಿದ ನಿಮ್ಮ ಪೂರ್ವಜರಿಗೆ, ನಿಮಗೆ ಎಲ್ಲರಿಗೂ ದಂಡ ಹಾಕಬೇಕು. ಚುನಾವಣೆ ಕಾಲದಲ್ಲಿ ಹಲವಾರು ಬಾರಿ ಹೋಗಿ ಬಡವರಿಗೆ ಜಮೀನು ಹಂಚುತ್ತೇವೆ. ಮನೆ ಇಲ್ಲದವರಿಗೆ ಮನೆ ಕೊಡುತ್ತೇವೆಂದು ಮಾತು ಕೊಟ್ಟು ಮುರಿದಿರುತ್ತೀರಿ. ಹಳ್ಳಿಗಳಲ್ಲಿ ಕೊಟ್ಟ ಮಾತನ್ನು ಮುರಿದರೆ ದೇವರ ಮುಂದೆ ವಿಚಾರಿಸಿ ದಂಡ ಹಾಕುತ್ತಾರೆ. ನೀವು ಕೊಟ್ಟ ಮಾತನ್ನು ಮರೆತವರಾದುದರಿಂದ ನಿಮಗೆ ದಂಡ ಹಾಕಬೇಕು.

ಮನೆ ಅಥವ ಊರು ಸುಟ್ಟು ಹೋದರೆ ಕಾನೂನು ಪ್ರಕಾರ ಅಲ್ಪಸ್ವಲ್ಪ ಪರಿಹಾರವನ್ನು ಕೊಡುತ್ತೀರಿ. ಒಂದು ಅಡಿ ನಾಟಕ್ಕೆ ಒಂದು ರೂಪಾಯಿ ಪ್ರಕಾರ ಕೊಡಬೇಕೆಂದಿದೆ. ಆ ಕಾನೂನು ಜಾರಿಗೆ ಕೊಡುವಾಗ ತಹಸಿಲ್ದಾರರಿಗೆ 25 ರೂಪಾಯಿ, 50 ರೂಪಾಯಿ ಪರಿಹಾರ ಕೊಡುವ ಅಧಿಕಾರವನ್ನು ಕೊಟ್ಟಿರುವುದು ನಾಚಿಕೆಗೇಡಿನ ಪ್ರಸಂಗ. ಮನೆ ಸುಟ್ಟುಕೊಂಡವರಿಗೆ ಮೈಮೇಲಿನ ಬಟ್ಟೆ ಬಿಟ್ಟು ಬೇರೇನೂ ಸಿಕ್ಕುವುದಿಲ್ಲ. ಅವರಲ್ಲಿ ಇರುವುದನ್ನೆಲ್ಲ ಕಳೆದುಕೊಂಡಿರುತ್ತಾರೆ. ಅಂಥವರಿಗೆ ಸರಿಯಾದ ರೀತಿಯಲ್ಲಿ ಪರಿಹಾರವನ್ನು ಕೊಡಬೇಕಾದ್ದು ಸರ್ಕಾರದ ಕರ್ತವ್ಯ. ಅದಕ್ಕೆ ಕಾನೂನನ್ನು ಬದಲಾವಣೆ ಮಾಡಿ ನಾಟ ಶೀಘ್ರವಾಗಿ ಸಿಕ್ಕುವಂತೆ ಮತ್ತು ಪರಿಹಾರ ಕೂಡಲೇ ಸಿಕ್ಕುವಂತೆ ಮತ್ತು ಜಾಸ್ತಿ ಪರಿಹಾರ ಸಿಕ್ಕುವಂತೆ ಮಾಡಬೇಕು. ಅಂಥ ಒಂದು ಕಾನೂನನ್ನು ತಂದು ಬಡವರಿಗೆ ರಕ್ಷಣೆ ಕೊಡಬೇಕು ಎಂದು ಹೇಳಿ, ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†Sri **PRABHAKAR TELKER** (Kalgi).—Mr. Deputy Speaker, Firstly I congratulate our Revenue Minister for putting forth the Demands before this House in the form in which he has put. I also welcome his Demand and support the same.

At the outset, I wish to say that I am of the opinion that the small holders for whom there is some demand from the Leader of the Opposition that the land revenue should be exempted to them should not be conceded. I oppose his suggestion. There are some reasons for that. If we consult the small holders whether they are happy with that suggestion that they should be exempted from payment of land revenue and whether they will be benefited by it, they say : No. I came to know that if the small holders owning to the extent of 10 acres are exempted from land revenue, Government will be losing Rs. 2 crores or so. Therefore, I suggest that instead of exempting them from land revenue if the land holders are given tangible help by way of sinking wells in their farms or fields, that will be a sort of good help to the small holders. If the Government makes up its mind, out of the two crores which they get every year from the land revenue of small holders they may sink so many wells every year. Therefore, I oppose the idea of exemption of land revenue to the small holder as it does no good for the small holders themselves. Even if we consult these persons, they will be happy if the Government helps them by sinking wells and by constructing bunds, etc. So, that amount which the Government gets from the small holders, may be utilised in a proper manner and tangible help can be given to the small holders.

Our party has proclaimed that there will be a ceiling over the land holdings as well as urban property. If we go to the Sub-Registrar's Office, we see that property worth more than Rs. 50,000, when sold, is being registered for a lesser sum. For instance, a property worth Rs. 50,000, when sold, is being registered for a sum of Rs. 10,000; with the result the revenue which the Government is entitled to get out of that sale transaction is lessened. Therefore, I am suggesting that we can insert a clause in the concerned Act itself that if the Government has any information or notice that property worth Rs. 50,000 is sold for a higher price or equal price, and registered for Rs. 10,000 or undervalued for purposes of registration, the Government will have the power to purchase that property for the amount shown in the registered sale deed. By that there will be discouragement to the people who play a fraud on the Government revenues. In the Annual Report it is stated that the Department of Endowment is contemplating to take up several developmental works pertaining to charitable and religious institutions in Mysore and with a view to providing better amenities to pilgrims and tourists some developmental work is being taken up. In this connection. I may submit that the hon. Minister has not at all looked into the Hyderabad Karnatak Area. My friend here says that the Bombay Karnatak Area has also been neglected. For instance, in my place there is one Dattatreya temple where people from Maharashtra and Andhra Pradesh come in hundreds and thousands. But what is the facility that is being given to these people there? I therefore request the Hon Minister to take up development work in Gangapur in Afzalpur Taluk. Similarly, there is Nagari temple in our place. People also come in large numbers to this temple and so development work may be taken up here also. Mantralayam is a place in Andhra Pradesh. There also we can construct a choultry because 80 to 90 percent of our people go to this place.

From the Annual Report we see that Kalyana Mantaps are constructed in Bangalore and some parts of Old Mysore. In Hyderabad Karnatak Area there is not a single Kalyana Mantap. I therefore request the Hon. Minister to construct at least one Kalyana Mantap at Gulbarga. It is quite essential there.

Regarding land grant, I submit that lands are being granted to poor landless people but we see that most of these grantees alienate the property. There should be some clause by which the grantee should not be allowed to alienate the land. It is stated in the Annual Report: "Such instructions were issued to all the revenue officers and village officers to take necessary steps to check unauthorised alienation of lands granted by Government to the Scheduled Castes and Scheduled Tribes for cultivation and ensure that the grantee continues to enjoy it." I do not know what sort of instructions have been given. So, there should be a clause in the patta that the grantee shall have no right to alienate the property to anybody else.

(SRI PRABHAKAR TELKER)

Regarding scarcity relief works, Gulbarga and Bijapur are known to be scarcity-stricken districts. As far as my knowledge goes, no relief work is going on there on the scale required. I therefore request that more funds should be allotted to these districts for scarcity relief work.

With these suggestions, I thank the Chair for having given me this opportunity to speak.

†ಶ್ರೀ ಟಿ. ಎಂ. ಮಂಜುನಾಥ್ (ತಿಪಟೂರು).—ಸನ್ಮಾನ್ಯ ಸಭಾಪತಿಗಳೇ ನಮ್ಮ ಜಿಲ್ಲೆಯವರಾದಂಥ ರೆವಿನ್ಯೂ ಮಂತ್ರಿಗಳು ಈ ರೆವಿನ್ಯೂ ಬೇಡಿಕೆಯನ್ನು ಇಟ್ಟಿದ್ದಾರೆ. ಬಹಳ ಸಂತೋಷವಾದ ಸಂಗತಿ, ಅವರ ಬಗ್ಗೆ ನನಗೆ ಅಭಿಮಾನ ಮತ್ತು ಗೌರವವಿದೆ. ನನ್ನ ಸ್ನೇಹಿತರು ಹೇಳಿದ ಹಾಗೆ, ಅವರಿಗೆ ದೇವರಲ್ಲಿ ಅಮೋಘವಾದ ಭಕ್ತಿ ಇದೆ ಎಂದು ಕೇಳಿ ಬಹಳ ಸಂತೋಷವಾಯಿತು. ಮಹಾತ್ಮಗಾಂಧೀಜಿಯವರು ಹೇಳಿದಂತೆ ರಾಮರಾಜ್ಯವನ್ನು ಮಾಡುತ್ತೇವೆ ಎಂದು ಹೊಗಟ ಜನ, ರಾಮರಾಜ್ಯದಲ್ಲಿರುವ ಅನೇಕ ಸೌಕರ್ಯಗಳನ್ನು, ಹೊಂದಾಣಿಕೆಗಳನ್ನು ಸರ್ಕಾರ ಒದಗಿಸಿದೆಯೇ ಎಂದು ನೋಡುವುದಾದರೆ, ಅದರಲ್ಲಿ ಬಹಳ ವ್ಯತ್ಯಾಸ ಕಂಡುಬರುತ್ತದೆ. ರಾಮರಾಜ್ಯದಲ್ಲಿ ಆಳತಕ್ಕ ಜನತೆ ಮತ್ತು ಪ್ರಜೆಗಳಲ್ಲಿ ಇರತಕ್ಕ ಪ್ರಾಮಾಣಿಕತೆ, ಸತ್ಯ ಸಂಧತೆ ಇವುಗಳು ಬಹಳ ಮುಖ್ಯವಾಗಿ ಬೇಕು. ಎಂಟನೂರು ವರ್ಷಗಳ ಹಿಂದೆ ಅಂದರೆ 12ನೇ ಶತಮಾನದಲ್ಲಿ ಶ್ರೀ ಬಸವೇಶ್ವರರು ಹೇಳಿದ ಹಾಗೆ ಅಸ್ಪೃಶ್ಯತೆ ನಿವಾರಣೆ, ಆರ್ಥಿಕ ಮತ್ತು ಸಾಮಾಜಿಕ ರಂಗದಲ್ಲಿ ಸಮಾನತೆಯನ್ನು ಜಗತ್ತಿಗೆ ಕೊಡಿಸಬೇಕು ಎನ್ನುವ ಮೂಲ ಉದ್ದೇಶ ಇಟ್ಟುಕೊಂಡು ನ್ಯಾಯ ಧರ್ಮಗಳನ್ನು ತೋರಿಸಿದ ಸನ್ನಿವೇಶಗಳು ಇದ್ದುವು. ನಾವು ಸಹಿತ ಕಾಯಕವೇ ಕೈಲಾಸ, ಉದ್ಯೋಗ ಎಂಬುದನ್ನು ಏನು ಅವರು ಹೇಳಿದ್ದಾರೆ ಅದನ್ನೇ ಅನುಸರಿಸಿಕೊಂಡು ಹೋಗಬೇಕೆಂದಿದ್ದೇವೆ.

1–00 P.M.

ಈ ಪರಿಸ್ಥಿತಿಯಲ್ಲಿ ಧರ್ಮದ ಮುಖಾಂತರ ನ್ಯಾಯವನ್ನು ಸತ್ಯವನ್ನು ಜನತೆಗೆ ಭೋಧಿಸಿ ಸಮತಾವಾದ ಸಮಾಜ ರಚನೆ ಮಾಡಬೇಕೆಂದು ತಿಳಿದುಕೊಂಡಿದ್ದೇನೆ. ಈ ಒಂದು ಪ್ರಚಾರವನ್ನು ಮಾಡಬೇಕಾದರೆ ಬಹುಮುಖ್ಯವಾಗಿ ಹಳ್ಳಿಗಾಡಿನಲ್ಲಿ ದೇವಸ್ಥಾನಗಳು ಪ್ರಮುಖವಾದ ಸ್ಥಾನ ಪಡೆದಿವೆಯೆಂದು ಹೇಳಬೇಕಾದುದು ಇಲ್ಲ. ಮುಜರಾಯಿ ದೇವಸ್ಥಾನಗಳ ವಿಚಾರ ಮಾಡಿ ನೋಡಿದಾಗ ದನಗಳ ಕೊಟ್ಟಿಗೆಗಳು ಅವುಗಳಿಗಿಂತಲೂ ಎಷ್ಟೋ ಚೊಕ್ಕಟವಾಗಿವೆ ಎಂದು ಹೇಳಬಯಸುತ್ತೇನೆ. ಸನ್ಮಾನ್ಯ ಮಂತ್ರಿಗಳು ಕಣ್ಣಾರೆ ಕಂಡಿರಬಹುದು. ಉದಾಹರಣೆಗೆ ಹೇಳುವುದಾದರೆ, ನಮ್ಮ ಊರಿನಲ್ಲಿ ಕಳೇಶ್ವರಸ್ವಾಮಿ ದೇವಸ್ಥಾನ ಇದೆ. ಅದರ ಹುಟ್ಟುವಳಿ ಸಾವಿರಾರು ರೂಪಾಯಿ ಸರ್ಕಾರದ ಬೊಕ್ಕಸಕ್ಕೆ ಬರುತ್ತದೆ, ತೋಳರು ಮಾಡಿದಂಥ ದೇವಸ್ಥಾನ ಅದು. ಅದರೆ ಆ ದೇವಸ್ಥಾನದಲ್ಲಿ ಪೂಜೆ ಪುನಸ್ಕಾರ ಸರಿಯಾಗಿ ನಡೆಯುತ್ತಿಲ್ಲ. ಅಲ್ಲಿರುವ ತೊಲೆಗಳನ್ನು ಹುಳು ತಿಂದುಬಿಟ್ಟಿದೆ. 2—3 ವರ್ಷಗಳಿಂದ ಆ ದೇವಸ್ಥಾನ ರಿಪೇರಿಯಾಗದೆ ಶೋಚನೀಯ ಸ್ಥಿತಿಯಲ್ಲಿದೆ. ಇದನ್ನು ರಿಪೇರಿ ಮಾಡಲು ಮತ್ತು ಅಲ್ಲಿ ಸರಿಯಾಗಿ ಪೂಜೆ ಪುನಸ್ಕಾರಗಳು ನಡೆಯುತ್ತಿಲ್ಲ. ಅದರ ಬಗ್ಗೆ ಕೂಡಲೇ ಕಾರ್ಯಕ್ರಮ ತೆಗೆದುಕೊಳ್ಳಬೇಕು.

ಇನ್ನು ಅನ್ಅಥರೈಸ್ಡ್ ಕಲ್ಟಿವೇಟರ್ಸ್‌ಗೆ ಕೂಡಲೇ ಸರಿಯಾದ ರೀತಿಯಲ್ಲಿ ಜಮೀನನ್ನು ಕೊಡಿಸುವ ವ್ಯವಸ್ಥೆ ಮಾಡಬೇಕು, ಟಿ.ಟಿ. ಹಾಕುವ ಪದ್ಧತಿಯನ್ನು ತೆಗೆದುಬಿಡಬೇಕು, ನಮ್ಮ ತಹಸಿಲ್ದಾರ್ ಒಂದು ಎಕರೆಗೆ ಒಂದೂವರೆ ಸಾವಿರ ರೂಪಾಯಿ ಟಿ.ಟಿ. ಹಾಕಿದ್ದಾರೆ. ಆಸ್ತಿಯನ್ನು ಮಾರಿದರೂ ಫೈನು ಕೊಡುವುದಕ್ಕೆ ಸಾಲುವುದಿಲ್ಲ. ಅಪೀಲಿಗೆ ಬರಬೇಕಾದರೆ ಬೆಂಗಳೂರಿಗೆ ಬರಬೇಕು. ಇದನ್ನು ಸರಿಪಡಿಸಿ ಜನರಿಗೆ ತೊಂದರೆಯನ್ನು ಹೋಗಲಾಡಿಸುತ್ತೀರೆಂದು ನಂಬಿದ್ದೇನೆ. ಇನ್ನು ವಿಲೇಜ್ ಅಕೌಂಟೆಂಟ್‌ಗಳು ಸ್ಥಳಗಳಲ್ಲಿ ವಾಸ ಇರಬೇಕು ಆಯಾ ಗ್ರೂಪಿಗೆ ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ನಲ್ಲಿ ಇದ್ದು ಪಹಣಿ ಬರೆಯುವ ಸನ್ನಿವೇಶ ನಡೆಯುತ್ತದೆ. ಆದುದರಿಂದ ಅವರು ಸ್ಥಳದಲ್ಲೇ ಇರುವ ವ್ಯವಸ್ಥೆ ಮಾಡಬೇಕು. ತಾವು ರೆವಿನ್ಯೂ ಇಲಾಖೆಯನ್ನು ವಹಿಸಿಕೊಂಡ ಮೇಲೆ ಇದುವರೆಗೆ ಆಗದೆ ಇರತಕ್ಕ ಘಟನೆಗಳನ್ನು ನಾವು ನೋಡಿದ್ದೇವೆ. ಕೋಣಂದೂರು ಲಿಂಗಪ್ಪನವರು ಹೇಳಿದ ಹಾಗೆ ತಾಲ್ಲೋಕು ಆಫೀಸುಗಳ ಕಾರ್ಯಕ್ಷೇತ್ರ ನೋಡಿದಾಗ ನಿಜವಾಗಿ ಅಸಹ್ಯವಾಗುತ್ತದೆ. ಕಂಬ ಕಂಬಕ್ಕೂ ಲಂಚ ಕೊಡಬೇಕು ತಹಸಿಲ್ದಾರ್ ಆಫೀಸ್ ಮುಂದೆ ಇರುವ ಜವಾನನಿಗೆ

ಎರಡು ತೆಂಗಿನ ಕಾಯಿ ಕೊಡಬೇಕು. ರೆವಿನ್ಯೂ ಇನ್ಸ್‌ಪೆಕ್ಟರ್ ಮತ್ತು ರೆವಿನ್ಯೂ ಅಧಿಕಾರಿಗಳ ಮನೆ ಸಂಶೋಧನೆ ಮಾಡಿದರೆ ಅಲ್ಲಿ 2 ವರ್ಷಕ್ಕೆ ಆಗುವ ಪರಿಹಾರ, ಪದಾರ್ಥಗಳ ಸಂಗ್ರಹಣೆ ಕಂಡುಬರುತ್ತದೆ. ಬೆಳೆದ ರೈತನಿಗೆ 6 ತಿಂಗಳಿಗೆ ಆಗುವಷ್ಟು ಧಾನ್ಯ ಇರುವುದಿಲ್ಲ. ಆದರೆ ಅಧಿಕಾರಿಗಳಿಗೆ ಕೊಡುತ್ತಲೇ ಇರಬೇಕು. ಇಲ್ಲದೆ ಹೋದರೆ ಒಂದು ರಿಕಾರ್ಡು ಒಂದು ಹಾತಕ್ಕೆ ಹೋಗಬೇಕಾದರೆ ಪ್ರಾಣ ಹೋಗುತ್ತದೆ. ಆದುದರಿಂದ ಅಧಿಕಾರಿಗಳು ಯೋಗ್ಯ ರೀತಿಯಲ್ಲಿ ನಡೆದುಕೊಂಡು ಜನಗಳ ಸೇವೆ ಮಾಡುವ ಅವಕಾಶಗಳನ್ನು ಕಲ್ಪಿಸಿಕೊಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ತಾವು ಏನು ಭೂಸುದಾರಣೆ ಮತ್ತು ಭೂಮಿ ಹಂಚುವುದಕ್ಕೆ ಹೊರಟಿದ್ದೀರಿ ಅದು ಬಹಳ ಸ್ವಾಗತಾರ್ಹವಾದುದು ಮತ್ತು ಅದು ಸರ್ವೇಸಾಮಾನ್ಯವಾಗಿ ಒಪ್ಪತಕ್ಕದ್ದು, ಅದನ್ನು ಕೂಡಲೇ ಜಾರಿಗೆ ತಂದರೆ ಬಹಳ ಒಳ್ಳೆಯದು. ಇನ್ನೂ ಮಠಾಧಿಪತಿಗಳ ಆಸ್ತಿಪಾಸ್ತಿಗಳನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಬೇಕು ಎನ್ನುವ ಅಭಿಪ್ರಾಯ ಇರಬಹುದು. ಇವೊತ್ತಿನ ದಿವಸ ವಿದ್ಯಾಭ್ಯಾಸವನ್ನು ಕೊಡಿಸುವುದಕ್ಕೆ ಸರ್ಕಾರಕ್ಕೆ ಶಕ್ತಿ ಇಲ್ಲದೆ ಇರುವಾಗ ಮಠಾಧಿಪತಿಗಳು ಮುಂದೆ ಬಂದು ಜನರಿಗೆ ವಿದ್ಯೆ ಕಲಿಸಿ ಅವರ ಉದ್ಧಾರ ಮಾಡುತ್ತಾ ಇದ್ದಾರೆ. ಎಲ್ಲಿ ಮಠಾಧಿಪತಿಗಳು ಸಮಾಜ ಶೋಷಣೆ ಮಾಡುತ್ತಿದ್ದಾರೆ ಅಂಥ ಕಡೆ ಅವರ ಆಸ್ತಿಪಾಸ್ತಿಗಳನ್ನು ತೆಗೆದುಕೊಂಡರೆ ಬೇಡವೆಂದು ಹೇಳುವುದಿಲ್ಲ. ಎಲ್ಲ ಮಠಾಧಿಪತಿಗಳು ಜನತೆ ಸೇವೆ ಮಾಡುತ್ತಿದ್ದಾರೆ ಅಂಥವರಿಗೆ ಸರ್ವ ಶ್ರೇಷ್ಠ ಅಗ್ರಸ್ಥಾನವನ್ನು ಕೊಟ್ಟು ಅವರ ಸ್ಥಾನ ಕಾಪಾಡಿಕೊಂಡು ಬರುವುದು ಸರ್ಕಾರದ ಕರ್ತವ್ಯ ಎಂದು ಹೇಳುತ್ತೇನೆ. ಶ್ರೀಮಾನ್ ಹುಚ್ಚಮಾಸ್ತಿಗೌಡರು ನಮ್ಮ ಜಿಲ್ಲೆಯವರು, ನಮ್ಮ ಜಿಲ್ಲೆಗೆ ಒಳ್ಳೆಯ ಹೆಸರು ತರತಕ್ಕವರು ಎಂದು ಅಭಿಮಾನ ಇಟ್ಟುಕೊಂಡು ಈಗ ಸಭೆಯ ಮುಂದೆ ಇಟ್ಟಿರುವ ಬೇಡಿಕೆ ಏನು ಇದೆ ಅದು ಸದ್ವಿನಿಯೋಗ ಆಗಲಿ ಎಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಜಿ. ಪುಟ್ಟಸ್ವಾಮಿ (ಮೂಡಿಗೆರೆ).—ಸನ್ಮಾನ್ಯ ಅಧ್ಯಕ್ಷರೇ, ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮ್ಮನ್ನು ವಂದಿಸುತ್ತೇನೆ. ಹಾಗೆಯೇ ಮಾನ್ಯ ರೆವಿನ್ಯೂ ಸಚಿವರು ಮಂಡಿಸಿರತಕ್ಕ ಹಣಕಾಸಿಗೆ ಸಂಬಂಧಿಸಿದ ಬೇಡಿಕೆಗಳನ್ನು ನಾನು ಮನಸಾರೆ ಅನುಮೋದಿಸುತ್ತೇನೆ. ಕಂದಾಯ ಮಂತ್ರಿಗಳನ್ನು ಅನೇಕರು ಈ ಮನೆಯಲ್ಲಿ ವಂದಿಸಿರುತ್ತಾರೆ. ಅವರು ರೈತರ ಮಕ್ಕಳು ಅವರಿಗೆ ರೈತರ ಕಷ್ಟ ಗೊತ್ತಿದೆ. ಅವರಿಂದ ರೈತರಿಗೆ ಆಗತಕ್ಕ ಅನುಕೂಲ ಬಹಳ ಮಟ್ಟಿಗೆ ಈಡೇರುತ್ತದೆ ಎನ್ನುವ ಭರವಸೆ ಇಟ್ಟುಕೊಂಡಿದ್ದೇವೆ. ಈ ಭರವಸೆಯನ್ನು ನೆರವೇರಿಸಿಕೊಡುತ್ತಾರೆ ಎಂಬ ನಮಗೆ ನಂಬಿಕೆ ಇದೆ. ಅವರನ್ನು ನಾನು ಚೆನ್ನಾಗಿ ಬಲ್ಲೆ. ಅವರಿಂದ ಬಹುಮಟ್ಟಿಗೆ ರೈತರ ಕಷ್ಟ ಪರಂಪರೆ ಪರಿಹಾರವಾಗುತ್ತದೆ ಎಂದು ನಾನು ನಂಬಿದ್ದೇನೆ. ರೆವಿನ್ಯೂ ಇಲಾಖೆ ಒಂದಾನೊಂದು ಕಾಲದಲ್ಲಿ ಮಾತ್ರ ಇಲಾಖೆ ಆಗಿತ್ತು. ತಾಲ್ಲೋಕು ಆಫೀಸು ಮಾತ್ರ ಸ್ಥಾನವಾಗಿತ್ತು. ಜನಗಳಿಗೆ ತಾಲ್ಲೋಕು ಆಫೀಸಿನ ಮೇಲೆ ನಂಬಿಕೆ ಇತ್ತು. ಅವರ ಕಷ್ಟಕಾರ್ಪಣ್ಯಗಳು ಮತ್ತು ಅನೇಕ ಇಲಾಖೆಗಳಲ್ಲಿ ಆಗುವ ಕೆಲಸಗಳು ತಾಲ್ಲೋಕು ಆಫೀಸುಗಳ ಮುಖಾಂತರ ಆಗಬೇಕಾಗಿರುವುದರಿಂದ ಅದಕ್ಕೆ ಮಹತ್ವ ಬಹಳ ಇತ್ತು. ಹಾಗೆ ಇರುವಾಗ ಈ ಇಲಾಖೆ ಸುಧಾರಣೆ ಬಹಳಮಟ್ಟಿಗೆ ಆಗಲಿಲ್ಲ. ಏತಕ್ಕೆಂದರೆ ರೆವಿನ್ಯೂ ಇಲಾಖೆಯಲ್ಲಿ ತಾಲ್ಲೂಕಿನಲ್ಲಾಗಲಿ ಅಥವಾ ಜನರಲ್ ಕಚೇರಿಯಲ್ಲಾಗಲಿ ಸುಮಾರು 30—40 ವರ್ಷಗಳ ಹಿಂದೆ ಯಾವ ಒಂದು ಸಿಬ್ಬಂದಿ ಇತ್ತು ಅದೇ ಸಿಬ್ಬಂದಿಯನ್ನು ಈಗ ಕೆಲಸ ಜಾಸ್ತಿಯಾಗಿರುವಾಗ ಕೂಡ ಇನ್ನೂ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ದಿವಸಕ್ಕೆ ಸಾವಿರಾರು ಅರ್ಜಿಗಳು ತಾಲ್ಲೋಕು ಆಫೀಸಿನಲ್ಲಿ ಬರುತ್ತವೆ. ಅವುಗಳನ್ನು ವಿಲೇವಾರಿ ಮಾಡುವುದಕ್ಕೆ ಬಹಳ ಕಷ್ಟವಾಗಿದೆ. ಈ ಸಿಬ್ಬಂದಿಯನ್ನು ಅವರು ಪುನರ್ ವಿಮರ್ಶಿಸಿ ಹೆಚ್ಚಿಸಬೇಕು. ಗುಮಾಸ್ತರು ಕೆಲಸ ಮಾಡುವುದಕ್ಕೆ ಪ್ರತಿವರ್ಷ ಫಾರಂ ಮತ್ತು ಸ್ಟೇಷನರಿ ಇವುಗಳನ್ನು ಒದಗಿಸುತ್ತಿದ್ದಾರೆ. ಆದರೆ ಸಾಕಷ್ಟು ಒದಗಿಸುವುದಿಲ್ಲ. ಸಾಕಷ್ಟು ಒದಗಿಸದೆ ಇರುವುದರಿಂದ ಕೈಯಲ್ಲಿ ಫಾರಮ್ಸ್ ಮಾಡುವುದಕ್ಕೆ ಕಾಲ ವಿಳಂಬವಾಗುತ್ತದೆ. ಆದುದರಿಂದ ಅವರಿಗೆ ಒದಗಿಸತಕ್ಕ ಸ್ಟೇಷನರಿ ಮತ್ತು ಫಾರಂಗಳನ್ನು ಸಾಕಷ್ಟು ಪ್ರಮಾಣದಲ್ಲಿ ಒದಗಿಸಿದರೆ ವಿಳಂಬವಾಗುವುದು ಕಡಿಮೆಯಾಗುತ್ತದೆ. ಈಗ ಅರ್ಜಿಗಳನ್ನು ಕೊಟ್ಟವರಿಗೆ ಅಕ್‌ನಾಲೆಡ್ಜ್‌ಮೆಂಟ್ ಕೊಡುವ ಪದ್ಧತಿಯಿಲ್ಲ. ಆ ರೀತಿ ರಸೀದಿ ಕೊಟ್ಟರೆ ಸಾವಿರಾರು ಅರ್ಜಿಗಳಿಗೆ ಉತ್ತರ ಕೊಡಬೇಕಾಗುತ್ತದೆ. ಎಷ್ಟು ಅರ್ಜಿಗಳು ಬಂದವು ಎಷ್ಟು ವಿಲೇವಾರಿ ಆದವು ಎಂದು ಜವಾಬು ಕೊಡುವುದು ಕಷ್ಟವಾಗುತ್ತದೆ. ರಿಜಿಸ್ಟರ್ ಮಾಡಿಕೊಳ್ಳುವುದನ್ನು ಕೈಬಿಟ್ಟಿದ್ದಾರೆ. ಆದುದರಿಂದ ಮೊದಲು ಅಕ್‌ನಾಲೆಡ್ಜ್‌ಮೆಂಟ್ ಕೊಡುವ ಪದ್ಧತಿಯನ್ನು ಜಾರಿಗೆ ತರಬೇಕು. ತಹಸಿಲ್ದಾರರು ಬಹಳ ಜವಾಬ್ದಾರಿಯಿಂದ ಕೆಲಸ ಮಾಡತಕ್ಕವರು. ಅವರಿಗೆ ಎಲ್ಲಾ ತರಹ ವಸೂಲಿ ಕೆಲಸ ವಹಿಸಿದರೂ ಕೂಡ ಬಿಡಿಓಗೆ ಜೀಪು

(ಶ್ರೀ ಜ. ಪುಟ್ಟಸ್ವಾಮಿ)

ಕೊಟ್ಟಹಾಗೆ, ಇವರಿಗೆ ಯಾವ ಸೌಕರ್ಯವನ್ನು ಒದಗಿಸಿಲ್ಲ. ಇವರಿಗೆ ಅನುಕೂಲಗಳನ್ನು ಒದಗಿಸಿ ಕೊಟ್ಟರೆ ಅವರ ಜವಾಬ್ದಾರಿಯನ್ನು ನಿರ್ವಹಿಸುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಹಾಗೆಯೇ ಜನರ ದಾಕ್ಷಿಣ್ಯಕ್ಕೆ ಒಳಗಾಗುವ ರೀತಿಯಲ್ಲಿ ಕೆಲವು ಕೆಲಸಗಳನ್ನು ಸರ್ಕಾರದವರು ತಹಶೀಲ್‌ದಾರರಿಗೆ ವಹಿಸಿದ್ದಾರೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ, ನ್ಯಾಷನಲ್ ಸರ್ಟಿಫಿಕೇಟ್‌ಗಳನ್ನು ಜನರಿಗೆ ಮಾರಾಟ ಮಾಡುವುದು, ಕೆಲವು ಸಮಾರಂಭಗಳಿಗೆ ಚಂದಾವನ್ನು ಜನರಿಂದ ವಸೂಲಿ ಮಾಡುವುದು. ಈ ರೀತಿಯಿಂದ ವಸೂಲಿ ಮಾಡುವಾಗ ತಹಶೀಲ್‌ದಾರರು ಜನರ ಒಂದು ದಾಕ್ಷಿಣ್ಯಕ್ಕೆ ಒಳಗಾಗಬೇಕಾಗುತ್ತದೆ. ಮತ್ತು ಅವರು ಹೇಳಿದಂತೆ ಕೆಲವು ಸಲ ತಹಶೀಲ್‌ದಾರರು ಕೇಳಬೇಕಾಗುತ್ತದೆ. ಈ ಒಂದು ದಾಕ್ಷಿಣ್ಯದಿಂದ ತಹಶೀಲ್‌ದಾರರು ಅವರ ವಿರುದ್ಧವಾಗಿ ವರ್ತಿಸುವುದಕ್ಕಾಗುವುದಿಲ್ಲ. ಮತ್ತು ನಿರ್ದಾಕ್ಷಿಣ್ಯವಾಗಿ ಅವರು ಕೆಲಸ ಮಾಡುವುದಕ್ಕಾಗುವುದಿಲ್ಲ. ಕಾನೂನು ಪ್ರಕಾರ ಕೆಲಸ ಮಾಡುವುದು ಇದರಿಂದ ತಹಶೀಲ್‌ದಾರರಿಗೆ ತೊಂದರೆಯಾಗುತ್ತದೆ. ಚಂದಾಕೊಟ್ಟಂತಹ ಮಹನೀಯರುಗಳು ತಮ್ಮ ಒಂದು ಪ್ರಭಾವವನ್ನು ತಹಶೀಲ್‌ದಾರರ ಮೇಲೆ ಬೀರಿ ತಮ್ಮ ಕೆಲಸಗಳನ್ನು ಮಾಡಿಸಿಕೊಂಡು ಬಿಡುತ್ತಾರೆ. ಇದರಿಂದ ಕೆಲವು ಸಂದರ್ಭಗಳಲ್ಲಿ ಬಡವರಿಗೆ ತೊಂದರೆಯಾಗುವುದು ಉಂಟು. ಆದಕಾರಣ ತಹಶೀಲ್‌ದಾರರು ಕಾನೂನು ಪ್ರಕಾರ ಯಾರ ದಾಕ್ಷಿಣ್ಯಕ್ಕೂ ಒಳಗಾಗದಂತೆ ಕೆಲಸ ಮಾಡುವಂತಾಗಲು ಚಂದಾ ವಸೂಲಿ ಮಾಡುವ ಕೆಲಸವನ್ನು ಅವರಿಗೆ ವಹಿಸುವುದು ಸರಿಯಲ್ಲವೆಂದು ಹೇಳುತ್ತೇನೆ. ಶಾನುಭೋಗರು ಈಗ ಮನೆಯಲ್ಲಿಯೇ ಕುಳಿತುಕೊಂಡು ಪಹಣಿ ಲೆಕ್ಕವನ್ನು ಬರೆಯುತ್ತಿದ್ದಾರೆ. ಸ್ಥಳಕ್ಕೆ ಹೋಗಿ ನೋಡದೆ ಒಂದು ಎಕರೆಯಲ್ಲಿ 20 ಪಲ್ಲ ಬತ್ತ ಬೆಳೆಯಲಾಗಿದೆ ಎಂದು ಬರೆದು ಬಿಡುತ್ತಿದ್ದಾರೆ. ಇದರಿಂದ ಬಡವರಿಗೆ ಬಹಳ ಅನ್ಯಾಯವಾಗುತ್ತಿದೆ. ಇದು ಪರಮಾವಧಿಗೆ ಮುಟ್ಟಿದೆ. ಕೆಲವರು ತಮ್ಮ ಜಮೀನಿನಲ್ಲಿ ಬೆಳೆಯಾಗಿದ್ದರೂ ಬೆಳೆಯಾಗಿಲ್ಲ ಎಂಬುದಾಗಿ ಶ್ಯಾನುಭೋಗರಿಗೆ ಹೇಳಿ ಪಹಣಿ ಬರೆಸುತ್ತಿದ್ದಾರೆ.

Sri C. M. ARUMUGAM.—This Revenue Department, as you know touches a population of 75 per cent of the State. We have got about 19 Deputy Commissioners, so many Divisional Commissioners, Revenue Appellate Tribunal, the Land Reforms Commissioner with a big lace silk turban and Secretaries Whenever these big officers go for inspection somebody else must arrange for food. Right from the Revenue Inspector they have to pay. In the Revenue Department, we can discuss anything under the Sun and I am going to bring anything under the Sun. Therefore I suggest that you must give more time-not less than 15 minutes for the Members.

Mr. DEPUTY SPEAKER.—I have already stated that the House would continue discussions for half an hour more to-day. As the Hon. Member was not in the House, he is not aware of it and he is compelling me to speak again. It was agreed that the Revenue Minister would give his reply at 12 Noon sharp on Monday and that discussion would go on up to 1 p.m. to-day. It was also agreed that as the leaders of various groups had spoken on these demands for a considerable length of time, all the other Hon. Members may be given five minutes each. That was how it was unanimously agreed here. I am, therefore, giving five minutes to each Hon. Member.

Sri C. M. ARUMUGAM.—Mr. Deputy Speaker, I have got one submission. I do not know how this decision to extend to-day's Session by half an hour and to give five minutes to each Member was arrived at.

So far as I am concerned, the question hour is very important and should not be taken away. Let the hon. Minister speak for two hours or three hours after the question hour.

Mr. DEPUTY SPEAKER.—I fully subscribe to the view that this is an important Demand. Do not deny the implications, gravity and magnitude of the subject. But, I have my own limitations. On Monday, there are other demands also to be taken up, that too, very important Demands. In view of all these things, this decision has been taken. Certain things are raised here, which ought to have been taken up in the Business Advisory Committee and thrashed out there.

ಶ್ರೀ ಜಿ. ಪುಟ್ಟಸ್ವಾಮಿ.—ಇನ್ನು ಒಂದು ಲಕ್ಷಕ್ಕೆ ಮೇಲ್ಪಟ್ಟು ರಿಜಿಸ್ಟರ್ ಆಗುವ ಪತ್ರಗಳ ಮೇಲೆ ಇನ್ನೂ ಹೆಚ್ಚಿನ ಸ್ಟಾಂಪ್ ಡ್ಯೂಟಿಯನ್ನು ಹಾಕುವುದರಲ್ಲಿ ನನ್ನ ಅಭ್ಯಂತರವೇನೂ ಇಲ್ಲ. ಸಮಾಜವಾದವನ್ನು ಕಾರ್ಯಗತ ಮಾಡುವಾಗ ವರಮಾನವನ್ನು ಹೆಚ್ಚಿಸಿಕೊಳ್ಳಬೇಕಾಗುತ್ತದೆ. ಈ ಕಾರಣದಿಂದ ನಾವು ಅನೇಕ ಬಾಬುಗಳಿಂದ ವರಮಾನವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಅವಕಾಶ ಇದೆ. ಸಮಾಜವಾದವನ್ನು ಕಾರ್ಯಗತ ಮಾಡಬೇಕೆಂದಿರುವಾಗ ಬಡವರಿಗೆ ಕೆಲವೊಂದು ವಿನಾಯಿತಿಯನ್ನು ಕೊಡಬೇಕಾಗಿದೆ. ಅದರಂತೆ 10 ಸಾವಿರ ರೂಪಾಯಿಗಳೊಳಗೆ ರಿಜಿಸ್ಟರ್ ಆಗುವ ಪತ್ರಗಳಿಗೆ ಸ್ಟಾಂಪ್ ಡ್ಯೂಟಿಯಲ್ಲಿ ರಿಯಾಯಿತಿ ಕೊಟ್ಟು ಒಂದು ಲಕ್ಷ ಮತ್ತು ಅದಕ್ಕಿಂತ ಹೆಚ್ಚು ಹಣಕ್ಕೆ ರಿಜಿಸ್ಟರ್ ಆಗುವ ಪತ್ರಗಳಿಗೆ ದಾಮಾಷಾ ಪ್ರಕಾರ ಹೆಚ್ಚು ಹೆಚ್ಚು ಸ್ಟಾಂಪ್ ಡ್ಯೂಟಿ ವಸೂಲಿ ಮಾಡಬಹುದೆಂದು ಸಲಹೆ ಮಾಡುತ್ತೇನೆ. ಕಾಫಿ ಬೆಳೆಯುತಕ್ಕಂಥ ಭೂಮಿಯನ್ನು ಹರಿಜನರಿಗೆ ಸರ್ಕಾರದವರು ಕೊಡುವಾಗ ಅನೇಕ ಸಂದರ್ಭಗಳಲ್ಲಿ ಶುಲ್ಕವನ್ನು ಹೆಚ್ಚು ಮಾಡಿದ್ದಾರೆ. ಅಪ್‌ಸೆಟ್ ಪ್ರೈಸ್‌ನ್ನು ಜಾಸ್ತಿ ಮಾಡಿದ್ದಾರೆ. It is one of the accepted policies of the Government to uplift the Harijans. ನಾವು ಅವರಿಗೆ ನಿಮ್ಮನ್ನು ಉದ್ಧಾರ ಮಾಡುತ್ತೇವೆಂದು ಹೇಳಿದ್ದೇವೆ. ಆದ್ದರಿಂದ ಅವರಿಗೆ ಕೊಡುವ ತರೀ ಜಮೀನಿಗೆ ಎಕರೆಗೆ 100 ರೂಪಾಯಿ ಖುಷ್ಕಿ ಜಮೀನಿಗೆ ಎಕರೆಗೆ 50 ರೂಪಾಯಿಯಂತೆ ಹಾಕಿರುವ ಅಪ್‌ಸೆಟ್ ಪ್ರೈಸ್‌ನ್ನು ಕೊನೆಯ ಪಕ್ಷ 5 ಎಕರೆಯವರೆಗಾದರೂ ಮನ್ನಾ ಮಾಡಬೇಕೆಂದು ಹೇಳುತ್ತೇನೆ. ಇಲ್ಲದಿದ್ದರೆ ನಿರ್ಗತಿಕರಿಗೆ ಮತ್ತು ಬಡವರಾದಂಥ ಹರಿಜನರಿಗೆ ಬಹಳ ಕಷ್ಟವಾಗುತ್ತದೆ ಮತ್ತು ಅವರಿಗೆ ಹಣ ಕಟ್ಟುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಹೇಳುತ್ತೇನೆ.

ರೆವೆನ್ಯೂ ಸರ್ವೆ ಮಾಡುವಾಗ ಸರ್ವೆ ಇಲಾಖೆಯಲ್ಲಿ ಲಂಚದ ಹಾವಳಿ ಮೊದಲಿನಿಂದ ಕೊನೆಯವರೆಗೂ ಇದೆ. ಈಗ ಅದರ ಬಗ್ಗೆ ಸಲಹೆ ಕೊಡುತ್ತೇನೆ. ರೆವಿನ್ಯೂ ಸರ್ವೇಯರ್ಸ್‌ಗಳಲ್ಲಿ ಕೆಳಗಿನಿಂದ ಮೇಲ್ಮಟ್ಟದವರೆಗೆ ಲಂಚ ತಾಂಡವವಾಡುತ್ತಿದೆ. ಒಂದು ಆಫೀಸಿಗೆ ಟ್ರಾನ್ಸ್‌ಫರ್ ಮಾಡಬೇಕಾದರೆ ಒಂದು ಸಾವಿರ ರೂಪಾಯಿಗಳನ್ನು ತೆಗೆದುಕೊಳ್ಳುತ್ತಾರೆ ಎಂಬ ಅಪಾದನೆ ಇದೆ. ಬಹಳ ಕಟುವಾದ ವಿಚಾರ. ಬಹಳ ಸೀರಿಯಸ್ಸಾಗಿ ಪರಿಶೀಲನೆ ಮಾಡುವ ವಿಚಾರ. ಅಂತಹ ವಿಚಾರಗಳನ್ನು ನಾನು ಸ್ವಲ್ಪ ಹೇಳಬೇಕೆಂದಿದ್ದೆ. ಅಧಿಕಾರಿಗಳಿಗೆ ವಿಕೇಂದ್ರೀಕರಣವಾಗಬೇಕು. ತಾಲ್ಲೂಕು ತಹಸೀಲ್ದಾರರಿಗೆ ಜಮಾನು ಕೊಡುವುದಕ್ಕೆ ಅಧಿಕಾರ ಕೊಡಬೇಕು. ತಾಲ್ಲೂಕು ತಹಸೀಲ್ದಾರರಿಗೆ ಅಧಿಕಾರ ಕೊಡದಿದ್ದರೆ ಸಾಮಾನ್ಯ ರೈತ ಅವನು ಏನೂ ಮಾತನಾಡುವುದಕ್ಕೆ ಬರುವುದಿಲ್ಲ. ಅವನಿಗೆ ಅರ್ಜಿ ಸಹ ಪ್ರಾಯಶಃ ಬರೆಯುವುದಕ್ಕೆ ಬರುವುದಿಲ್ಲ. ಆ ರೀತಿ ಅರ್ಜಿ ಬರೆಯುವುದಕ್ಕೆ ಬೇರೆಯವರಿಗೆ ಒಂದು ರೂಪಾಯಿ ಕೊಡಬೇಕಾಗುತ್ತದೆ. ಆ ರೀತಿಯಾಗಿ ಅರ್ಜಿಗಳನ್ನು ಬರೆದು 3–4 ಆಫೀಸುಗಳಿಗೆ ಸುತ್ತುವುದೇ ಆಗುತ್ತದೆ. ಆದ್ದರಿಂದ ತಹಸೀಲ್ದಾರರಿಗೆ ಹೆಚ್ಚು ಹೆಚ್ಚು ಅಧಿಕಾರವನ್ನು ಕೊಡಬೇಕು. ಬಡವರಿಗೆ ಸಮತಾವಾದದ ತತ್ವಗಳನ್ನು ಜಾರಿಗೆ ಕೊಡಬೇಕು. ಯಾವ ರೀತಿಯ ಅಬ್‌ಜಕ್ಷನ್ ಇಲ್ಲದೆ ಇರುವಹಾಗೆ ನೋಡಿಕೊಳ್ಳಬೇಕು. ಬಹಳ ದಕ್ಷ ಅಧಿಕಾರಿಗಳಿಗೂ ಪ್ರಮೋಷನ್ ಕೊಡಬೇಕು. ರಿವಾರ್ಡ್ಸ್ ಕೊಡಬೇಕು. ವರ್ಷೇ ವರ್ಷೇ ಸಂಬಂಧಪಟ್ಟ ಇನ್ನೋಸೆಂಟ್ ಜನರನ್ನು ನೇಮಕಮಾಡಬಾರದು. ಅದು ಸರಿಯಲ್ಲ. ಟೆಂಪೊರರಿ ಕ್ಯಾಂಡಿಡೇಟುಗಳನ್ನು ನೇಮಕ ಮಾಡಿಕೊಳ್ಳುವಂತಹ ವಿಚಾರಗಳು ಇರಬಾರದು. ಅವರವರ ಜಾತಿಯವರನ್ನೇ ನೇಮಕಮಾಡುವ ಪದ್ಧತಿ ಇರಬಾರದು. ಪ್ರೊಮೋಷನ್ಸ್ ಕೊಡಬೇಕಾದರೆ ಒಂದು ರೀತಿಯ ನಿಯಮಗಳನ್ನು ಪರಿಶೀಲನೆ ಮಾಡಿ ಕೊಡಬೇಕು. ಟ್ರಾನ್ಸ್‌ಫರ್ಸ್ ಮಾಡುವ ವಿಚಾರದಲ್ಲಿ ಸರ್ಕಾರ ಹೆಚ್ಚಿಗೆ ಗಮನ ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಬಿ. ಭೈರಪ್ಪಾಜಿ (ತುರುವೇಕೆರೆ).—ಮಾನ್ಯ ಸಭಾಪತಿಯವರೇ, ನಮ್ಮ ಮುಂದೆ ಮಂಡಿಸಿರತಕ್ಕಂಥ ರೆವಿನ್ಯೂ ಮಂತ್ರಿಗಳ ಡಿಮ್ಯಾಂಡನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಇದರ ಬಗ್ಗೆ ಕೆಲವಾರು ಸಲಹೆಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಲ್ಯಾಂಡ್ ಗ್ರ್ಯಾಂಟ್ ಕಮಿಟಿ ಎಂದು ಒಂದು ಸಮಿತಿ ಇತ್ತು. ಅದು ಕೇವಲ ಕನ್‌ಸಲ್ಟೇಟಿವ್ ಕಮಿಟಿ ಎಂದು ಆಗಿತ್ತು. ನನಗೆ ಆ ಕಮಿಟಿಯಲ್ಲಿದ್ದ ಅನುಭವ ಇದೆ. ಆದರೆ ಸಾಕಷ್ಟು ಪರಿಣಾಮಕಾರಿಯಾಗಿ ಕೆಲಸವಾಗಿಲ್ಲ. ಅದಕ್ಕೆ ತಹಸೀಲ್ದಾರರ ಹಂತದಲ್ಲಿ ಸಾಕಷ್ಟು ಕೆಲಸಮಾಡಿ ಜನಗಳಿಗೆ ಜಮೀನು ಕೊಡುವ ವ್ಯವಸ್ಥೆಯಾಗಬೇಕು. ಮುಖ್ಯವಾಗಿ ಲ್ಯಾಂಡ್ ಗ್ರ್ಯಾಂಟ್ ಕಮಿಟಿ ಉಳಿಯಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನೊಂದು ವಿಷಯ. ತಾಲ್ಲೂಕು ಆಫೀಸಿನಲ್ಲಿ 40 ವರ್ಷಗಳ ಹಿಂದೆ ಇನ್ನೊಂದು ಸಿಬ್ಬಂದಿ ವರ್ಗವಿತ್ತು. ಆ ವರ್ಗವೇ ಇಂದು ಕಂಟಿನ್ಯೂ ಆಗುತ್ತಾ ಇದೆ. ಸಾಕಷ್ಟು ಪ್ರಮಾಣದಲ್ಲಿ ಹೆಚ್ಚು ಕೆಲಸವಾಗಿದೆ. ಆದರೆ ಆ ಪ್ರಮಾಣದಲ್ಲಿ ನೌಕರರ ಸಂಖ್ಯೆ ಹೆಚ್ಚಾಗಲಿಲ್ಲ. ಇದನ್ನು ತಾವು ಗಮನದಲ್ಲಿಟ್ಟುಕೊಂಡು ಕೆಲಸ ಹೆಚ್ಚು ಪ್ರಮಾಣದಲ್ಲಿ ಆಗಿರತಕ್ಕದ್ದನ್ನು ಯಾವ ರೀತಿ ಯೋಚನೆ ಮಾಡುತ್ತೀರೋ ಅದೇ ರೀತಿಯಲ್ಲಿ, ಆ ಒಂದು ಮಟ್ಟದಲ್ಲಿ ಸಿಬ್ಬಂದಿ ಸಂಖ್ಯೆಯನ್ನು ಜಾಸ್ತಿ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಕೆಲವು ಕಡೆಗಳಲ್ಲಿ ಅಧಿಕಾರಿಗಳ ಜೊತೆಯಲ್ಲಿ ಜಮೀನುಗಳನ್ನು ಎನ್‌ಕ್ರೋಚ್ ಮಾಡುವ ಪದ್ಧತಿ ಪ್ರಾರಂಭವಾಗಿದೆ. ಉದಾಹರಣೆಗೆ ಹೇಳುವುದಾದರೆ, ತುರುವೇಕೆರೆಯ ಹಂಡರೇಹಳ್ಳಿಯಲ್ಲಿ 50 ಸಾವಿರ ರೂಪಾಯಿಗಳಷ್ಟು ಬೆಲೆ ಬಾಳುವ ಜಮೀನನ್ನು ಹೊಂದಿರತಕ್ಕ ಜಮೀನ್ದಾರರಿಗೆ ಒತ್ತುವರಿ ಮಾಡುವ ಅವಕಾಶವನ್ನು ಅಧಿಕಾರಿಗಳು ಮಾಡಿಕೊಟ್ಟಿದ್ದಾರೆ. ಆ ಜಮೀನು ಹರಿಜನರಿಗಾಗಿ ಮೀಸಲಾಗಿಟ್ಟಿದ್ದಂಥ ಜಮೀನು. ಇದನ್ನು ಬೇರೆಯವರು ತಮ್ಮ ಒಂದು ಸ್ವಂತ ಲಾಭಕ್ಕಾಗಿ ಒತ್ತುವರಿ ಮಾಡಬೇಕೆಂದು ಬಡವರಿಗೆ ತೊಂದರೆ ಮಾಡುತ್ತಿದ್ದಾರೆ. ಇಂತಹ ಪರಿಸ್ಥಿತಿ ನೂರಾರು ನಮ್ಮ ತಾಲ್ಲೂಕಿನಲ್ಲಿಯೇ ನಡೆಯುತ್ತಿವೆ. ಇಂತಹ ಸಂದರ್ಭದಲ್ಲಿ ಸರ್ಕಾರ ಉಗ್ರವಾದ ಕಾರ್ಯಕ್ರಮವನ್ನು ತೆಗೆದುಕೊಂಡು ಜಮೀನನ್ನು ಬಿಡಿಸುವ ಕಾರ್ಯವನ್ನು ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳಿಗೆ ವಿನಂತಿ ಮಾಡುತ್ತೇನೆ. ಇನ್ನು ಕೆಲವು ಕಡೆಗಳಲ್ಲಿ ಜಮೀನು ರಸ್ತೆಗೆ ಹೋಗಿರುವುದರಿಂದ ಕೆರೆ ಕಟ್ಟುವ ಸ್ಥಳದಲ್ಲಿ ಮುಳುಗಡೆಯಾಗಿರುತ್ತದೆ. ರೈತ ಅನೇಕ ಕಡೆಗಳಲ್ಲಿ ಜಮೀನು ತೆಗೆದುಕೊಂಡಿರುತ್ತಾನೆ. ಜಮೀನು ಕೊಡುವ ಕಾನೂನನ್ನು ಸರ್ಕಾರ ಮಾಡದೆ ಲ್ಯಾಂಡ್ ರೆವಿನ್ಯೂ ಆಕ್ಟ್‌ನ 28ನೇ ಸೆಕ್ಷನ್ ಪ್ರಕಾರ ಮೊದಲೇ ಜಮೀನು ಕೊಡುವ ಪದ್ಧತಿ ಇದೆ. ಆ ಪದ್ಧತಿ ಪ್ರಕಾರ ಸುಮಾರು 10-12 ವರ್ಷಗಳ ಹಿಂದೆ ಜಮೀನು ತೆಗೆದುಕೊಂಡ ರೈತ ಈಗ ಕೇಳಿದರೂ ಕೂಡ ಕೊಡುತ್ತಾ ಇಲ್ಲ. ನೀರಾವರಿಗೂ ಇಂತಹ ಉದಾಹರಣೆಗಳಿವೆ. ಕಾನ್‌ಕೂರ್ ಎಂಬ ಒಂದು ಹಳ್ಳಿ ಇದೆ. ಅಲ್ಲಿ ಒಂದು ದೊಡ್ಡ ಕೆರೆಯನ್ನು ಕಟ್ಟುತ್ತಿದ್ದಾರೆ. 12 ವರ್ಷಗಳು ಆಯಿತು. ಈ ವರ್ಷ ಜಮೀನು ಮುಳುಗಡೆಯಾಗಿದೆ. ಕಳೆದುಕೊಂಡ ಜಮೀನಿಗೆ ಪ್ರತಿಯಾಗಿ ಜಮೀನು ಕೊಟ್ಟಿಲ್ಲ. ಇದರಿಂದ ರೈತರು ಕಣ್ಣೀರು ಸುರಿಸಿಕೊಂಡು ಬೆಳಿಗ್ಗೆಯಾದರೆ ತಾಲ್ಲೂಕು ಆಫೀಸಿಗೆ ಹೋಗಿ, ಡೆಪ್ಯುಟಿ ಕಮೀಷನರ್ ಆಫೀಸಿಗೆ ಹೋಗಿ ಕೇಳುವ ಪರಿಸ್ಥಿತಿ ಇದೆ. ಅವನ ಕಷ್ಟ ಇಲ್ಲಿಯವರೆಗೂ ಪರಿಹಾರವಾಗಿಲ್ಲ. ಇಂತಹ ಸಂದರ್ಭಗಳು ಈಗ ನೂರಾರು ಇವೆ. ಅದಕ್ಕೆ ಸೂಕ್ತ ಕ್ರಮವನ್ನು ತೆಗೆದುಕೊಂಡು ಜಮೀನು ಕಳೆದುಕೊಂಡ ರೈತರಿಗೆ ಜಮೀನು ಒದಗಿಸುವ ಕಾರ್ಯವನ್ನು ಅತಿ ಜಾಗ್ರತೆಯಾಗಿ ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ.

ಇನ್ನು ಮುಜರಾಯಿ ಇಲಾಖೆಯ ಬಗ್ಗೆ ನಾನು ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ನಮ್ಮಲ್ಲಿ 14 ದೊಡ್ಡ ಮುಜರಾಯಿ ಸಂಸ್ಥೆಗಳಿವೆ. ಸಣ್ಣಪುಟ್ಟ ನೂರಾರು, ಸಾವಿರಾರು ಅಂತಹ ಸಂಸ್ಥೆಗಳಿವೆ. ಉದಾಹರಣೆಗೆ ಹೇಳುವುದಾದರೆ, ಧರ್ಮಸ್ಥಳ ಒಂದನ್ನು ತೆಗೆದುಕೊಳ್ಳೋಣ. ಅಲ್ಲಿ ಬರುವ ಆದಾಯ ಲಕ್ಷಗಟ್ಟಲೆ. ಆ ಒಂದು ಆದಾಯದಿಂದ ಒಳ್ಳೊಳ್ಳೆಯ ಕೆಲಸಗಳನ್ನು ಮಾಡತಕ್ಕ ಸಂದರ್ಭಗಳನ್ನು ನಾವು ಮಾಡಬಹುದು. ಆದ್ದರಿಂದ ಅಂತಹ ಮೇಜರ್ ಇನ್‌ಸ್ಟಿಟ್ಯೂಷನ್‌ಗಳನ್ನು ಸರ್ಕಾರ ವಶಪಡಿಸಿಕೊಂಡು ಒಂದು ಯೂನಿವರ್ಸಿಟಿ ನಡೆಸುವ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಹೇಳುತ್ತೇನೆ. ಇನ್ನು ತಿರುಪತಿಯಲ್ಲಿ ಒಂದು ದೊಡ್ಡ ಯೂನಿವರ್ಸಿಟಿಯನ್ನು ನಡೆಸುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಮುಜರಾಯಿ ದೇವಸ್ಥಾನಗಳು ಹೆಚ್ಚು ಹೆಚ್ಚಾಗಿವೆ. ಲಕ್ಷಗಟ್ಟಲೆ ಆದಾಯ ಬರತಕ್ಕ ಅನೇಕ ದೇವಸ್ಥಾನಗಳಿವೆ. ಇವುಗಳನ್ನು ಇದೇ ರೀತಿಯಲ್ಲಿ ಬಿಟ್ಟುಕೊಂಡು ಹೋಗುವುದು ನಮ್ಮ ನೀತಿಗೆ ಸೂಕ್ತವಾದುದಲ್ಲವೆಂದು ನಾನು ಹೇಳುತ್ತೇನೆ. ಇದು ಸಮಾಜವಾದಕ್ಕೆ ಉತ್ತಮವಾದಂಥ ಬುನಾದಿ ಆಗಲಾರದು. ಸರ್ಕಾರದವರು ಇಂತಹ ಸಂಸ್ಥೆಗಳನ್ನು ಅವರ ವಶಕ್ಕೆ ತೆಗೆದುಕೊಂಡು ಉತ್ತಮವಾದ ಆಡಳಿತವನ್ನು ಮಾಡುವುದಕ್ಕೆ ವ್ಯವಸ್ಥೆಮಾಡಬೇಕು. ಜನತೆ ಕೊಡತಕ್ಕ ಹಣ ಏನಿದೆಯೋ ಅದು ಒಬ್ಬರ ಸ್ವತ್ತು ಆಗದೆ ಜನತೆಯ

ಸ್ವತ್ತು ಆಗುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ತಾಲ್ಲೂಕು ಆಫೀಸಿನಲ್ಲಿ ಕೆಲವು ಕಾರ್ಯಕಲಾಪಗಳನ್ನು ಈಗಾಗಲೇ ಮಾಡಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ನಾನು ಹೇಳುತ್ತೇನೆ. ಮಾನ್ಯ ಮಂತ್ರಿಗಳು ಆಗಾಗ್ಗೆ ತಾವು ಹೋದಂಥ ಸ್ಥಳಗಳಲ್ಲಿ ತಾಲ್ಲೂಕು ಆಫೀಸಿಗೆ, ಸಬ್ ಡಿವಿಷನ್ ಆಫೀಸಿಗೆ, ತಮ್ಮ ಭೇಟಿಯನ್ನು ಕೊಟ್ಟು ಎಲ್ಲಿ ಕಾಗದ ಪತ್ರಗಳು ನಿಂತಿವೆಯೋ ಅವುಗಳನ್ನು ಅವರು ಕೂಲಂಕಷವಾಗಿ ವಿಮರ್ಶೆ ಮಾಡಿ ಏತಕ್ಕಾಗಿ ಅವನ್ನು ಆ ಗುಮಾಸ್ತ ನಿಲ್ಲಿಸಿದ್ದಾನೆ, ತಹಸೀಲ್‌ದಾರರು ನಿಲ್ಲಿಸಿದ್ದಾರೆಂಬುದನ್ನು ಕಂಡುಹಿಡಿದು ಸ್ಥಳದಲ್ಲಿಯೇ ಹುಕುಂ ಕೊಡತಕ್ಕಂಥ ಶಿಕ್ಷೆ ವಿಧಿಸುವಂಥ ಒಂದು ಕಾರ್ಯ ನಡೆಯಬೇಕಾಗಿದೆ. ಬರೀ ಕೇವಲ ಲಂಚ ಹೆಚ್ಚಾಗಿದೆಯೆಂದು ಹೇಳಿಕೊಂಡು ಹೋಗುವುದು ಸರಿಯಲ್ಲ. ಮಾನ್ಯ ಮಂತ್ರಿಗಳು ಕೆಲವರು ಆ ರೀತಿ ಹೇಳಿದ್ದಾರೆ. ಆದ್ದರಿಂದ ಮಂತ್ರಿಗಳು ಸ್ಥಳದಲ್ಲಿಯೇ ಹೋಗಿ ವಿಚಾರಗಳನ್ನು ಖುದ್ದಾಗಿ ತಿಳಿದು ಪರಿಹಾರ ಕೊಡುವುದು ತಪ್ಪಿತಸ್ಥ ಅಧಿಕಾರಿಗಳಿಗೆ ಶಿಕ್ಷೆಯನ್ನು ವಿಧಿಸುವುದು, ಈ ವಿಚಾರವಾಗಿ ಬಹಳ ತೀವ್ರವಾದ ಕೆಲಸಕಾರ್ಯಗಳು ಆಗಬೇಕೆಂದು ಹೇಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಸದಸ್ಯರು ಧರ್ಮಸ್ಥಳದ ಬಗ್ಗೆ ಹೇಳಿದರು ಬಳ್ಳಾರಿ ಜಿಲ್ಲೆಯಲ್ಲಿರುವ ಕುಮಾರಸ್ವಾಮಿ ದೇವಸ್ಥಾನದ ಬಗ್ಗೆ ಅದೇ ರೀತಿ ಮಾಡಲು ತಾವು ಒಪ್ಪುತ್ತೀರಾ ?

ಶ್ರೀ ಬಿ. ಬೈರಪ್ಪಾಜಿ.—ಈಗ ಈ ದೇವಸ್ಥಾನಗಳು ಯಾರೋ ಒಬ್ಬರ ಸ್ವತ್ತಾಗಿ ಯಾರೋ ಒಬ್ಬರ ಪೂಜೆಯ ಹಿಡಿತದಲ್ಲಿರತಕ್ಕವುಗಳೆಲ್ಲಾ ಹೋಗಬೇಕು.

1-30 P.M.

ಇನ್ನು ಈಗ ದೇಶದಲ್ಲಿ ಲಂಚರುಷವತ್ತುಗಳು ಹೆಚ್ಚುತ್ತಿವೆ. ಇವಕ್ಕೆ ನಾವೂ ಸ್ವಲ್ಪ ಕಾರಣ ಕರ್ತರೆ. ಅದಕ್ಕಾಗಿ ನಮ್ಮ ಸರ್ಕಾರ ಈಗ ಸ್ವಲ್ಪ ಬಿಗಿಯಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗಿದೆ. ಈ ದಿವಸ ಒಬ್ಬ ರೈತ ತನ್ನ ಜಮೀನಿನ ಖಾತೆ ಬದಲಾವಣೆಗೆ ಒಂದು ಅರ್ಜಿಯನ್ನು ಕೊಟ್ಟರೆ ಆತನು ಅದಕ್ಕೆ ಎಂಟಾಣೆ ಸ್ಟಾಂಪನ್ನು ಹಾಕಬೇಕು. ಆ ಅರ್ಜಿಗೆ ಆ ಕೆಲಸವಾಗದಿದ್ದರೆ ಮತ್ತೆ ಮತ್ತೆ ಆ ರೈತನಿಗೆ ಅರ್ಜಿಕೊಡೆಂದು ಕೇಳುತ್ತಾರೆ. ಹೀಗಾಗಿ ಅವನು ಆ ಒಂದು ಖಾತೆ ಬದಲಾವಣೆಗೆ ಹತ್ತಾರು ಅರ್ಜಿಗಳನ್ನು ಕೊಡಬೇಕಾಗುತ್ತದೆ. ಅಂದರೆ ಆ ಹತ್ತಾರು ಅರ್ಜಿಗಳಿಗೂ ಎಂಟಾಣೆ ಪ್ರಕಾರ ಸ್ಟಾಂಪನ್ನು ಅಂಟಿಸಲೇಬೇಕು. ಇದರಿಂದ ಆ ರೈತನಿಗೆಷ್ಟು ತೊಂದರೆ ಮತ್ತು ಕಾಲವಿಳಂಬವಾಯಿತು ? ಇದಕ್ಕೇನೂ ಒಂದು ಇತಿಮಿತಿ ಇಲ್ಲವೇ ? ಇದನ್ನು ಕೂಡಲೆ ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಈ ರೆವಿನ್ಯೂ ಖಾತೆಯನ್ನು ವಹಿಸಿಕೊಂಡಿರತಕ್ಕ ಮಾನ್ಯ ಮಂತ್ರಿಗಳೇನಿದ್ದಾರೆ ಅವರು ಇನ್ನೂ ಈಗತಾನೆ ಹೊಸದಾಗಿ ಈ ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಆದರೂ ಅವರಿಗೆ ಆಡಳಿತದಲ್ಲಿ ಹೆಚ್ಚಿನ ಅನುಭವ ಇರುತ್ತದೆ. ಅವರು ಸ್ವಯಂ ಅನುಭವಶಾಲಿಗಳು, ಒಳ್ಳೇ ರಾಜಕಾರಣಿಗಳು ರೈತವರ್ಗದಲ್ಲಿ ಹುಟ್ಟಿದವರು. ರೈತರ ಕಷ್ಟಸುಖಗಳೇನೆಂಬುದನ್ನು ಇವರು ಚೆನ್ನಾಗಿ ಅರಿತಿದ್ದಾರೆ. ಇಂಥವರ ಕೈಗೆ ಈ ಇಲಾಖೆ ಸಿಕ್ಕಿದ್ದು ನಮ್ಮೆಲ್ಲರ ಪುಣ್ಯ. ಇವರು ಒಳ್ಳೆಯ ಪರಿಣತರೂ ಹೌದು. ಇವರ ಕಾರ್ಯದಕ್ಷತೆ ಇನ್ನೂ ಹೆಚ್ಚಬೇಕು. ನಿಮ್ಮ ಆಡಳಿತ ಕಾಲದಲ್ಲಿ ರೈತವರ್ಗಕ್ಕೆ ಅಧಿಕಾರಿಗಳಿಂದ ಆಗುತ್ತಿರುವ ಕಿರುಕುಳ ತಪ್ಪಿಸುವುದಕ್ಕೆ ಸೂಕ್ತ ಕ್ರಮಗಳನ್ನು ಕೈಗೊಳ್ಳುತ್ತಾರೆಂದು ನಾನು ನಂಬಿದ್ದೇನೆ. ಇವರಿಂದ ನಾನು ಇನ್ನೂ ಅನೇಕ ಪ್ರಗತಿಪರವಾದ ಶಾಸನಗಳು ಜಾರಿಗೆ ಬರಲೆಂದು ಆಶಿಸುತ್ತೇನೆ. ಇವರು ಮೊನ್ನೆ ಮಂಡಿಸಿದ್ದ ಗೇಣೀಶಾಸನದಿಂದ ಅನೇಕ ಗೇಣೀದಾರರಿಗೆ ಆಗುತ್ತಿದ್ದ ಕಿರುಕುಳ ಎಷ್ಟೋ ಕಡಿಮೆಯಾಗಿದೆ. ಅದೇ ರೀತಿ ಬಹು ಬೇಗ ಆ ಭೂಸುಧಾರಣೆಯ ಕಾನೂನನ್ನೂ ಕೂಡ ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ. ದೇಶದಲ್ಲಿರತಕ್ಕ ಕೋಟ್ಯಾಂತರ ರೈತರ ಕಷ್ಟಕಾರ್ಪಣ್ಯಗಳು ನಿವಾರಣೆ ಆಗತಕ್ಕ ಶಾಸನಗಳನ್ನು ತಂದು ಅದರಲ್ಲಿ ಅವರು ಸಂಪೂರ್ಣ ಯಶಸ್ವಿಗಳಾಗಲೆಂದು ಹಾರೈಸಿ ಈ ಎಲ್ಲಾ ಡಿಮ್ಯಾಂಡುಗಳಿಗೂ ನನ್ನ ಬೆಂಬಲವನ್ನು ಕೊಟ್ಟು ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಕೆ. ಪ್ರಭಾಕರ್ (ವರ್ತೂರು).—ಮಾನ್ಯ ಅಧ್ಯಕ್ಷರೇ, ರೆವಿನ್ಯೂ ಡಿಮಾಂಡಿನಲ್ಲಿರತಕ್ಕ ವಿಚಾರಗಳನ್ನು ಸಮರ್ಥನೆ ಮಾಡುತ್ತ ಸರ್ಕಾರದ ಗಮನಕ್ಕೆ ಕೆಲವಾರು ವಿಚಾರಗಳನ್ನು ತರಬೇಕೆಂದು ಬಯಸುತ್ತೇನೆ. ರೆವಿನ್ಯೂ ಬಾಬಿನಲ್ಲಿ ಮಾತನಾಡುವಾಗ, ರೆವಿನ್ಯೂ ಬಿಲ್ ನಮ್ಮ ಮುಂದೆ ಬರಬೇಕಾಗಿರುವುದರಿಂದ ಹೆಚ್ಚಿನ ಅವಕಾಶ ಆವಾಗ ಇರುತ್ತದೆ ಎನ್ನುವ ನಂಬಿಕೆ ಇದೆ.

(ಶ್ರೀ ಕೆ. ಪ್ರಭಾಕರ್)

ಆದರೂ ಕೂಡ ಜಮೀನು ಎಷ್ಟಿದೆ ಎಂದು ಕಂಡುಹಿಡಿಯುವುದಕ್ಕೆ ಸರ್ಕಾರದ ಕೈಯಲ್ಲಿ ಆಗಿಲ್ಲ ಎನ್ನುವುದನ್ನು ಅನೇಕ ಸದಸ್ಯರು ತಿಳಿಸಿದ್ದಾರೆ. ಸರ್ಕಾರದವರು ಕೊಡತಕ್ಕ ಎಲ್ಲಾ ಬಾಬಿನಿಂದಲೂ ಎಷ್ಟು ಜಮೀನಿದೆ ಎಂದು ತಿಳಿಸುವುದಕ್ಕೆ ಸಾಧ್ಯವಿಲ್ಲವೇನೋ ಎನ್ನುವ ಶಂಕೆ ಮಾಯವಾಗಿಲ್ಲ. ಆದರೂ ಕೂಡ ಸರ್ಕಾರಿ ಭೂಮಿಗಳು ಬರುವುದರ ಜೊತೆಗೆ ಇನ್ನೂ ಕೆಲವು ಭೂಮಿಗಳನ್ನು ಸೇರಿಸಿಕೊಳ್ಳಬೇಕು ಎಂದು ನಾನು ಸಲಹೆ ಮಾಡುತ್ತೇನೆ. ಅದರಲ್ಲಿ ಅಮೃತಮಹಲ್ ಕಾವಲ್ ಭೂಮಿ, ಅಬ್ಯಾಂಡನ್ಡ್ ಟ್ಯಾಂಕ್ ಬೆಡ್ಡ್, ಗುಂಡು ತೋಪು, ಬರಿಯಲ್ ಗ್ರೌಂಡ್, ಎಕ್ಸ್‌ಟ್ರಸ್ ಖರಾಬು, ಸರೆಂಡರ್ಡ್ ಫಾರೆಸ್ಟ್ ಲ್ಯಾಂಡ್ ಇವುಗಳನ್ನು ರೆವೆನ್ಯೂ ಭೂಮಿ ಜೊತೆಗೆ ತೆಗೆದುಕೊಂಡಿಲ್ಲ. ಅಲ್ಲದೆ ಡಿಸ್‌ಓನ್ಡ್ ಟೆಂಪಲ್ ಲ್ಯಾಂಡ್ಸ್, ಯಾರದೋ ಕಾಲದಲ್ಲಿ ದೇವಸ್ಥಾನವಿದ್ದು, ಆಗ ಕೊಟ್ಟಿರತಕ್ಕಂಥ ಜಮೀನುಗಳು ಅನೇಕವಿವೆ. ಅದನ್ನೂ ಸೇರಿಸಬೇಕು. ಹಕ್ಕುದಾರರಿಲ್ಲದೆ ಇರುವ ಆಸ್ತಿಪಾಸ್ತಿಗಳನ್ನೂ ಜನರಲ್ ಲ್ಯಾಂಡ್‌ನಲ್ಲಿ ಸೇರಿಸಿಕೊಂಡು ಭೂಮಿಯನ್ನು ಹಂಚಬೇಕು. ಈ ಜಮೀನುಗಳನ್ನೆಲ್ಲ ಸೇರಿಸಿಕೊಂಡು ಲ್ಯಾಂಡ್ ಸೀಲಿಂಗ್ ಇನ್ನೂ ನಿಗದಿಯಾಗದೆ ಇರುವುದರಿಂದ, ಸೀಲಿಂಗಿಗಿಂತ ಹೆಚ್ಚಾಗಿರುವ ಭೂಮಿಯನ್ನು ಒಂದು ಪೂಲಿಗೆ ಸೇರಿಸಿಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ. ಅಲ್ಲದೆ ಆಬ್ಸೆಂಟೀ ಲ್ಯಾಂಡ್ ಲಾರ್ಡ್ ಎಷ್ಟು ದೂರದಲ್ಲಿದ್ದರೆ ಬೇಸಾಯ ಮಾಡುವುದಕ್ಕೆ ಆಗುವುದಿಲ್ಲ, ಅಂಥ ಜಮೀನನ್ನು ಕೂಡ ಪೂಲ್‌ಗೆ ಸೇರಿಸಿಕೊಳ್ಳಬೇಕು.

ಎರಡನೆಯದಾಗಿ ಸರ್ವೇ ಸೆಟಲ್‌ಮೆಂಟ್ಸ್, ಲ್ಯಾಂಡ್ ರಿಫಾರ್ಮ್ಸ್ ಮತ್ತು ಕನ್‌ಸಾಲಿಡೇಷನ್ ಆಫ್ ಹೋಲ್ಡಿಂಗ್ಸ್ ಬಗ್ಗೆ ಒಂದಂಶವನ್ನು ಹೇಳಬೇಕಾಗಿದೆ. ರೆವೆನ್ಯೂ ಇಲಾಖೆಯಲ್ಲಿ ಅನೇಕರಿಗೆ ಸಿಕ್ಕಬೇಕಾದ ಹುದ್ದೆಗಳು ಸಿಕ್ಕಿಲ್ಲ. ತತ್ರಾಪಿ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಟ್ರೈಬ್ಸ್ ಜನರಿಗೆ ಸಿಕ್ಕಬೇಕಾದ ಹುದ್ದೆಗಳು ಸಿಕ್ಕಿಲ್ಲ. ಅನೇಕ ಹುದ್ದೆಗಳು ಖಾಲಿ ಇವೆ ಎಂದು ಗೊತ್ತಾಗಿದೆ. ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಸರ್ಪ್ಲಸ್ ಹೋಲ್ಡರ್ಸ್ ಎನ್ನುವವರು 1553 ಮಂದಿ ಇದ್ದಾರೆ, ಡಿಕ್ಲರೇಷನ್ ಫೈಲ್ ಮಾಡಿಲ್ಲ ಎಂದು ಹೇಳುತ್ತಾರೆ. ಇರುವ ಭೂಮಿಯನ್ನು ಎಲ್ಲರಿಗೂ ಹಂಚಿ ಕೈ ತೊಳೆದುಕೊಳ್ಳುವುದಕ್ಕೆ ಮುಂಚೆಯೇ ಡಿಕ್ಲೇರ್ ಮಾಡಿ ಅವರ ಜವಾಬ್ದಾರಿಯನ್ನು ಕೈ ಬಿಡಬೇಕೆಂದು ಸಲಹೆ ಮಾಡುತ್ತಿದ್ದೇನೆ.

ಮೇಜರ್ ಇನಾಂಗಳನ್ನು ರಿಸ್ಯೂಂ ಮಾಡಿ ರಿಜಿಸ್ಟರ್ ಮಾಡಿಕೊಳ್ಳುವುದಕ್ಕೆ ಸರ್ಕಾರದವರು ಕಾಲಾವಕಾಶ ಕೊಟ್ಟಿದ್ದಾರೆಂದು ರಿಪೋರ್ಟಿನಲ್ಲಿ ಹೇಳಿದ್ದಾರೆ. ತೋಟಿ ತಳವಾರರು, ಮೈನರ್ ಇನಾಂಸ್ ಇರುವವರಿಗೂ ಕಾಲದ ಅವಕಾಶ ಕೊಡುವುದಕ್ಕೆ ಸರ್ಕಾರ ಮನಸ್ಸು ಮಾಡಬೇಕಾಗಿತ್ತು. ಈ ವರ್ಗದವರಿಗೂ ಕೂಡ ಹೆಚ್ಚು ಕಾಲಾವಕಾಶವನ್ನು ಕೊಡಬೇಕು. ತೋಟಿ ತಳವಾರರು ತಿಳಿಯದೆ ಇರುವ ಜನ, ಅಕ್ಷರಸ್ಥರಲ್ಲ. ತಾಲ್ಲೂಕು ಆಫೀಸುಗಳಿಂದ ಈ ಜನರಿಗೆ ನೋಟೀಸ್ ಕೊಟ್ಟು ಅವರವರ ಜಮೀನುಗಳನ್ನು ಅವರವರ ಹೆಸರಿನಲ್ಲಿ ಮಾಡಿಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು. ಪ್ರತಿ ತಾಲ್ಲೂಕು ಆಫೀಸಿನಲ್ಲಿಯೂ ಮೈನರ್ ಇನಾಂಗಳ ಹಕ್ಕು ಇರುವವರಿಗೇ ಜಮೀನು ಕೊಡುವಂಥ ಅಧಿಕಾರವನ್ನು ತಹಸೀಲ್ದಾರರಿಗೆ ಕೊಡಬೇಕು ಎಂದು ಹೇಳುತ್ತೇನೆ.

ಅನಧಿಕೃತ ಸಾಗುವಳಿ ಬಗ್ಗೆ ಹೇಳಬೇಕು ಎಂದರೆ, ಕಾನೂನು ಬಾಹಿರವಾಗಿ ಮಾಡಿರುವ ಒಂದು ಕೆಲಸವನ್ನು ಕಾನೂನು ಬದ್ಧವಾಗಿ ಸರಿಪಡಿಸುವುದು ಎಂದು ಹೇಳಬೇಕಾಗುತ್ತದೆ. ಅದು ನಿರ್ವಿವಾದವಾದ ವಿಚಾರ. ಇದರಲ್ಲಿ ಅನೇಕ ಕಮೀಮರು ಭೂಮಿಯನ್ನು ತೆಗೆದುಕೊಂಡಿರುತ್ತಾರೆ. ಇಂಥ ಜಮೀನನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡು ಜಮೀನಿಲ್ಲದವರಿಗೆ ಮತ್ತು ಇನ್‌ಸಫಿಷಿಯೆಂಟ್ ಹೋಲ್ಡರ್ಸ್‌ಗೆ ಕೊಡಬೇಕು ಎಂದು ಸೂಚನೆ ಮಾಡುತ್ತಿದ್ದೇನೆ.

ರಿಕಾರ್ಡ್ ಆಫ್ ರೈಟ್ಸ್ ಅಪ್ ಟು ಡೇಟಾಗಿ ಇಲ್ಲದೆ ಇದ್ದರೆ ಲ್ಯಾಂಡ್ ರಿಫಾರ್ಮ್ಸ್ ಫಲಪ್ರದವಾಗಿ ಮಾಡುವುದಕ್ಕಾಗುವುದಿಲ್ಲ ಎನ್ನುವುದನ್ನು ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಅಪ್ ಟು ಡೇಟಾಗಿ ಆಗಿರಬಹುದು ಎನ್ನುವ ಕಲ್ಪನೆ ಒಳ್ಳೆಯದಲ್ಲ. ಕೆಲವು ಕಡೆ ಮಾಡಿರಬಹುದು, ಕೆಲವು ಕಡೆ ಮಾಡದೆ ಇರಬಹುದು. ಎಲ್ಲ ಕಡೆಗಳಲ್ಲಿಯೂ ಭೂಸುಧಾರಣೆ ಜಾರಿಗೆ ತರುವುದಕ್ಕೆ ಮೊದಲೇ ರಿಕಾರ್ಡ್ ಆಫ್ ರೈಟ್ಸ್ ಆಫ್ ಟು ಡೇಟ್ ಆಗಿ ಇರಬೇಕು. ಎಷ್ಟೇ ಖರ್ಚಾಗಲೀ, ಎಷ್ಟೇ ಎಂಪ್ಲಾಯ್‌ಮೆಂಟ್ ಇನ್‌ವಾಲ್ವ್ ಆಗಲೀ ಇದನ್ನು ಮಾಡದೆ ಇದ್ದರೆ ಬಹಳ ತೊಂದರೆಯಾಗುತ್ತದೆ ಎಂದು ಸಲಹೆ ಮಾಡುತ್ತೇನೆ. ಇದನ್ನು ಸರ್ಕಾರದವರು ಕೂಡಲೇ ಮಾಡಬೇಕು.

ಅನೇಕ ಕಡೆ ಜಮೀನು ಮಾಲೀಕರು ಅವರ ಕುಟುಂಬದವರು ಸತ್ತಾಗ ಅಲ್ಲಿ ಗೋರಿ ಮಾಡುವುದು, ಗುಂಡು ತೋಪು ಬೆಳೆಸುವುದು, ಮಂಟಪ ಕಟ್ಟಿಸುವುದು, ಬಾವಿ ತೆಗೆಸುವುದು, ಛತ್ರ ಕಟ್ಟಿಸುವುದು ಹೀಗೆಲ್ಲ ರೂಲ್ಸ್‌ಗೆ ವಿರೋಧವಾಗಿ ಮಾಡಿದ್ದಾರೆ. ಇದಕ್ಕೆ ಹೇಳುವವರು, ಕೇಳುವವರು ಇಲ್ಲ ವಾಗಿದೆ. ಇದರ ಬಗ್ಗೆ ಸೂಕ್ತ ಕ್ರಮವನ್ನು ಸರ್ಕಾರದವರು ತೆಗೆದುಕೊಳ್ಳಬೇಕು.

ವಲ್ನರಬಲ್ ಸೆಕ್ಷನ್ನಿಗೆ ಅನ್ನ ಹಾಕುವ ಬಗ್ಗೆ ಬರಗಾಲದ ಆರ್ಡರ್ ಮಾಡಿದ್ದಾರೆ. ಈ ಕೆಲಸವನ್ನು ಮಾಡುವಾಗ ಸರ್ಕಾರದಿಂದ ಕೊಡುವ ದುಡ್ಡು ಯಾರ ಬಾಯಿಗೋ ಹೋಯಿತು ಎನ್ನುವಂತಾಗುತ್ತಿದೆ. ಈ ಹಣ ಸರಿಯಾಗಿ ಖರ್ಚಾಗುವ ರೀತಿಯಲ್ಲಿ ಒಂದು ವಿಜಿಲೆನ್ಸ್ ಸೆಲ್ ಎಂದು ಮಾಡಿ ಬಡವರ ಹೆಸರು ಹೇಳಿ ಕೊಡುವಂಥ ಸಹಾಯ ಬಡವರಿಗೇ ಹೋಗುವ ಹಾಗೆ ಮಾಡಬೇಕು. ಕೊಡುವ ಹಣ ಸದ್ವಿನಿಯೋಗ ಆಗುವ ಹಾಗೆ ಮಾಡಬೇಕೆಂದು ಹೇಳುತ್ತೇನೆ.

ಜಮೀನನ್ನು ಬಡವರಿಗೆ ಕೊಡುವಾಗ 10-15 ವರ್ಷ ಕಾಲ ಯಾರಿಗೂ ಪರಭಾರೆ ಮಾಡ ಬಾರದೆಂದು ಒಂದು ನಿರ್ಬಂಧ ಹಾಕಿರುತ್ತಾರೆ. ಇಂಥ ಜಮೀನುಗಳನ್ನು ಯಾರು ಯಾರೋ ಕೊಂಡುಕೊಂಡಿದ್ದರೂ ಸರ್ಕಾರ ಸುಮ್ಮನೆ ಕಾಳಿತಿದೆ. ಇಷ್ಟು ದಿವಸ ಪರಭಾರೆ ಮಾಡಬೇಡಿ ಎಂದು ಇದ್ದರೂ ಹಣವಂತರು ಅಂಥ ಜಮೀನನ್ನು ತೆಗೆದುಕೊಂಡಿರುವುದರಿಂದ ಬಡವರು ಜಮೀನು ಕಳೆದುಕೊಂಡು ಜೀತಕ್ಕೆ ಸಿಕ್ಕಿ ಹಾಳಾಗುತ್ತಿದ್ದಾರೆ. ಈ ರೀತಿ ಪರಭಾರೆಯಾಗಿರುವಂಥ ಎಷ್ಟು ಜಮೀನನ್ನು ಸರ್ಕಾರದವರು ವಶಪಡಿಸಿಕೊಂಡಿದ್ದಾರೆ ? ಪೋಲೀಸಿನವರು ಹೇಳುವ ಹಾಗೆ ಒಂದು ಕೇಸೂ ನಮ್ಮ ಗಮನಕ್ಕೆ ಬಂದಿಲ್ಲವೆಂದು ಸರ್ಕಾರದವರು ಇನ್ನು ಮುಂದೆ ಆದರೂ ಹೇಳಬಾರದು.

ಕಲ್ಯಾಣ ಮಂಟಪವನ್ನು ಕಟ್ಟಿಸುವ ವಿಚಾರ ಪ್ರಸ್ತಾಪ ಮಾಡಿದ್ದಾರೆ. ಅದು ಒಳ್ಳೆಯ ಕೆಲಸ. ಸೆಕ್ಯುಲರ್ ಸ್ಟೇಟ್ ಎಂದರೆ ದೇವಸ್ಥಾನಗಳನ್ನು ನೆಲಸಮ ಮಾಡಬೇಕು ಎನ್ನುವ ಮಟ್ಟಕ್ಕೆ ನಮ್ಮ ದೇಶ ಹೋಗಬಹುದು. ದೇವಸ್ಥಾನಗಳು ಸಾಂಸ್ಕೃತಿಕ ಮತ್ತು ವಿದ್ಯಾ ಕೇಂದ್ರಗಳಾಗ ಬೇಕು ಎಂದು ಹೇಳಿದ್ದಾರೆ. ಕಲ್ಯಾಣ ಮಂಟಪ, ಪ್ರಾರ್ಥನಾ ಮಂದಿರ, ಸಭಾಂಗಣಗಳು, ವಿದ್ಯಾ ಮಂದಿರಗಳು, ಹಾಸ್ಟಲುಗಳು ಇವೆಲ್ಲ ಇರಲಿ, ಯಾರೂ ಬೇಡವೆನ್ನುವುದಿಲ್ಲ.

ಸರ್ಕಾರಿ ಅಧಿಕಾರಿಗಳು ಸಾಲ ತೆಗದುಕೊಳ್ಳುವಾಗ ಅವರಿಗೆ ಸ್ಟಾಂಪ್ ಡ್ಯೂಟಿ ರದ್ದು ಮಾಡಬೇಕು ಎಂದು ಆಜ್ಞೆ ಮಾಡಿದ್ದಾರೆ. ಯೂನಿವರ್ಸಿಟಿ ಪ್ರಾಪರ್ಟಿ ಇದ್ದರೆ ಲೆಕ್ಚರರುಗಳು ಕಡಮೆ ಸಂಬಳ ಬರುವವರು ಮನೆಗಳನ್ನು ಕಟ್ಟಿಸಿದಾಗ ಬೇಕಾದರೆ ಅವರ ವಿಚಾರದಲ್ಲಿ ಸ್ಟಾಂಪ್ ಡ್ಯೂಟಿ ರದ್ದು ಮಾಡಿ. ಇಲ್ಲದೆ ಹೋದರೆ ಯೂನಿವರ್ಸಿಟಿ ಕೊಡಲಿ. ಅವರಿಗೇನೂ ಬಡತನವಿಲ್ಲ.

ಸರ್ಕಾರಿ ಅಧಿಕಾರಿಗಳಿಗೆ ಸ್ಟಾಂಪ್ ಡ್ಯೂಟಿಯಿಂದ ವಿನಾಯಿತಿ ಕೊಡುವ ಬಗ್ಗೆ ಒಂದು ಮಾತು ಹೇಳುತ್ತೇನೆ. 500 ರೂಪಾಯಿಗಳಿಗಿಂತ ಕಡಮೆ ಸಂಬಳ ಬರುವವರಿಗೆ ವಿನಾಯಿತಿ ಕೊಡಿ. ಫ್ಲ್ಯಾಟ್ ಸ್ಯಾಲರಿ ಇರುವವರಿಗೆ, ಹೆಚ್ಚು ಸಂಬಳ ಬರುವವರಿಗೆ ಕೊಡಬೇಕಾದ ಅವಶ್ಯಕತೆ ಇಲ್ಲ ಎಂದು ಹೇಳುತ್ತೇನೆ. ಇನ್ನು ಷೆಡ್ಯೂಲ್ಡ್ ಕ್ಯಾಸ್ಟಿನವರಿಗೆ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ ಅಷ್ಟೊಂದು ಜಮೀನುಗಳನ್ನು ಹಂಚಿದ್ದೇವೆ, ಇಷ್ಟೊಂದು ಜಮೀನುಗಳನ್ನು ಹಂಚಿದ್ದೇವೆ ಎಂಬುದೆಲ್ಲಾ ಬರಿ ಕಾಗದದಮೇಲೆ ಇರುತ್ತದೆಯೇ ವಿನಹ ಕಾರ್ಯತಃ ಅದು ಯಾವುದೂ ನಡೆದಿಲ್ಲ. ಇವರಿಗೆ ಜಮೀನು ಸಿಕ್ಕಿಲ್ಲ. ಆದುದರಿಂದ ಹಾಲಿ ಉಳುಮೆಗೆ ಲಗತ್ತಾದ ಭೂಮಿ ಎಲ್ಲೆಲ್ಲಿ ಬಿಡುಗಡೆ ಮಾಡು ವುದಕ್ಕೆ ಸಾಧ್ಯವಿದೆಯೋ ಅಲ್ಲೆಲ್ಲಾ ಆ ಜಮೀನಿನಲ್ಲಿ ಶೇಕಡ 60ರಷ್ಟು ಭೂಮಿಯನ್ನು ಹರಿಜನರಿಗೆ ಮತ್ತು ಗಿರಿಜನರಿಗೆ ರಿಜರ್ವ್ ಮಾಡಬೇಕೆಂದು ಒತ್ತಾಯಮಾಡುತ್ತೇನೆ. ಇನ್ನು ಇವರಿಗೆ ಆ ಭೂಮಿ ಗಳನ್ನು ಹಂಚುವಾಗ ಹಾಲಿ ಇರತಕ್ಕ ನಿರ್ಬಂಧಗಳೇನಿವೆಯೋ ಅವುಗಳ ಜೊತೆಗೆ ಇನ್ನೂ ಕೆಲವು ಹೆಚ್ಚಿಗೆ ನಿರ್ಬಂಧಗಳನ್ನು ವಿಧಿಸಬೇಕು. ಅವು ಯಾವುವೆಂದರೆ ಹರಿಜನ ಗಿರಿಜನರಿಗೆ ಕೊಡತಕ್ಕ ಭೂಮಿಗಳೇನಿವೆ ಅವು ನಾನ್‌ಏಲಿಯನಬಲಿಟಿ ಕ್ಲಾಜ್ ಒಂದನ್ನೂ ಮತ್ತು ನಾನ್ ಟ್ರಾನ್ಸ್‌ಫರಬಲ್ ಕ್ಲಾಜ್ ಒಂದನ್ನು ಮತ್ತು ನಾಟ್ ಪರ್ಚೇಸಬಲ್ ಅಂತ ಒಂದು ಕ್ಲಾಜನ್ನೂ ಸೇರಿಸಿದರೇನೇ ಆ ಭೂಮಿ ಈ ಜನರಲ್ಲಿ ಉಳಿಯುತ್ತದೆ ಇಲ್ಲದಿದ್ದರೆ ಇಲ್ಲ. ಈ ದಿವಸ ಆ ರೈಲ್ವೆ ಇಲಾಖೆಯ ಸ್ವತ್ತನ್ನು ಅಂದರೆ ಕಂಬಿ ಅಥವಾ ಸ್ಲೀಪರನ್ನು ಆ ಇಲಾಖೆಯವರು ಯಾರಿಗಾದರೂ ಮಾರಾಟ ಮಾಡಿದ್ದರೆ ಅದು ಇಲಾಖೆಯವರ ಗಮನಕ್ಕೆ ಬಂದಾಗ ಅವರು ಆ ಸಾಮಾನುಗಳನ್ನು ಕೊಂಡ ಜನರಿಂದ ವಾಪಸ್ ಕಿತ್ತುಕೊಳ್ಳುವುದಲ್ಲದೆ ಅವರಮೇಲೆ ಕೇಸ್ ಹಾಕಿ ಅವರನ್ನು ಶಿಕ್ಷೆಗೂ ಗುರಿಪಡಿಸುತ್ತಾರೆ. ಏಕೆ ಸರ್ಕಾರದವರು ಹೀಗೆ ಒಂದೊಂದು ಇಲಾಖೆಗೆ ಒಂದೊಂದು ರೀತಿಯ ಟ್ರಾನ್ಸ್‌ಫರಬಲ್ ಆಕ್ಟನ್ನು ಮಾಡಿದರು ? ಈ ಹರಿಜನರಿಗೆ ಭೂಮಿಯನ್ನು ಹಂಚತಕ್ಕ ಸಂದರ್ಭದಲ್ಲೂ ಇಂಥ ಒಂದು ಆಕ್ಟನ್ನು ಮಾಡಿದರೇನೇ ಇವರಲ್ಲಿ ಭೂಮಿ ಉಳಿಯುತ್ತದೆ ಇಲ್ಲದಿದ್ದರೆ ಇಲ್ಲ.

ಇನ್ನು ತೋಟ ತಳವಾರರ ವಿಚಾರಕ್ಕೆ ಬಂದರೆ ಅವರ ಸರ್ವೀಸೂ ಹೋಯಿತು ಅವರ ಸರ್ವೀಸ್ ಲ್ಯಾಂಡುಗಳೂ ಹೋದವು. ಅಂತೂ ಅವರೆಲ್ಲರ ಅದೃಷ್ಟ ನಿರ್ನಾಮವಾಯಿತು. ಆದರೆ ಈ

(ಶ್ರೀ ಕೆ. ಪ್ರಭಾಕರ್)

ಸಂದರ್ಭದಲ್ಲಿ ಯಾರಿಗೆ ಉಳುವುದಕ್ಕೆ ಭೂಮಿ ಇಲ್ಲವೋ ಯಾರು ಭೂಮಿಯನ್ನು ಅಕ್ರಮವಾಗಿ ಉಳುವುದಕ್ಕೆ ಭೂಮಿ ಇಲ್ಲದೆ ಸಾಗುವಳಿ ಮಾಡುತ್ತಿದ್ದಾರೋ ಅಂಥವರಿಗೆಲ್ಲಾ ಅವರು ಯಾವ ಜಾತಿಯವರೇ ಆಗಿರಲಿ ಅವರವರ ವಶದಲ್ಲಿರತಕ್ಕ ಜಮೀನನ್ನು ಅವರವರಿಗೇ ಉಚಿತವಾಗಿ ಪಟ್ಟಿ ಇಟ್ಟುಕೊಡಬೇಕೆಂದು ಹೇಳುತ್ತೇನೆ. ಹೀಗೆ ಮಾಡಿ ಆ ಅನ್‌ಆಥರೈಜ್ಡ್ ಭೂಮಿಯನ್ನು ಆಥರೈಜ್ಡ್ ಭೂಮಿಯನ್ನಾಗಿ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಇನ್ನು ಆಡಳಿತದ ವಿಚಾರಕ್ಕೆ ಬಂದರೆ ರೆವಿನ್ಯೂ ಇಲಾಖೆ ಮೊದಲಿನಿಂದಲೂ ಅಡ್ಮಿನಿಸ್ಟ್ರೇಟೀವ್ ಗ್ರಿಟ್ಟಿಗೆ ಹೆಸರಾದ್ದು, ಹಾಗೇ ಆನೆಸ್ಟಿಗೆ ಗ್ರಿಟ್ಟಾದ್ದು ಎಜುಕೇಷನ್ ಇಲಾಖೆ. ಆದರೆ ಇತ್ತೀಚೆಗೆ ರೆವಿನ್ಯೂ ಇಲಾಖೆಯ ಆಡಳಿತದಲ್ಲಿ ಆ ಗ್ರಿಟ್ ತಪ್ಪಿಹೋಗಿದೆ. ಈ ಇಲಾಖೆಯಲ್ಲಿ ಏನೋ ಕೆಲಸ ಮಾಡಿಸಿಕೊಳ್ಳೋಣವೆಂದು ಅಲ್ಲಿಗೆ ಹೋಗತಕ್ಕ ರೈತರ ಗೋಳು ಆ ಹತ್ತಿಮರದ ಹಾಲಿನ ಅಂಟಿಗೂ ಮತ್ತು ಹಲಸಿನ ಕಾಯಿನಲ್ಲಿ ಬರತಕ್ಕ ಅಂಟಿಗೂ ಸಿಕ್ಕಿ ಆ ನೊಣಗಳು ಒದ್ದಾಡುವಂತೆ ಈ ರೈತರು ಒದ್ದಾಡುತ್ತಿದ್ದಾರೆ. ಅದಕ್ಕಾಗೇ ಜನರಿಗೆ ಈ ಇಲಾಖೆಯ ಮೇಲೆ ಎಲ್ಲರಿಗೂ ಬಹಳ ಬೇಜಾರು ಬಂದಿದೆ. ಇದಕ್ಕೆ ಸಂಬಂಧಪಟ್ಟ ಪಟೇಲ್ ಶ್ಯಾನುಭೋಗರನ್ನು ಕೆಲಸದಿಂದ ಕಿತ್ತು ಹಾಕಲಾಯಿತು. ಹಾಗೇ ಆ ಭೂ ಕಂದಾಯವನ್ನೂ ಕೂಡ ಜನರು ಹಾಕುವುದು ಬೇಡ ಎಂದರು. ಜನರಿಗೆ ಈ ಇಲಾಖೆಯ ಬಗ್ಗೆ ಇಷ್ಟು ಬೇಜಾರು ಬಂದಿದೆ. ದೇಶಕ್ಕೆ ಸ್ವಾತಂತ್ರ್ಯ ಬಂದು 25 ವರ್ಷಗಳಾದರೂ ಆ ರೈತರಿಗೆ ಅಧಿಕಾರಿಗಳಿಂದ ಇನ್ನೂ ಕಿರುಕುಳ ತಪ್ಪಲಿಲ್ಲ ಎಂದರೆ ಪ್ರಜಾಪ್ರಭುತ್ವಕ್ಕೆ ಅರ್ಥವಿಲ್ಲ. ಆ ರೆಡ್‌ಟೇಪಿಸಂ ಅನ್ನುವುದು ಇನ್ನೂ ಹೋಗಿಲ್ಲ. ಈಗ ಸೆಕ್ರೆಟೇರಿಯಟ್ಟಿನಲ್ಲಿ ರೆಡ್ ಟೇಪಿಗೆ ಬದಲಾಗಿ ವೈಟ್ ಟೇಪನ್ನು ಕಟ್ಟುತ್ತಿದ್ದಾರೆ. ಆದರೆ ನಮ್ಮ ಮಾನ್ಯ ರೆವಿನ್ಯೂ ಮಿನಿಷ್ಟ್ರು ವಿಚಾರದಲ್ಲಿ ಅಷ್ಟು ಹಗುರವಾಗಿ ಮಾತನಾಡುವುದಕ್ಕಾಗುವುದಿಲ್ಲ. ದೇವರು ಅವರಿಗೆ ಈ ದಿವಸ ಒಳ್ಳೇ ಅವಕಾಶ ಕೊಟ್ಟಿದ್ದಾನೆ. ಹಿಂದೆ ಇಂಥದೇ ಅವಕಾಶ ಸಿಕ್ಕಿದ್ದರಿಂದ ವಿಶ್ವೇಶ್ವರಯ್ಯನವರು ಕನ್ನಂಬಾಡಿ ಅಣೆಯನ್ನು ಕಟ್ಟಿಸಿದರು, ಶ್ರೀ ಹನುಮಂತಯ್ಯನವರು ವಿಧಾನಸೌಧವನ್ನು ಕಟ್ಟಿಸಿದರು. ಹಾಗೇ ತಾವೂ ಕೂಡ ಧೈರ್ಯಮಾಡಿ ತಮ್ಮ ಹೆಸರು ಚಿರಾಯುವಾಗಿ ನಿಲ್ಲತಕ್ಕ ರೀತಿಯಲ್ಲಿ ಕೆಲಸಗಳನ್ನು ಧೈರ್ಯದಿಂದ ಮಾಡಿ ಎಂದು ಸಲಹೆ ಮಾಡುತ್ತಿದ್ದೇನೆ. ಮಾನ್ಯ ರವಿನ್ಯೂ ಮಂತ್ರಿಗಳು ನಮ್ಮ ರಾಜ್ಯವನ್ನು ಈ ರೆವಿನ್ಯೂ ಬಾಬಿನಲ್ಲಿ ಒಂದು ಮಾಡಲ್ ರಾಜ್ಯವನ್ನಾಗಿ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಅವರು ಧೈರ್ಯವಾಗಿ ಹೆಜ್ಜೆ ಇಟ್ಟರೆ ಅದಕ್ಕೆ ನಾವು ಬೆಂಬಲ ಕೊಡುತ್ತೇವೆ. ಇಲಾಖೆಯಲ್ಲಿ ಚೆನ್ನಾಗಿ ಕೆಲಸ ಮಾಡತಕ್ಕವರಿಗೆ ಪ್ರೋತ್ಸಾಹ ಕೊಡಿ ಇನ್ನು ಸೋಮಾರಿಗಳಾಗಿರತಕ್ಕವರಿಗೆ ಶಿಕ್ಷೆಮಾಡಿ. ಅವರೆ ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಕೃಷ್ಣ ಪರಮಾತ್ಮನನ್ನು ಕಾಡುವುದಕ್ಕಾಗಿ ಬಂದ ಶ್ರೀ ಮಹಾರಾಜನಿಗೆ 'ನಾಳೆ ಬಾ' ಎಂದು ಹೇಳಿದಂತೆ ತಾವು ಇದರ ಕೆಲಸಗಳನ್ನು ಮಾಡಬಾರದು. ತಪ್ಪು ಮಾಡಿದ ಅಧಿಕಾರಿಗಳನ್ನು ಸೆಸ್ಪೆಂಡ್ ಮಾಡುವುದರಲ್ಲಿ ಶ್ರೀಮಾನ್ ಚನ್ನಬಸಪ್ಪನವರಿಗಿಂತ ತಾವು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಬೇಕೆಂದು ನಾನು ಹೇಳುತ್ತೇನೆ. ಇಲಾಖೆಯಲ್ಲಿರತಕ್ಕ ಕಳೆಯನ್ನು ತಾವು ವೀಡೌಟ್ ಮಾಡಿ, ತಮ್ಮ ಕಾಲದಲ್ಲಾದರೂ ಈ ರೆವಿನ್ಯೂ ಇಲಾಖೆಗೆ ಒಂದು ಹೊಸ ಕಳೆ ಬರಲಿ. ಮತ್ತು ಸೋಮಾರಿಗಳಾದ ಅಧಿಕಾರಿಗಳನ್ನು ವೀಡೌಟ್ ಮಾಡುವುದರಲ್ಲಿ ಮೊದಲ ಬೋಣಿಗೆ ಈ ರೆವಿನ್ಯೂ ಇಲಾಖೆಯಿಂದಾಗಲೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಜೈ ಹಿಂದ್.

Mr. DEPUTY SPEAKER.—The House will now rise and meet again on Monday at 12 noon. The Hon. Minister will reply on Monday and there will be no Question hour on Monday.

The House adjourned at Two of the Clock to meet again at Twelve of the Clock on Monday the 10th July 1972.